
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 25

ಐಕ್ಯರಂಗ

ರೂ. 2.00
18 ಜೂನ್ 1995



ಗೆಲುವು ನೀಡಿದ ಜನತೆಗೆ ಹಾಲಿನ ಬೆಲೆ, ನೀರಿನ ದರ ಏರಿಕೆಯ ಉಡುಗೊರೆ!

"ಮಣ್ಣಿನ ಮಗ" ದೇವೇಗೌಡರ ಆಡಳಿತ ಎತ್ತ ಸಾಗಿದೆ?

-ಎನ್.ಕೆ.ಉಪಾಧ್ಯಾಯ

ಯಲಹಂಕ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮತ ನೀಡಿದ ಮತದಾರರ ಬೆರಳಿಗೆ ಹಚ್ಚಿದ ಮಸಿ ಒಣಗುವ ಮುಂಚೆಯೇ ಜನತಾದಳದ ಅಭ್ಯರ್ಥಿ ಗೆದ್ದು ಬಂದರೆಂಬ ಸುದ್ದಿ ಹರಡುತ್ತಿರುವಾಗಲೇ "ಮಣ್ಣಿನ ಮಗ" ದೇವೇಗೌಡರ ಸರಕಾರ ಹಾಲಿನ ದರವನ್ನು, ಕುಡಿಯುವ ನೀರಿನ ದರವನ್ನು ಹೆಚ್ಚಿಸುವ ಮೂಲಕ ತಮ್ಮ ಪಕ್ಷದ ಗೆಲುವಿಗೆ ಕಾರಣೀಭೂತರಾದ ಮತದಾರರಿಗೆ ವಿಜಯದ ಉಡುಗೊರೆ ನೀಡಿದ್ದಾರೆ. ಒಂದು ತಿಂಗಳ ಹಿಂದೆ ಪಶು ಸಂಗೋಪನಾ ಇಲಾಖೆ ಮಂತ್ರಿ ಬಚ್ಚೇಗೌಡರು ಹಾಲಿನ ದರ ಲೀಟರಿಗೆ ಒಂದು ರೂಪಾಯಿ ಹೆಚ್ಚಿಸಬೇಕಾಗುತ್ತದೆಂದು ಹೇಳಿದಾಗ, ಅದರ ಪರಿಣಾಮದ ಕುರಿತು ದೀರ್ಘ ವಿಚಾರ ಅಗತ್ಯವಾಗಿರುವುದರಿಂದ ತಮ್ಮ ಅಭಿಪ್ರಾಯ ಪಡೆಯದೆ ಹಾಲಿನ ದರ ಹೆಚ್ಚಿಸುವುದಿಲ್ಲೆಂದು ದೇವೇಗೌಡರು ಹೇಳಿದ್ದರು. ಯಲಹಂಕ ಉಪಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ "ಮಣ್ಣಿನ ಮಗ" ಆ ರೀತಿ ಹೇಳಿ, ಉಪಚುನಾವಣೆಯ ಫಲಿತಾಂಶ ಪ್ರಕಟವಾದ ಕೂಡಲೇ ಹಾಲಿನ ಬೆಲೆಯನ್ನಷ್ಟೇ ಅಲ್ಲ, ನಗರಗಳಲ್ಲಿ ಕುಡಿಯುವ ನೀರಿನ ದರವನ್ನೂ ಹೆಚ್ಚಿಸಿ ಮತದಾರರ ಒಣ ಬಾಯಿಗೆ ಹಾಲೂ, ನೀರೂ ಎರಡೂ ದಕ್ಕದಂತೆ ಮಾಡಿದ್ದಾರೆ.

ತಾವು ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಉಪಮುಖ್ಯಮಂತ್ರಿ ಜೆ.ಎಚ್.ಪಟೇಲರು, ಎಲ್ಲಾ ವಿರೋಧ ಪಕ್ಷಗಳು ವಿರೋಧಿಸುತ್ತಾ ಬಂದ ವೀರ ಪ್ಪ ಮೊಯಿಲಿಯವರು ಸಹಿ ಹಾಕಿದ್ದ ಮಂಗಳೂರಿನಲ್ಲಿ ಸ್ಥಾಪನೆಯಾಗಲಿರುವ ವಿದ್ಯುತ್ ಉತ್ಪಾದನೆ ಮಾಡುವ "ಕೊಂಜೆಟ್ರಿಕ್ಸ್" ಕಂಪೆನಿಯೊಡನೆ ಮೊಯಿಲಿ ಸರಕಾರ ಒಪ್ಪಿಕೊಂಡಿದ್ದ ಕರಾರುಗಳಿಗೆ ಮತ್ತೆ ಒಪ್ಪಿಗೆ ನೀಡಿದ್ದಾರೆ.

ಅದೇ ಸಮಯದಲ್ಲಿ ಮುಖ್ಯಮಂತ್ರಿ ದೇವೇಗೌಡರು ದಿಲ್ಲಿಯಲ್ಲಿ ಪ್ರಧಾನಮಂತ್ರಿ ನರಸಿಂಹರಾಯರನ್ನು ಭೇಟಿ ಮಾಡಿ ಅವರ ಹೊಸ ಆರ್ಥಿಕ ನೀತಿಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದರು. ಆದರೆ ರೈತ ಸಮುದಾಯಕ್ಕಾಗುವ ಅಪಾಯದ ವಿರುದ್ಧ ಕೇಂದ್ರದೊಡನೆ ನೇರ ಹೋರಾಡುವ ಬೆದರಿಕೆಯನ್ನೂ ಹಾಕಿದ್ದರು.ವಿಧಾನಸಭೆಯಲ್ಲಿ ಈ ವರ್ಷದ ಬಜೆಟ್ ಮಂಡಿಸುವಾಗ ಅರ್ಥಮಂತ್ರಿ ಪಿ.ಜಿ.ಆರ್.ಸಿಂಧ್ಯಾ ಅವರು ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯನ್ನೂ, ಈ ನೀತಿಗನುಸಾರ ವಿದೇಶೀ ಗುತ್ತೇದಾರಿ ಬಂಡವಾಳದಾರರನ್ನು ಆಮಂತ್ರಿಸುತ್ತಿರುವುದನ್ನು ಬಲವಾಗಿ ಟೀಕಿಸಿದ್ದರು.

ಇದು ಕಾಂಗ್ರೆ ಹಾದಿ

ವಿಧಾನಸಭೆಯಲ್ಲಿ ಈ ರೀತಿಯ ಟೀಕೆ ನಡೆಯುತ್ತಿರುವಾಗಲೇ ಮುಖ್ಯಮಂತ್ರಿ ದೇವೇಗೌಡರು ಬೆಂಗಳೂರು ಸುತ್ತಮುತ್ತ ಹಾಗೆಯೇ ರಾಜ್ಯದ ಇತರೆಡೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ವಿದೇಶೀ ಗುತ್ತೇದಾರಿ ಕೈಗಾರಿಕೋದ್ಯಮಿಗಳಿಗೆ ಸುಲಭದಲ್ಲಿಯೇ ಭೂಮಿ ಕೊಡಿಸುವ ಸಲುವಾಗಿ ಈಗಿರುವ ಭೂಮಸೂದೆಗೆ ತಿದ್ದುಪಡಿ ತರುವ ವಿಚಾರದಲ್ಲಿದ್ದು, ಯಲಹಂಕ ಉಪಚುನಾವಣಾ ಫಲಿತಾಂಶದ ಬೆನ್ನ ಹಿಂದೆಯೇ ಭೂ ಮಸೂದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದಿದ್ದಾರೆ. ರೈತರೆಲ್ಲ ಶ್ರೀಮಂತರಾಗಬೇಕಾದರೆ, ಆಹಾರ ಧಾನ್ಯ ಬೆಳೆಸುವುದನ್ನು ಕೈ ಬಿಟ್ಟು ಹಣ್ಣು ಹಂಪಲು, ಹೂ ಮೊದಲಾದುವುದನ್ನು ಬೆಳೆಸಬೇಕೆಂದು ಹೇಳಿ ಗ್ಯಾಟ್ ಒಪ್ಪಂದಕ್ಕೆ ಶಹಬಾಸ್ ಗಿರಿ ಕೊಟ್ಟಿದ್ದಾರೆ.

ಕೃಷಿ ಮಂತ್ರಿ ಭೈರೇಗೌಡರು ಕೈಗಾರಿಕಾ ಮಂತ್ರಿ ಆರ್.ವಿ.ದೇಶಪಾಂಡೆ, ಉಪಮುಖ್ಯಮಂತ್ರಿ ಜೆ.ಎಚ್.ಪಟೇಲರು ವಿದೇಶ ಸಂಚಾರ ಮಾಡಿ ಕೈಗಾರಿಕೋದ್ಯಮಿಗಳಿಗೆ ಇಲ್ಲಸಲ್ಲದ ಆಸೆ ತೋರಿಸಿ ಬಂದಿದ್ದಾರೆ. ಅದೇ ಸಮಯದಲ್ಲಿ ಹಲವಾರು ಸಮಸ್ಯೆಗಳನ್ನೆದುರಿಸುತ್ತಿರುವ ಸಮರ್ಪಕ ವಿದ್ಯುತ್ ಪೂರೈಕೆ, ನೀರಿನ ವ್ಯವಸ್ಥೆ, ಕಚ್ಚಾ ಮಾಲುಗಳ ಪೂರೈಕೆ, ಸಿದ್ಧವಸ್ತುಗಳಿಗೆ ಮಾರ್ಕೆಟ್-ಮತ್ತಿನ್ನಿತರ ಸಮಸ್ಯೆಗಳತ್ತ ಗಮನ ಹರಿಸದೆ, ಕೈಗಾರಿಕೆಗಳ ಆಡಳಿತೆಯಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆ, ನಿಷ್ಠ ಅಧಿಕಾರಿಗಳ ನೇಮಕಾತಿ, ಕೈಗಾರಿಕೆಗಳು ಅನುಭವಿಸುತ್ತಿರುವ ನಷ್ಟಕ್ಕೆ ಕಾರಣಗಳತ್ತ ಗಮನ ಹರಿಸದೆ 62 ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸುವ ವಿಚಾರ ಪ್ರಕಟಿಸಿದ್ದಾರೆ. ಕೆಇಬಿ, ಕೆ.ಎಸ್.ಆರ್.ಟಿ.ಸಿ., ರಸ್ತೆ ನಿರ್ಮಾಣ, ಹೈವೇ ನಿರ್ಮಾಣ ಹೀಗೆ ಎಲ್ಲವನ್ನೂ ಖಾಸಗೀಕರಣಗೊಳಿಸುವ ಬೆದರಿಕೆ ಹಾಕುತ್ತಿದ್ದಾರೆ ದೇವೇಗೌಡರು. ಬೀಡಿ, ಪ್ಲಾಂಟೇಶನ್, ಮತ್ತಿನ್ನಿತರ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ, ತುಟ್ಟಿಭತ್ತೆ ಕೊಡುವುದಕ್ಕೂ ಕಾರ್ಮಿಕ ಮಂತ್ರಿ ಹಿಂದೇಟು ಹಾಕುತ್ತಿದ್ದಾರೆ.

2000 ಇಸವಿಯೊಳಗಾಗಿ ಕೃಷ್ಣಾ ನದಿಯ ನೀರಿನಲ್ಲಿಯ ನಮ್ಮ ಪಾಲನ್ನು ಉಪಯೋಗಿಸಿಕೊಳ್ಳಲು ಕೃಷ್ಣಾ ಮೇಲ್ದಂಡೆ ಮುಂತಾದ ಯೋಜನೆಗಳಿಗೆ ಆದ್ಯತೆ ನೀಡುವ ಆಶ್ವಾಸನೆಗಳ ಸುರಿಮಳೆಗೈದರೂ, ಭ್ರಷ್ಟಾಚಾರದ ನೆಪದಲ್ಲಿ ಅಲ್ಲಿಯ ಕೆಲಸಗಳನ್ನೆಲ್ಲಾ ನಿಲ್ಲಿಸಿಬಿಟ್ಟಿದ್ದಾರೆ. ಇವುಗಳಿಂದಾಗಿ ಜನರು ಸಿಟ್ಟಿಗೇಳಬಹುದೆಂಬ ಭೀತಿಯಿಂದ ರೈತರ ಸಾಲ ಮನ್ನಾದ ಕುರಿತು ಕೇಂದ್ರ ಸರಕಾರದ ವಿರುದ್ಧ ತೀವ್ರ ಚಳುವಳಿ ಹೂಡುತ್ತೇವೆಂದು ಗುಡುಗುತ್ತಿದ್ದಾರೆ. ರಾಜ್ಯದ ಜನತೆಗೆ ಬೇಡವಾಗಿರುವ "ಕೊಜೆಂಟ್ರಿಕ್ಸ್" ಯೋಜನೆಗೆ ಜುಲೈ ತಿಂಗಳೊಳಗಾಗಿ ಸಮ್ಮತಿ ನೀಡದಿದ್ದರೆ ಆ ಒಪ್ಪಂದವನ್ನು ರದ್ದು ಪಡಿಸುವ ಬೆದರಿಕೆ ಒಡ್ಡಿದ್ದಾರೆ.

ದ್ರೋಹ ಬಗೆಯುವ ಧೈರ್ಯ ಎಲ್ಲಿಂದ ಬಂತು?

ಹೋದ ವರ್ಷ ಚುನಾವಣೆ ನಡೆದಾಗ ರಾಜ್ಯದ ಕಾಂಗ್ರೆ ಆಡಳಿತೆ ವಿರುದ್ಧ ಕೇಂದ್ರ ಸರಕಾರದ ಧೋರಣೆಗಳ ವಿರುದ್ಧ ಉದ್ದುದ್ದ ಭಾಷಣ ಮಾಡಿ, ಕಾಂಗ್ರೆ ಆಡಳಿತೆಗೆ ಬೇಸತ್ತ ಜನರಿಂದ ಮತ ಪಡೆದು ಅಧಿಕಾರಕ್ಕೆ ಬಂದ ದೇವೇಗೌಡರು ಹಾಗೆಯೇ ಅವರ ಮಂತ್ರಿ ಮಹಾಶಯರು ಜನತೆ ತಮ್ಮ ಮೇಲಿಟ್ಟ ವಿಶ್ವಾಸಕ್ಕೆ ದ್ರೋಹ ಬಗೆಯುತ್ತಿದ್ದಾರಲ್ಲ, ಅಂಥ ಧೈರ್ಯದ ಅವರಿಗೆಲ್ಲಿಂದ ಬಂತು?

ಹೋದ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳ ಪೈಕಿ ಜನತಾದಳ 116 ಸ್ಥಾನ ಗಳಿಸಿತ್ತು, ಆ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸರಕಾರ ರಚಿಸುವಷ್ಟು ಬಹುಮತ ಸಿಗಲಿಕ್ಕಿಲ್ಲೆಂಬ ಅಭಿಮತ ವ್ಯಕ್ತವಾಗಿದ್ದರೂ ಕೂಡಾ ಸಿಪಿಐ(ಎಂ) ಪಕ್ಷ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸುತ್ತಾ ಜನತಾದಳದಲ್ಲಿ ಮೂಡಿಬಂದ ಐಕ್ಯತೆ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಧೋರಣೆಗಳ ವಿರುದ್ಧ ಜಂಟೀ ಪ್ರಚಾರ, ಹಾಗೆಯೇ ಸಿಪಿಐ(ಎಂ), ಸಿಪಿಐ ಮತ್ತು ರೈತ-ಕಾರ್ಮಿಕರ ಸಂಘಟನೆಗಳು ಕಾಂಗ್ರೆ ಸರಕಾರದ ಆರ್ಥಿಕ ಧೋರಣೆ, ರಾಜ್ಯ ಸರಕಾರದ ಆಡಳಿತದ ದಿವಾಳಿತನಗಳ ಕುರಿತು ನಡೆಸಿದ ತೀವ್ರ ಚಳುವಳಿ ಆ ಪ್ರಚಾರಗಳಿಂದಾಗಿ ಮತದಾರರು ಕಾಂಗ್ರೆ ಮತ್ತು ಬಿಜೆಪಿಗಳನ್ನು ಧಿಕ್ಕರಿಸಿ ಜನತಾದಳಕ್ಕೆ ಸರಕಾರ ನಡೆಸುವ ಅವಕಾಶ ಮಾಡಿಕೊಟ್ಟಿದ್ದರು. ಜನತಾದಳ ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ 9 ಜನ ಸ್ವತಂತ್ರ ಶಾಸಕರು ಜನತಾದಳ ಸೇರಿದ್ದರು. ಈಗ ಬಂಗಾರಪ್ಪನವರ ಕೆಸಿಪಿ ಪಕ್ಷದ 5 ಶಾಸಕರು ಜನತಾದಳವನ್ನು ಸೇರಿದ್ದಾರೆ. ಅಧಿಕಾರದ ಆಸೆಯಿಂದಲೇ ಆರಿಸಿ ಬಂದಿರುವ ಕಾಂಗ್ರೆ, ಬಿಜೆಪಿ ಪಕ್ಷದ ಶಾಸಕರು ಕೆಲವರು ಆಳುವ ಜನತಾ ದಳ ಪಕ್ಷಕ್ಕೆ ಸೇರಿ ಕುರ್ಚಿ ಗಿಟ್ಟಿಸುವ ತವಕದಲ್ಲಿದ್ದಾರೆಂಬ ಗಾಳಿ ಸುದ್ದಿಯೂ ಬೀಸುತ್ತಿದೆ. ಹೀಗೆ ಪಕ್ಷಾಂತರವನ್ನು ತಾತ್ವಿಕವಾಗಿ ವಿರೋಧಿಸುತ್ತೇವೆಂದು ಹೇಳುತ್ತಿರುವ ಜನತಾದಳ ಕಾಂಗ್ರೆಯಿಂದ ಪಕ್ಷಾಂತರಗೊಂಡ ಜನತಾದಳದ ಅಧ್ಯಕ್ಷ ಸ್ಥಾನ ಗಿಟ್ಟಿಸಿರುವ ಸಿ.ಎಂ.ಇಬ್ರಾಹಿಂ ಅವರನ್ನುಪಯೋಗಿಸಿಕೊಂಡು ವಿರೋಧಪಕ್ಷಗಳ ಹಾಗೂ ಸ್ವತಂತ್ರ ಶಾಸಕರನ್ನು ತಮ್ಮ ಪಕ್ಷಕ್ಕೆ ಸೆಳೆದುಕಂಡು ಶಾಸನಸಭೆಯಲ್ಲಿ ಹೆಚ್ಚಿನ ಬಹುಮತ ಗಿಟ್ಟಿಸಿಕೊಂಡಿದೆ.

ಎರಡನೆಯದಾಗಿ 40ಸ್ಥಾನಗಳನ್ನು ಗೆದ್ದಿದ್ದ ಭಾರತೀಯ ಜನತಾಪಕ್ಷ ವಿರೋಧ ಪಕ್ಷದ ಸ್ಥಾನದಲ್ಲಿದ್ದು ಜಿಲ್ಲಾಧಿಕಾರಿಗಳ ಮೇಲೆ ಅಧಿಕಾರ ನಡೆಸಿ, ವಿರೋಧಪಕ್ಷವಾಗಿ ವರ್ತಿಸುವುದನ್ನು ಬಿಟ್ಟು ತಾವೇ ಆಳುವ ಪಕ್ಷವೆಂಬ ರೀತಿಯಲ್ಲಿ ವರ್ತಿಸಿ ಜನರ ಮಧ್ಯೆ ತಮ್ಮ ಪ್ರಭಾವಕ್ಕೆ ಧಕ್ಕೆ ಉಂಟು ಮಾಡಿಕೊಂಡಂತಾಗಿದೆ.

ಮೂರನೆಯದಾಗಿ, ಚುನಾವಣೆಯಲ್ಲಿ ವಿರೋಧ ಸ್ಥಾನಕ್ಕೆ ಇಳಿಸಲ್ಪಟ್ಟ ಕಾಂಗ್ರೆ ಪಕ್ಷ ಚೇತರಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಅದರಲ್ಲಿಯ ಗುಂಪುಗಾರಿಕೆಯಿಂದಾಗಿ ಕೆಪಿಸಿಸಿಗೆ ಹೊಸ ಅಧ್ಯಕ್ಷರನ್ನು ನೇಮಿಸುವ ಪ್ರಯತ್ನ ವಿಫಲಗೊಂಡಿದೆ. ಅತ್ತ ಅಖಿಲ ಭಾರತ ಮಟ್ಟದಲ್ಲಿಯೇ ಕಾಂಗ್ರೆ ಅಧ್ಯಕ್ಷರಾದ ನರಸಿಂಹರಾಯರ ವಿರುದ್ಧ ಬಂಡಾಯವೆದ್ದಿದೆ. ಕಾಂಗ್ರೆ ಎರಡು ಹೋಳಾಗಿದೆ. ತಿವಾರಿ-ಅರ್ಜುನ್ ಸಿಂಗ್ ಅವರ ಬಣಕ್ಕೆ ಹೆಚ್ಚಿನ ಕಡೆಗಳಲ್ಲಿ ಬೆಂಬಲ ಸಿಕ್ಕಿದೆ. ನರಸಿಂಹರಾವ್ ಕಾಂಗ್ರೆ ಪಕ್ಷಕ್ಕೆ ಬಲವಾದ ಏಟು ಬಿದ್ದಿದೆ.

ಕರ್ನಾಟಕದಲ್ಲಿ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ಮಾಜಿ ಸಚಿವರಾದ ಅಜೀಜ್ ಸೇಠ್, ಎಸ್.ಎಂ. ಯಾಹ್ಯಾ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ವಿ.ರಾಜಶೇಖರನ್, ಶಾಸಕ ಡಿ.ಕೆ.ಶಿವಕುಮಾರ್, ಮಾಜಿ ಶಾಸಕ ಲಕ್ಷ್ಮಯ್ಯ, ಈಗಿನ ಎಂಪಿಯಾಗಿರುವ ರಾಣೆ ಮೊದಲಾದವರು ಸಿಡಿದು ಹೋದ ತಿವಾರಿ-ಅರ್ಜುನ್ ಗುಂಪಿಗೆ ಬೆಂಬಲ ವ್ಯಕ್ತಮಾಡಿದ್ದಾರೆ. ವೀರೇಂದ್ರ ಪಾಟೀಲರು ಅದರ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದಾರೆ. ಈ ತಿಂಗಳ 30ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಸುವ ಸಿದ್ಧತೆ ನಡೆಸಿದೆ. ಈ ಘಟನೆಗಳು ರಾಜ್ಯದ ಕಾಂಗ್ರೆಯನ್ನು ಮತ್ತಷ್ಟು ಬಲಹೀನಗೊಳಿಸಿವೆ.

ಕಾಂಗ್ರೆ ಪರಿಸ್ಥಿತಿ

ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆ ಪಕ್ಷ ಇಬ್ಭಾಗವಾಗುತ್ತಿದ್ದಂತೆಯೇ ತನ್ನ ಪಕ್ಷದಿಂದ 5 ಶಾಸಕರು, ಬಂಗಾರಪ್ಪನವರ ಬಲಗೈ ಬಂಟರಾಗಿದ್ದ ಗುಲ್ಬರ್ಗಾದ ಮಾಲಿಕಯ್ಯ ಗುತ್ತೇದಾರ(ಅಫಜಲಪುರ ಕ್ಷೇತ್ರ), ಆಳಂದದ ಸುಭಾಷ್ ಗುತ್ತೇದಾರ, ಸುರಪುರದ ರಾಜಾ ವೆಂಕಟಪ್ಪ ನಾಯಕ, ಕಾರವಾರದ ವಸಂತ ಅಸ್ನೋಟಿಕರ್, ಚಿಕ್ಕನಾಯಕನಹಳ್ಳಿಯ ಬಸವಯ್ಯ-ಜನತಾದಳ ಸೇರುತ್ತಿದ್ದಂತೆಯೇ ಬಂಗಾರಪ್ಪನವರು ರಾಷ್ಟ್ರೀಯರಂಗ, ಎಡಪಕ್ಷಗಳ ಜೊತೆ ಸೇರಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರಸಿಂಹರಾಯರ ಅಧ್ಯಕ್ಷತೆಯ ಕಾಂಗ್ರೆ ಮತ್ತು ಬಿಜೆಪಿಯನ್ನು ಸೋಲಿಸುವ ನಿರ್ಧಾರದ ಪ್ರಚಾರ ಕೈಗೊಂಡರು. ರಾಜ್ಯದ ಕಾಂಗ್ರೆ ಪಕ್ಷದಲ್ಲಿರುವ ಗುಂಪುಗಾರಿಕೆಯಿಂದಾಗಿ ಪಕ್ಷವನ್ನು ಪುನಶ್ಚೇತನಗೊಳಿಸುವುದು ಅಸಾಧ್ಯವೆಂದು ಮನಗಂಡ ನರಸಿಂಹರಾಯರು ಬಂಗಾರಪ್ಪನವರನ್ನು ಹಿಡಿಯಲು ಬಲೆ ಬೀಸಿದ್ದಾರೆ. ತನ್ನ ನಿಕಟ ವಿಶ್ವಾಸಿಕರಾದ ಚಂದ್ರಸ್ವಾಮಿ ಮೇ 28ರಂದು ಬಂಗಾರಪ್ಪನವರನ್ನು ಭೇಟಿ ಮಾಡಿ ದಿಲ್ಲಿಗೆ ಹೋಗಿ ನರಸಿಂಹರಾಯರ ಜೊತೆ ಮಾತಾಡುವಂತೆ ಬಹಳ ಮನ ಒಲಿಸಿದರಂತೆ. ಹಾಗೆಯೇ ಗೋವಾದ ಮುಖ್ಯಮಂತ್ರಿ ಪ್ರತಾಪ್ ಸಿಂಗ್ ರಾಣೆಯವ ಕೂಡಾ ನರಸಿಂಹರಾಯರ ಪರವಾಗಿ ಬಂಗಾರಪ್ಪನವರನ್ನು ಭೇಟಿ ಮಾಡಿದ್ದರು. ಬಂಗಾರಪ್ಪನವರನ್ನು ಬಲೆಗೆ ಹಾಕಿಕೊಳ್ಳುವುದರಲ್ಲಿ ಅವರಿಬ್ಬರೂ ವಿಫಲರಾಗಿದ್ದಾರೆ. ಈಗ ತಿವಾರಿ-ಅರ್ಜುನ್ ಗುಂಪಿನವರು ಪ್ರಯತ್ನ ನಡೆಸಿದ್ದಾರೆ.

ಸದ್ಯಕ್ಕಂತೂ ರಾಜ್ಯದಲ್ಲಿ ಕಾಂಗ್ರೆ ಹೇಳತೀರದಷ್ಟು ನಿಶ್ಶಕ್ತವಾಗಿದೆ. ತಿವಾರಿ-ಅರ್ಜುನ್ ಗುಂಪು ರಾಜ್ಯದಲ್ಲಿ ನೆಲೆ ನಿಲ್ಲುವ ಪ್ರಯತ್ನ ನಡೆಸಿರುವುದರಿಂದ ಕಾಂಗ್ರೆ ಪಕ್ಷ ಮತ್ತಷ್ಟು ಬಲಹೀನವಾಗಿ ಚೇತರಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ, ಚುನಾವಣೆಗಿಂತ ಮುಂಚೆ ಜನತಾದಳದಲ್ಲಿದ್ದ ಬಿಕ್ಕಟ್ಟು ಕಾಂಗ್ರೆ ಪಕ್ಷದಲ್ಲಿನ ಗುಂಪುಗಾರಿಕೆ, ಒಳಜಗಳದಿಂದಾಗಿ ಕಾಂಗ್ರೆ ವಿರೋಧದ ಅಲೆ ಏಳಲಾರಂಭಿಸಿದಾಗ, ಅದರ ಲಾಭ ಪಡೆದು ಅಧಿಕಾರದ ಗದ್ದುಗೆಗೇರಲು ಸರ್ವ ಪ್ರಯತ್ನ ನಡೆಸಿದ ಬಿಜೆಪಿ, ರಾಜ್ಯದಲ್ಲಿ 40 ಸ್ಥಾನ ಪಡೆದು ವಿರೋಧ ಪಕ್ಷವಾಗಿದ್ದರೂ ಕೂಡಾ ತನ್ನ ಪ್ರಭಾವವನ್ನು ಉಳಿಸಿಕೊಂಡು ವಿಸ್ತರಿಸಿಕೊಳ್ಳುವಲ್ಲಿ ವಿಫಲವಾಗಿದೆ.

ಈ ಎಲ್ಲಾ ಕಾರಣಗಳು ಬಹುತೇಕ ದೇವೇಗೌಡ ಮತ್ತು ಜನತಾದಳದ ಮುಖಂಡರಲ್ಲಿ ಅಹಂಭಾವ ಮೂಡಿಸಿದಂತೆ ಕಂಡುಬರುತ್ತದೆ. ಹಾಗಾಗಿಯೇ ಚುನಾವಣಾ ಪ್ರಚಾರದಲ್ಲಿ ತಾವು ಜನತೆಗಿತ್ತ ಆಶ್ವಾಸನೆಗಳನ್ನು ಗಾಳಿಗ ತೂರುವ, ನರಸಿಂಹರಾಯರ ಸರಕಾರದ ಆರ್ಥಿಕ ನೀತಿಗೆ ಬೆಂಬಲ ನೀಡುವುದಷ್ಟೇ ಅಲ್ಲ, ಅದನ್ನು ಕಾಂಗ್ರೆ ಸರಕಾರಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ರಾಜ್ಯದಲ್ಲಿ ಕಾರ್ಯರೂಪದಲ್ಲಿ ತರುವ ತರಾತುರಿ, ಲಂಚಗುಳಿತನ, ಭ್ರಷ್ಟಾಚಾರದ ಮುಂದುವರಿಕೆ, ವೀರಪ್ಪ ಮೊಯಿಲಿಯವರಂತೆಯೇ ಸುಳ್ಳು ಆಶ್ವಾಸನೆಗಳ ಸುರಿಮಳೆ ದೇವೇಗೌಡರ ಆಡಳಿತೆಯಲ್ಲಿ ಮುಂದುವರಿದಿದೆ. ಭ್ರಷ್ಟಾಚಾರಯಾವ ಮಟ್ಟಕ್ಕೆ ಸೇರಿದೆಂಬುದನ್ನು ಇತ್ತೀಚೆಗೆ ನಡೆದ ಸರಕಾರಿ ನೌಕರರ, ಅಧಿಕಾರಿಗಳ ವರ್ಗಾವರ್ಗಿಗಳಿಗೆ ಮುಖ್ಯಮಂತ್ರಿಯವರು ವಿಮಾನನಿಲ್ದಾಣದಲ್ಲೇ ತಡೆಯಾಜ್ಞೆ ನೀಡಿರುವುದು ಎತ್ತಿ ತೋರಿಸುತ್ತದೆ. ಅದರಂತೆಯೇ ಎಪಿಎಂಸಿಯಲ್ಲಿ ಬಹಿರಂಗವಾಗಿಯೇ ಯಾವ್ಯರೀತಿ ಹಣ ಎತ್ತುತ್ತಿದ್ದಾರೆಂಬುದು ಈಗಾಗಲೇ ಬಟ್ಟಬಯಲಾಗಿದೆ.

ದುರಹಂಕಾರ ಬೇಡ

ಇಂಥ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜನತಾದಳ ಬಿಟ್ಟು ಬೇರೆ ಯಾರಿಗೂ ಇನ್ನು 10-15 ವರ್ಷ ರಾಜ್ಯ ಆಳುವ ಶಕ್ತಿಯಿಲ್ಲ, ಹಾಗಿರುವಾಗ ನಮ್ಮ ಆಡಳಿತೆಗೆ ಅಡ್ಡಿ ಬರುವವರು ಯಾರೂ ಇಲ್ಲ, ನಾವೇ ರಾಜರು ಎಂಬ ದುರಭಿಮಾನ ರಾಜ್ಯದ ಜನತಾದಳ ಮುಖಂಡರಲ್ಲಿ ಕಂಡು ಬರುತ್ತಿದೆ. ಆಡಳಿತೆ ದಾರಿ ತಪ್ಪಿ ನಡೆದಿದೆ. ಅದು ಬಹಳ ಅಪಾಯಕಾರಿ.

ಪುಟ 8 ನೋಡಿ

ವರ್ತಮಾನ

ಪ.ಬಂಗಾಳ: ಇದು ಕಾಂಗ್ರೆ ಮುನ್ನಡೆಯೇ?

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗ ಮೂರು ಸ್ಥಾನಗಳನ್ನು ಉಳಿಸಿಕೊಂಡಿದೆ. ನಗರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ಸ್ಥಾನ ಹೆಚ್ಚಳ ಕಂಡು ಸಂತಸ ಪಟ್ಟ ಸಿಪಿಐ(ಎಂ) ವಿರೋಧಿಗಳು ವಿಧಾನಸಭಾ ಚುನಾವಣೆಗಳಲ್ಲಿ ನಿರೀಕ್ಷಿಸಿದ್ದೆಲ್ಲಾ ತಲೆಕೆಳಗಾಯಿತು. ವಾಸ್ತವವಾಗಿ ಎಡರಂಗ ವಿಜಯದ ಅಂತರ ಮೊದಲಿಗಿಂತಲೂ ಹೆಚ್ಚಿತು. ಅಲ್ಲದೆ ಕಾಂಗ್ರೆಸ್(ಐ) 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು.

- ಗೋಲ್‌ಪೋಕರ್‌ನಲ್ಲಿ ಎಡರಂಗದ ಫಾರ್ವರ್ಡ್ ಬ್ಲಾಕ್‌ನ ಅಭ್ಯರ್ಥಿ 1991ರಲ್ಲಿ 40.89ಶೇ. ಮತಗಳಿಸಿ ಗೆದ್ದಿದ್ದರು. ಈ ಬಾರಿ 56.04ಶೇ. ಮತಗಳಿಸಿ ಗೆದ್ದಿದ್ದಾರೆ. ಕಳೆದ ಬಾರಿಗಿಂತ 22 ಸಾವಿರ ಹೆಚ್ಚು ಮತಗಳು ದೊರೆತವು. ಕಳೆದ ಬಾರಿ ಮೂರನೇ ಸ್ಥಾನ ಪಡೆದು ಶೇ. 24.85 ಮತ ಪಡೆದಿದ್ದ ಬಿಜೆಪಿ ಈ ಬಾರಿ ಎರಡನೇ ಸ್ಥಾನ ಪಡೆದರೂ ಮತ ಶೇ. 20.28ಕ್ಕಿಳಿಯಿತು. ಕಾಂಗ್ರೆಸ್ ಮತ ಶೇ. 31.84ದಿಂದ 19.69 ಕ್ಕಿಳಿಯಿತು.
- ಬಡಾನಗರ್ ಕ್ಷೇತ್ರದಲ್ಲಿ ಎಡರಂಗದ ಆರ್.ಎಸ್.ಪಿ.ಯ ಅಭ್ಯರ್ಥಿ ಕಳೆದ ಬಾರಿಗಿಂತ 16500 ಹೆಚ್ಚು ಮತ ಪಡೆದರು. ಶೇಕಡಾವಾರು 46.89ಶೇ. ದಿಂದ 52.77ಶೇ.ಕ್ಕೇರಿತು. ಇಲ್ಲಿ ಕಾಂಗ್ರೆಸ್(ಐ) ಎರಡನೇ ಸ್ಥಾನ ಪಡೆದರೂ ಶೇಕಡಾ ಮತ 38.79ರಿಂದ 33.26ಕ್ಕಿಳಿಯಿತು.
- ಹುರಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಕಳೆದ ಬಾರಿ 51.05ಶೇ. ಮತಗಳಿಸಿದ್ದರೆ ಈ ಬಾರಿ ಅದು ಶೇ. 57.03ಕ್ಕೇರಿತು. ಕಾಂಗ್ರೆಸ್(ಐ) ಎರಡನೇ ಸ್ಥಾನದಿಂದ ಮೂರನೇ ಸ್ಥಾನಕ್ಕಿಳಿಯಿತು. ಶೇಕಡಾ ಮತ 27.73 ರಿಂದ 9.66 ಕ್ಕಿಳಿಯಿತು. ಝಾರ್ಖಂಡ್ ಮುಕ್ತಿ ಮೋರ್ಚ (ಸೋರೆನ್) ಎರಡನೇ ಸ್ಥಾನ ಪಡೆಯಿತು. ಅದು ಶೇ. 28.89ಶೇ. ಮತ ಪಡೆಯಿತು. 1991ರಲ್ಲಿ ಅದಕ್ಕೆ ಸಿಕ್ಕಿದ್ದ ಮತ ಶೇ. 9.4

ಇನ್ನೂ ಎಡರಂಗದ ಸಾಮೂಹಿಕ ನೆಲೆ ಹ್ರಾಸಗೊಂಡಿದೆ ಎಂಬ ಅಪಲಾಪವನ್ನು ಮಾಡಲು ಸಾಧ್ಯವೇ!

ವಿಧಾನಸಭಾ ಉಪಚುನಾವಣೆಗಳು ಪತ್ರಿಕೆಗಳ ಟೊಳ್ಳು ಅಬ್ಬರ

ಇತ್ತೀಚಿನ ವಿಧಾನಸಭಾ ಉಪಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಮುನ್ನಡೆ ಸಾಧಿಸಿದೆ ಎಂದು ಫಲಿತಾಂಶಗಳು ಪ್ರಕಟಗೊಳ್ಳುತ್ತಿದ್ದಂತೆಯೇ ಮೊದಲ ದಿನ ದೊಡ್ಡ ಪತ್ರಿಕೆಗಳ ಮುಖಪುಟಗಳು ಅಬ್ಬರಿಸಿದವು. ಆದರೆ ನಿಜ ಸಂಗತಿಯೇನು? ಪತ್ರಿಕಾ ತಲೆಬರಹಗಳು ತಪ್ಪು ದಾರಿಗೆಳೆಯುವಂತಹವು, ಅವು ನಿಜಸಂಗತಿಯನ್ನು ಪ್ರತಿಬಿಂಬಿಸುವುದಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳುತ್ತಾರೆ.

ಫಲಿತಾಂಶಗಳನ್ನು ನಿಕಟವಾಗಿ ವಿಶ್ಲೇಷಿಸಿದಾಗ ಹಿಂದಿನ ಚುನಾವಣೆಗಳಲ್ಲಿ ಕಂಡ ಪ್ರವೃತ್ತಿಯೇ ಇಲ್ಲಿಯೂ ಕಂಡಿದೆ. ಅಂದರೆ ಆಯ್ಕೆಯ ಅವಕಾಶವಿದ್ದಲ್ಲಿ ಜನ ಕಾಂಗ್ರೆಸ್(ಐ)ಗೆ ಒಂದು ಜಾತ್ಯಾತೀತ ಪರ್ಯಾಯವನ್ನೇ ಬಯಸುತ್ತಾರೆ ಎಂಬುದು ಈ ಚುನಾವಣೆಗಳಲ್ಲೂ ಕಂಡು ಬರುತ್ತದೆ ಎನ್ನುತ್ತಾರೆ ಸುರ್ಜಿತ್. ಕಾಂಗ್ರೆಸ್(ಐ)ಗೆ ಹೊಸತೇನೂ ಸಿಗಲಿಲ್ಲ, ಬಿಜೆಪಿ ತನ್ನ ಬಲಿಷ್ಠ ನೆಲೆಗಳಲ್ಲಿಯೂ ಸೋಲುಂಡಿದೆ.

14 ರಾಜ್ಯಗಳಲ್ಲಿ ನಡೆದ 28 ವಿಧಾನಸಭಾ ಉಪಚುನಾವಣೆಗಳಲ್ಲಿ ಕಾಂಗ್ರೆಸ್(ಐ)ಗೆ ಸಿಕ್ಕಿದ ಸ್ಥಾನಗಳು ಹತ್ತು ಮಾತ್ರ. ಅವೆಲ್ಲಾ ಅದು ಹಿಂದೆ ಗೆದ್ದಿದ್ದ ಸ್ಥಾನಗಳು. ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ತಲಾ 2, ರಾಜಸ್ಥಾನ, ಕೇರಳ, ಮಹಾರಾಷ್ಟ್ರ, ಒರಿಸ್ಸಾ, ನಾಗಲ್ಯಾಂಡ್, ಮಣಿಪುರಗಳಲ್ಲಿ ತಲಾ ಒಂದೊಂದು ಸ್ಥಾನ ಪಡೆದಿದೆ. ಹಿಂದಿನ ಚುನಾವಣೆಗಳಲ್ಲಿ ಭಾರೀ ಬಹುಮತ ಪಡೆದಿದ್ದ ಪಂಜಾಬಿನಲ್ಲಿ ಅದಕ್ಕೆ ಉಪಚುನಾವಣೆ ಗೆಲ್ಲಲಾಗಲಿಲ್ಲ, ಅಷ್ಟೇ ಅಲ್ಲ, ಬೇರೆ ಪಕ್ಷಗಳು ಗೆದ್ದ ಸ್ಥಾನಗಳಲ್ಲೂ ಅದರ ಮತಗಳು ಕಮ್ಮಿಯಾಗಿವೆ. ಉತ್ತರ ಪ್ರದೇಶ, ಬಿಹಾರ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಕರ್ನಾಟಕಗಳಲ್ಲಿ ಅದರ ಸ್ಥಿತಿ ಶೋಚನೀಯವಾಗಿಯೇ ಇದೆ ಎಂದು ಸುರ್ಜಿತ್ ಐ.ಎನ್.ಎಸ್. ಸುದ್ದಿ ಸಂಸ್ಥೆ ಜತೆ ಮಾತನಾಡುತ್ತಾ ವಿವರಿಸಿದರು.

ಅದೇ ರೀತಿ ಬಿಜೆಪಿ ಏನೂ ಗಳಿಸಿಲ್ಲ, ಮಾತ್ರವಲ್ಲ ಕಳಕೊಂಡಿದೆ. ಮಹಾರಾಷ್ಟ್ರ, ಗುಜರಾತ್ ಯಶಸ್ಸಿನಿಂದ ಮತ್ತೆ ದಿಲ್ಲಿ ಗದ್ದುಗೆಯೇರುವ ಕನಸು ಕಾಣುತ್ತಿರುವ ಬಿಜೆಪಿಗೆ ಉತ್ತರ ಪ್ರದೇಶದಲ್ಲಿ ನಾಲ್ಕರಲ್ಲಿ ಒಂದರಲ್ಲಿ ಮಾತ್ರ ಬಹಳ ಕಷ್ಟದಿಂದ ಗೆಲವು ಪಡೆಯಲು ಸಾಧ್ಯವಾಗಿದೆ. ಉಳಿದ ಮೂರು ಕೂಡಾ ಸಮಾಜವಾದಿ ಪಕ್ಷಕ್ಕೆ ದೊರೆತಿದೆ. ತನ್ನ ಹಿಂದಿನ ಸರಕಾರಗಳಿದ್ದ ಹಿಮಾಚಲ ಪ್ರದೇಶಗಳಲ್ಲಿ ತಲಾ ಎರಡೆರಡು ಸ್ಥಾನಗಳಲ್ಲಿ ಒಂದನ್ನೂ ಗೆಲ್ಲಲಾಗಿಲ್ಲ, ರಾಜಸ್ಥಾನದಲ್ಲಿ ಮಾತ್ರ ಎರಡು ಸ್ಥಾನ ಪಡೆಯುವುದು ಸಾಧ್ಯವಾಯಿತು.

ತದ್ವಿರುದ್ಧವಾಗಿ ಜಾತ್ಯಾತೀತ ಪಕ್ಷಗಳು ತಮ್ಮ ಸ್ಥಾನಗಳನ್ನು ಉಳಿಸಿಕೊಂಡದ್ದಷ್ಟೇ ಅಲ್ಲ, ಬಲಪಡಿಸಿಕೊಂಡಿವೆ. ಬಿಹಾರದಲ್ಲಿ ಜನತಾದಳ ಮೂರು ಸ್ಥಾನಗಳಲ್ಲಿ ಸಾಕಷ್ಟು ಹೆಚ್ಚಿನ ಮತಗಳಿಂದ ಗೆದ್ದಿದೆ. ಒಂದು ಸ್ಥಾನ ಸ್ಥಳೀಯ ಪಕ್ಷ ಚಂಪಾರಣ್ ವಿಕಾಸ್ ಪಾರ್ಟಿಗೆ ದೊರೆತಿದೆ. ಕರ್ನಾಟಕದಲ್ಲಿ ಜನತಾದಳ ಹಿಂದಿನ ಫಲಿತಾಂಶಕ್ಕೆ ಹೋಲಿಸಿದರೆ ಭಾರೀ ಅಂತರದಿಂದ ಗೆದ್ದಿದೆ. ತೆಲುಗುದೇಶಂ ಮೂರು ಸ್ಥಾನಗಳನ್ನು ಗೆದ್ದಿದೆ. ಎಡರಂಗ ಮೂರು ಸ್ಥಾನಗಳನ್ನು ಹೆಚ್ಚಿನ ಅಂತರದಿಂದ ಗೆದ್ದು ಕಾಂಗ್ರೆಸ್(ಐ)ಗೆ ಭಾರೀ ಪರಾಭವ ಉಂಟು ಮಾಡಿವೆ.

ಈ ವಿಶ್ಲೇಷಣೆಯಿಂದ ಜನತೆಯಲ್ಲಿ ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಸೋಲಿಸಲು ಎಡ ಜಾತ್ಯಾತೀತ, ಪ್ರಜಾಪ್ರಭುತ್ವ ಪಕ್ಷಗಳನ್ನು ಬಲಪಡಿಸಬೇಕೆಂಬ ಅರಿವು ಜನರಲ್ಲಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ ಎಂದು ಸುರ್ಜಿತ್ ಹೇಳುತ್ತಾರೆ.

(ಐ.ಎನ್.ಎಸ್.)

ನಗರಸಭಾ ಚುನಾವಣೆಗಳ ಬಗ್ಗೆ ಪ.ಬಂಗಾಳ ಸಿಪಿಐ(ಎಂ)

ಎಡರಂಗದ ನಿರೀಕ್ಷೆಯ ಮಟ್ಟದಲ್ಲಿಲ್ಲವಾದರೂ, ಪತ್ರಿಕೆಗಳ ಬೊಬ್ಬೆ ಅರ್ಥಹೀನ

ಪಶ್ಚಿಮ ಬಂಗಾಳದಲ್ಲಿ ಇತ್ತೀಚಿನ ನಗರಸಭಾ ಚುನಾವಣೆಗಳು ಹಾಗೂ ಮೂರು ವಿಧಾನಸಭಾ ಉಪಚುನಾವಣೆಗಳ ಫಲಿತಾಂಶಗಳು ರಾಜ್ಯದಲ್ಲಿ ಎಡರಂಗಕ್ಕೆ ರಾಜಕೀಯ ಬೆಂಬಲ ಹೆಚ್ಚಿರುವುದನ್ನು ತೋರಿದೆ. ಜತೆಗೇ ಕೆಲವು ಸಂಘಟನಾ ದೌರ್ಬಲ್ಯಗಳನ್ನು ತೋರ್ಪಡಿಸಿವೆ. ಇವುಗಳ ವಿಶ್ಲೇಷಣೆ ನಡೆದು ಅದನ್ನು ಸರಿಪಡಿಸಬೇಕು -ಇದು ಸಿಪಿಐ(ಎಂ)ನ ಪ.ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ಮಾಡಿರುವ ಆರಂಭಿಕ ವಿಮರ್ಶೆಯ ಸಾರಾಂಶ. ಫಲಿತಾಂಶಗಳ ವಿವರವಾದ ವಿಶ್ಲೇಷಣೆ ಹಾಗೂ ಜಿಲ್ಲಾವಾರು, ವಾರ್ಡುವಾರು ವಿವರಗಳ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಕಳೆದ 18 ವರ್ಷಗಳ ಎಡರಂಗ ಆಳ್ವಿಕೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ಅಧಿಕಾರಗಳ ವಿಕೇಂದ್ರೀಕರಣದ ಒಂದು ಪ್ರಾಮಾಣಿಕ ಪ್ರಯತ್ನ ನಡೆಸಲಾಗಿದೆ. 1981 ರಿಂದ ನಗರಸಭೆಗಳಿಗೆ ನಿಯಮಿತವಾಗಿ ಚುನಾವಣೆಗಳು ನಡೆದಿವೆ. ಹಣಕಾಸು ಸಮಸ್ಯೆಗಳಿದ್ದರೂ ಈ ಸಮಸ್ಯೆಗಳಿಗೆ ಕೊಡುವ ಬಜೆಟ್ ನೆರವನ್ನು ಹೆಚ್ಚಿಸಲಾಗಿದೆ ಎಂದಿರುವ ಕಾರ್ಯದರ್ಶಿ ಮಂಡಳಿಯ ಹೇಳಿಕೆ "ಪಶ್ಚಿಮ ಬಂಗಾಳ ಎಡರಂಗ ಆಳ್ವಿಕೆಯಲ್ಲಿ ಹೀಗೆ ಸ್ವಯಮಾಡಳಿತದ ಸ್ಥಳೀಯ ಸಂಸ್ಥೆಗಳ ನಿರಂತರ ಬೆಳವಣಿಗೆಯ ಪ್ರಕ್ರಿಯೆಯನ್ನು ಕಾಣುತ್ತಿದೆ. ದೇಶದಲ್ಲೇ ಇದೊಂದು ವಿಶಿಷ್ಟ ಸಾಧನೆ ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ" ಎಂದಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಹೇಳಿಕೆ ನೀಡಿರುವ ನಗರಸಭಾ ಚುನಾವಣೆಗಳ ವಿವರಗಳು ಈ ರೀತಿ ಇವೆ;

ಎಡರಂಗ 37 ನಗರಸಭೆಗಳನ್ನು ಪಡೆದಿದೆ. ಕಾಂಗ್ರೆಸ್(ಐ) 27 ನಗರಸಭೆಗಳನ್ನು ಪಡೆದಿದೆ. ಒಟ್ಟು 1482 ವಾರ್ಡುಗಳಲ್ಲಿ ಎಡರಂಗ ಹಾಗೂ ಎಡರಂಗ ಬೆಂಬಲಿತ ಅಭ್ಯರ್ಥಿಗಳು 776 ವಾರ್ಡುಗಳಲ್ಲಿ ಗೆದ್ದಿದ್ದಾರೆ. ಇದು ಶೇ. 53.07ವಾಗುತ್ತದೆ. ಸಿಪಿಐ(ಎಂ) ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿಗಳು 647 ವಾರ್ಡುಗಳಲ್ಲಿ (ಅಂದರೆ ಶೇ. 44.25) ಗೆದ್ದಿದ್ದಾರೆ. ಅತ್ತ ಕಾಂಗ್ರೆಸ್(ಐ) ಮತ್ತು ಕಾಂಗ್ರೆಸ್'ಬಂಡಾಯ' ಅಭ್ಯರ್ಥಿಗಳು ಒಟ್ಟಾಗಿ 615 ವಾರ್ಡುಗಳಲ್ಲಿ (42.39ಶೇ.) ಗೆದ್ದಿದ್ದಾರೆ.

ಮೂರು ಉಪಚುನಾವಣೆಗಳಲ್ಲಿ ಎಡರಂಗ ಅಭ್ಯರ್ಥಿಗಳೆಲ್ಲಾ ಶೇ. 50ಕ್ಕೂ ಹೆಚ್ಚ ಮತಗಳಿಸಿ ಗೆದ್ದಿದ್ದಾರೆ. ಅಲ್ಲದೆ ಹಿಂದಿನ ಬಾರಿಗಿಂತ ಹೆಚ್ಚು ಮತಗಳಿಸಿದ್ದಾರೆ.

ಆದ್ದರಿಂದ ಎಡರಂಗ ಈಗಲೂ ಜನಸಾಮಾನ್ಯರ ಬೆಂಬಲ ಪಡೆದಿದೆ. ಎಡರಂಗವನ್ನು ಜನ ತಿರಸ್ಕರಿಸಿದ್ದಾರೆ ಎಂಬ ಬೂರ್ಜ್ವ ಪತ್ರಿಕೆಗಳ ಕರ್ಣಕರ್ಕಶ ಪ್ರಚಾರ ಶುದ್ಧ ಸುಳ್ಳು ಎಂದು ಸಾಬೀತಾಗುತ್ತದೆ. ನಗರದ ಮಧ್ಯಮ ವರ್ಗಗಳ ನಡುವೆ ಎಡರಂಗ ಬೆಂಬಲ ಕಮ್ಮಿಯಾಗಿದೆ ಎಂಬುದೂ ಸತ್ಯವಲ್ಲ, ಏಕೆಂದರೆ ಹಲವಾರು ನಗರಸಭೆಗಳ ಮಧ್ಯಮವರ್ಗ ಪ್ರದೇಶಗಳಲ್ಲಿ ಎಡರಂಗ ಯಶಸ್ವಿಯಾದದ್ದು ಫಲಿತಾಂಶಗಳಿಂದ ತಿಳಿದು ಬರುತ್ತದೆ.

ಎಡರಂಗದ ರಾಜಕೀಯ ಬೆಂಬಲ ಹೆಚ್ಚಿರುವುದು ಈ ಫಲಿತಾಂಶಗಳಿಂದ ಕಂಡು ಬಂದಿರುವುದಾದರೂ, ಇವು ನಿರೀಕ್ಷೆಯ ಮಟ್ಟಕ್ಕಿಂತ ಬಹಳ ಕೆಳಗಿವೆ ಎಂಬುದನ್ನು ಕಾರ್ಯದರ್ಶಿ ಮಂಡಳಿ ಒಪ್ಪಿಕೊಂಡಿದೆ. ಎಡರಂಗ ಕಾಂಗ್ರೆಸ್(ಐ)ಗೆ 13 ನಗರಸಭಾ ಮಂಡಳಿಗಳನ್ನು ಕಳಕೊಂಡಿದೆ. ಮೂರನ್ನು ಮಾತ್ರ ಕಾಂಗ್ರೆಸ್(ಐ)ನಿಂದ ಕಿತ್ತುಕೊಂಡಿದೆ. ಹಿಂದೆಯೂ ಈ ರೀತಿ ಹಲವು ನಗರಸಭೆಗಳು ಕೈ ಬದಲಾಗಿದ್ದರೂ ಈ ಬಾರಿ ಕೆಲವು ಜಿಲ್ಲೆಗಳಲ್ಲಂತೂ ಎಡರಂಗ ಸೋಲು ಅನಿರೀಕ್ಷಿತ ಎಂದಿರುವ ಕಾರ್ಯದರ್ಶಿ ಮಂಡಳಿಯ ಹೇಳಿಕೆ "ವಾರ್ಡುವಟ್ಟದ ಮತದಾನವನ್ನು ಪರಾಮರ್ಶಿಸಿ ಕೊರತೆಗಳನ್ನು, ತಪ್ಪುಗಳನ್ನು ಮತ್ತಿತರ ಕಾರಣಗಳನ್ನು ಗುರುತಿಸಿ ಸೂಕ್ತ ಸರಿಪಡಿಕೆ ಕ್ರಮಗಳನ್ನು ಆರಂಭಿಸಬೇಕು" ಎಂದು ಹೇಳಿದೆ.

ಫಲಿತಾಂಶಗಳು	
ಒಟ್ಟು ನಗರಸಭೆಗಳು	75
ಎಡರಂಗಕ್ಕೆ	37
ಕಾಂಗ್ರೆಸ್(ಐ)	27
ಸಮ-ಸಮ ಬಲ	1
ಅಸ್ಪಷ್ಟ ಚಿತ್ರ	10
ಒಟ್ಟು ವಾರ್ಡುಗಳು	1462
ಎಡರಂಗ	
ಸಿಪಿಐ(ಎಂ)	640
ಸಿಪಿಐ	43
ಫಾರ್ವರ್ಡ್ ಬ್ಲಾಕ್	28
ಆರ್.ಎಸ್.ಪಿ.	23
ಎಂ.ಎಫ್.ಬಿ.	6
ಸಮಾಜವಾದಿ ಪಾರ್ಟಿ	1
ಆರ್.ಸಿ.ಪಿ.ಐ	2
ಎಡರಂಗ ಬೆಂಬಲಿತ ಪಕ್ಷೇತರರು	24
ಜನತಾದಳ	2
	776
ಕಾಂಗ್ರೆಸ್(ಐ)	592
ಕಾಂಗ್ರೆ ಬೆಂಬಲಿತ ಪಕ್ಷೇತರರು	8
ಬಂಡಾಯ ಕಾಂಗ್ರೆ	14
ಬಿಜೆಪಿ	19
ಯು.ಸಿ.ಪಿ.ಐ.	1
ಯು.ಸಿ.ಸಿ.	1
ಎಸ್.ಯು.ಸಿ.	5
ಫಾರ್ವರ್ಡ್ ಬ್ಲಾಕ್ (ಎಸ್)	5
ಜಿ.ಎನ್.ಎಲ್.ಎಫ್.	3
ಎ.ಐ.ಸಿ.ಎಲ್.	1
ಇತರರು	31

ಈ ಹಿನ್ನಡೆಗೆ ಕೆಲವು ಕಾರಣಗಳೆಂದರೆ ಎಡ-ವಿರೋಧಿ ಪತ್ರಿಕೆಗಳ ಪಾತ್ರ ಹಾಗೂ ಅವನ್ನು ಎದುರಿಸುವಲ್ಲಿ ಸಿಪಿಐ(ಎಂ)ನ ವಿಫಲತೆ, ಪ.ಬಂಗಾಳದಲ್ಲಿ ಶೋಚನೀಯ ಕೈಗಾರಿಕಾ ದೃಶ್ಯಕ್ಕೆ ಕೇಂದ್ರ ಆರ್ಥಿಕ ನೀತಿಗಳ ಹೊಣೆಗಾರಿಕೆಯನ್ನು ವಿವರಿಸುವಲ್ಲಿ ವಿಫಲತೆ, ಸಂಘಟನಾ ದೌರ್ಬಲ್ಯಗಳು, ಕೆಲವು ಎಡಪಂಥೀಯ ವಿಭಾಗಗಳಲ್ಲಿನ ವಿಪರೀತ ಆತ್ಮವಿಶ್ವಾಸ, ಸ್ಥಳೀಯ ಸಮಸ್ಯೆಗಳ ನಿರ್ಲಕ್ಷ್ಯ ಇತ್ಯಾದಿ.

ಆಳುವ ಪಕ್ಷಗಳ ಸುದ್ದಿ ಮಾಧ್ಯಮಗಳ ಪಾತ್ರದ ಬಗ್ಗೆ ಹೇಳುತ್ತಾ ಕಾರ್ಯದರ್ಶಿ ಮಂಡಳಿಯ ಹೇಳಿಕೆ ಪತ್ರಿಕೆಗಳ ದುಷ್ಟ ಪಾತ್ರವನ್ನು ಉಪೇಕ್ಷಿಸುವುದು ಸರಿಯಲ್ಲ ಎಂದಿದೆ. ಇವು ನಾಗರಿಕ ಸೌಲಭ್ಯಗಳ ಅಭಾವಕ್ಕೆ ಎಡರಂಗವೇ ಹೊಣೆ ಎನ್ನುತ್ತಾ ಕೇಂದ್ರದ ಕಾಂಗ್ರೆಸ್(ಐ) ಸರಕಾರ ಅನುಸರಿಸುತ್ತಿರುವ ನೀತಿಗಳ ಫಲವಾಗಿ ಉಂಟಾಗಿರುವ ಒಟ್ಟಾರೆ ಹಣಕಾಸು ಮುಗ್ಗಟ್ಟಿನ ಪ್ರಶ್ನೆಯನ್ನು ಮರೆಮಾಚಲು ಪ್ರಯತ್ನಿಸುತ್ತಿವೆ. ನಿಜಸಂಗತಿಯೆಂದರೆ ಇಂತಹ ಮುಗ್ಗಟ್ಟಿನ ನಡುವೆಯೂ ರಾಜ್ಯ ಸರಕಾರ ನಗರಸಭೆಗಳಿಗೆ ಹೆಚ್ಚೆಚ್ಚು ಹಣ ಒದಗಿಸುತ್ತಾ ಬಂದಿದೆ. ನಿಜ ಇವು ನಗರಗಳ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸಾಕಷ್ಟು ಅಲ್ಲ, ಈ ಸನ್ನಿವೇಶದಲ್ಲಿ ಪತ್ರಿಕೆಗಳ ಪೂರ್ಣ ನೆರವಿಗಿಂತ ಕಾಂಗ್ರೆಸ್(ಐ) ಎಡರಂಗ ಸರ್ಕಾರ ಜನಗಳ ಸಮಸ್ಯೆಗಳನ್ನು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಿದೆ ಎಂದು ಚಿತ್ರಿಸಲು ಪ್ರಯತ್ನಿಸಿದೆ. ಇಂತಹ ಸುಳ್ಳುಗಳನ್ನು ಎದುರಿಸುವಲ್ಲಿ ನಮ್ಮ ವಿಫಲತೆ ಚುನಾವಣೆಗಳ ಫಲಿತಾಂಶಗಳ ಮೇಲೆ ಪ್ರಭಾವ ಬೀರಿದೆ. ಮತದಾರರನ್ನು ಗೊಂದಲದಲ್ಲಿ ಬೀಳಿಸಿ ತಪ್ಪು ದಾರಿಗೆಳೆದಿದೆ ಎಂದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ.

ಅದೇ ರೀತಿ ಹಲವು ಕಾರ್ಖಾನೆಗಳು ರೋಗಗ್ರಸ್ತ ಎಂದಾಗುವುದು, ಮುಚ್ಚಿರುವುದು ಕೇಂದ್ರ ಸರಕಾರದ ನೀತಿಗಳಿಂದ. ಇದನ್ನು ಕನಿಷ್ಠ ಒಂದು ವಿಭಾಗದ ಜನಸಮೂಹಗಳಿಗೆ ಸೂಕ್ತ ರೀತಿಯಲ್ಲಿ ವಿವರಿಸಲಾಗದೇ ಹೋದದ್ದು ಫಲಿತಾಂಶಗಳ ಮೇಲೆ ಪ್ರಭಾವ ಬೀರಿದೆ ಎಂದು ಕಾರ್ಯದರ್ಶಿ ಮಂಡಳಿ ಹೇಳಿಕೆ ತಿಳಿಸಿದೆ. ಹಲವು ಪ್ರದೇಶಗಳಲ್ಲಿ ಸ್ಥಳೀಯ ಪ್ರಶ್ನೆಗಳಿಗೆ ಮುಂಚೂಣಿಗೆ ಬಂದದ್ದು ಹಾಗೂ ಮೇಲೆ ಹೇಳಿದ ವಿಭಿನ್ನ ಕಾರಣಗಳೂ ಫಲಿತಾಂಶಗಳ ಮೇಲೆ ಪ್ರಭಾವ ಬೀರಿವೆ ಎಂದು ಅದು ಹೇಳಿದೆ.

ಬಿಜೆಪಿ 1464ರಲ್ಲಿ 19 ವಾರ್ಡುಗಳಲ್ಲಿ ಮಾತ್ರ ಗೆದ್ದಿದ್ದರೂ ಕೋಮುವಾದದ ಅಪಾಯವನ್ನು ನಿರ್ಲಕ್ಷಿಸುವಂತಿಲ್ಲ, ಈ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಬಿಜೆಪಿ ನಡುವೆ ಅಪವಿತ್ರ ಮೈತ್ರಿ ನಡೆಸಿದ್ದನ್ನೂ ಜನತೆಯ ಗಮನಕ್ಕೆ ತರಬೇಕು ಎಂದು ಸಿಪಿಐ(ಎಂ) ಪಶ್ಚಿಮ ಬಂಗಾಳ ಕಾರ್ಯದರ್ಶಿ ಮಂಡಳಿ ಹೇಳಿದೆ.

ಸಿಐಟಿಯು ದೋರಣೆಗಳ ಅನುಷ್ಠಾನಕ್ಕೆ ಕರೆ

ಹರಿಹರ: ಸಿಐಟಿಯು ಅಡಿಯಲ್ಲಿ ಸಂಘಟಿತರಾದ ಕಾರ್ಮಿಕರು ಸಂಘಟನೆಯ ಧೋರಣೆಗಳನ್ನು ಅನುಷ್ಠಾನಕ್ಕೆ ತರಬೇಕು" ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕಾಂ. ನಿತ್ಯಾನಂದ ಸ್ವಾಮಿ ಅವರು ಕಾರ್ಮಿಕರಿಗೆ ಕರೆ ನೀಡಿದರು. ಅವರು ಸಿಐಟಿಯು ರಜತ ಮಹೋತ್ಸವದ ಅಂಗವಾಗಿ ಮೇ 30 ರಂದು ಹರಿಹರದಲ್ಲಿ ಏರ್ಪಡಿಸಲಾಗಿದ್ದ ಕಾರ್ಮಿಕರ ಬೃಹತ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ವಿಶ್ವದ ಕಾರ್ಮಿಕರು ಯಾವುದೇ ಜಾತಿ, ಮತ, ಬಣ್ಣ, ಭಾಷೆಯ ಭೇದವಿಲ್ಲದೆ ಒಂದೇ ವರ್ಗಕ್ಕೆ ಸೇರಿದವರು. ಕಾರ್ಮಿಕ ವರ್ಗಕ್ಕೂ ಬಂಡವಾಳಶಾಹಿ ವರ್ಗಕ್ಕೂ ನಡುವೆ ಎಂದಿಗೂ ಬಗೆಹರಿಯದ ವೈರುಧ್ಯವಿದೆ. 1960ರ ದಶಕದಲ್ಲಿ ಎಐಟಿಯುಸಿಯು ಮುಖಂಡತ್ವ ವರ್ಗ ಹೋರಾಟದ ತತ್ವವನ್ನು ಬದಿಗಿಟ್ಟು ವರ್ಗ ಸಹಕಾರದ ಧೋರಣೆಯನ್ನು ಅನುಸರಿಸುತ್ತಿದ್ದುದನ್ನು ಪ್ರತಿಭಟಿಸಿ ಸಿಐಟಿಯು ಸ್ಥಾಪನೆಯಾಯಿತು. ಸಿಐಟಿಯು ಅನ್ನು ಒಪ್ಪಿಕೊಂಡಿರುವ ಕಾರ್ಮಿಕ ಸಂಘಗಳು ಈ ವರ್ಗ ಹೋರಾಟಕ್ಕೆ ಬದ್ಧರಾಗಿರಬೇಕು. ಮಾಲೀಕ ವರ್ಗದ ಯಾವ ಆಮಿಷಗಳಿಗೂ ಬಲಿಯಾಗದೆ ಯಾವ ಬೆದರಿಕೆಗಳಿಗೂ ಸೊಪ್ಪು ಹಾಕದೆ ಕಾರ್ಮಿಕ ವರ್ಗ ಹಿತವನ್ನು ಸದಾಕಾಲ ಎತ್ತಿ ಹಿಡಿಯಬೇಕು. ವರ್ಗದ ಹೋರಾಟದ ತತ್ವಕ್ಕೆ ಚ್ಯುತಿ ತರುವ ಕಾರ್ಮಿಕ ಮುಖಂಡರು ಸಿಐಟಿಯು ಮುಖಂಡರಾಗಿರಲು ಸಾಧ್ಯವಿಲ್ಲ.

ಸಿಐಟಿಯು ಅಡಿಯಲ್ಲಿರುವ ಸಂಘಟಿತ ವಲಯದ ಕಾರ್ಮಿಕರು ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸಲು ಶ್ರಮಿಸಬೇಕು. ಇತ್ತೀಚಿನ ದಿನಗಳಲ್ಲಿ ಕೈಗಾರಿಕೆಗಳಲ್ಲಿ ಬೆಳೆಯುತ್ತಿರುವ ಕಾಂಟ್ರಾಕ್ಟ್ ಪದ್ಧತಿಯ ವಿರುದ್ಧ ಹೋರಾಡಬೇಕು. ಮಹಿಳಾ ಕಾರ್ಮಿಕರನ್ನು ಸಂಘಟಿಸಲು ಮತ್ತು ಅವರಿಗೆ ತರಬೇತಿ ನೀಡಿ ನಾಯಕತ್ವದ ಸ್ಥಾನಗಳಿಗೆ ತರಲು ವಿಶೇಷ ಕಾಳಜಿ ವಹಿಸಬೇಕು. ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ವಿಭಾಗಗಳಿಂದ ಬರುವ ಕಾರ್ಮಿಕರ ಬಗ್ಗೆ, ಯುವ ಕಾರ್ಮಿಕರ ಬಗ್ಗೆ, ಅಲ್ಪಸಂಖ್ಯಾತ ಸಮುದಾಯಗಳಿಂದ ಬರುವ ಕಾರ್ಮಿಕರ ಬಗ್ಗೆ ಸಿಐಟಿಯು ಸಂಘಗಳು ವಿಶೇಷ ಕಾಳಜಿವಹಿಸಬೇಕು. ನಿರುದ್ಯೋಗಿ ಯುವಕರನ್ನು ಸಂಘಟಿಸುವ ಕರ್ತವ್ಯವನ್ನು ಸಿಐಟಿಯು ಸಂಘಗಳು ಮನಗಾಣಬೇಕು. ಮುಖ್ಯವಾಗಿ ಕಾರ್ಮಿಕರ ನಡುವೆ ಕೋಮುವಾದಿ ಸಂಘಟನೆಗಳು ಮತ್ತು ಅವುಗಳ ಸಿದ್ಧಾಂತಗಳು ಬೇರೂರುತ್ತಿರುವುದನ್ನು ನಮ್ಮ ಸಿಐಟಿಯು ಸಂಘಗಳು ಗಂಭೀರವಾಗಿ ಪರಿಗಣಿಸಿ ಅವುಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸಲು ಕಾರ್ಮಿಕರನ್ನು ಸಜ್ಜುಗೊಳಿಸಬೇಕು ಎಂದು ಕಾಂ. ನಿತ್ಯಾನಂದಸ್ವಾಮಿ ಹೇಳಿದರು.

ಸಿಐಟಿಯು ಬೆಳ್ಳಿ ಹಬ್ಬ

ಆರಂಭದಲ್ಲಿ ಕಿರ್ಲೋಸ್ಕರ್ ಕಾರ್ಮಿಕ ಮುಖಂಡ ಪಿ.ವೈ. ಪಾಟೀಲ್ ಸ್ವಾಗತಿಸಿದರು. ಆರ್.ಬಿ. ಅಂಗಡಿ, ಸಿ.ಎಂ. ಜಯಾನಂದ, ಜೆ.ಎಂ. ಮಲ್ಲಿಕಾರ್ಜುನ ಸ್ವಾಮಿ ಮತ್ತು ಎಂ.ಎಸ್. ಆನಂದರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮೆರವಣಿಗೆ: ಸಭೆಯ ಪೂರ್ವದಲ್ಲಿ ಕಿರ್ಲೋಸ್ಕರ್ ಕಾರ್ಖಾನೆಯ ಗೇಟಿನಿಂದ ಕಾರ್ಮಿಕರ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಪಿ.ಜಿ. ಗೌಡರ್, ಹೆಚ್.ಎಸ್. ನಾಗರಾಜ, ಹೆಚ್. ಕರಿಲಿಂಗಪ್ಪ, ಜೆ.ಎಂ. ಶ್ರೀಕಂಠಪ್ಪ, ಜೆ. ಮೌಲಾ ಸಾಬ್, ಹೆಚ್.ಪಿ. ಜಯಮೂರ್ತಿ, ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು. ಕಿರ್ಲೋಸ್ಕರ್ ಹರಿಹರ ಪಾಲಿಫೈಬರ್ಸ್, ಸಂಗಂ ಸಾಲ್ವೆಂಟ್, ರಾಮ್ಕೋ ಇಂಡಸ್ಟ್ರೀಸ್, ಎನ್ನೆಸ್ ಪೇಪರ್ ಬೋರ್ಡ್ಸ್ ಕಾರ್ಖಾನೆಗಳ ಕಾರ್ಮಿಕರು ಮತ್ತು ಬೀಡಿ ಕಾರ್ಮಿಕ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಧ್ವಜಾರೋಹಣ

ಸಿಐಟಿಯು ಬೆಳ್ಳಿ ಹಬ್ಬದ ಅಂಗವಾಗಿ ಮೇ 30 ರ ಬೆಳಿಗ್ಗೆ ಕಿರ್ಲೋಸ್ಕರ್ ಕಾರ್ಮಿಕರ ಸಂಘದ ಕಛೇರಿ ಎದುರು ಕಾಂ. ನಿತ್ಯಾನಂದ ಸ್ವಾಮಿ ಅವರು ಸಿಐಟಿಯು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಕಾರ್ಮಿಕರನ್ನು ಉದ್ದೇಶಿಸಿ ಕಾರ್ಮಿಕ ಧುರೀಣರಾದ ಡಿ.ಜಿ. ಜೋಷಿ, ಜಿ. ಪರಮೇಶ್ವರಪ್ಪ, ರೇವಣ ಸಿದ್ದಪ್ಪ, ಮತ್ತು ಅಮಿನಾಬಿ ಅವರು ಮಾತನಾಡಿ ಅಗಲಿದ ಸಿಐಟಿಯು ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದರಲ್ಲದೆ ಸಿಐಟಿಯು ಸಂಘಟನೆಯ 25 ವರ್ಷಗಳ ಸಾಧನೆಯನ್ನು ಕೊಂಡಾಡಿದರು.

ಮೈಸೂರಿನಲ್ಲಿ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿ.ಐ.ಟಿ.ಯು.)ಕೇಂದ್ರ ಸಮಿತಿ ಸ್ಥಾಪನೆಗೊಂಡು ಮೇ 30ಕ್ಕೆ 25 ವರ್ಷಗಳು ಕಳೆದ ಹಿನ್ನೆಲೆಯಲ್ಲಿ ನಗರದ ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯೀಸ್ ಯೂನಿಯನ್ ಹಾಗೂ ಮೈಸೂರು ಡಿವಿಜನ್ ಹೋಟೆಲ್ ವರ್ಕರ್ಸ್ ಯೂನಿಯನ್ ಜಂಟಿಯಾಗಿ ಹಮ್ಮಿಕೊಂಡಿದ್ದ ಸಿಐಟಿಯು 25ನೇ ವಾರ್ಷಿಕ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಚಾಮುಂಡಿ ಮೇಷಿನ್ ಟೂಲ್ಸ್ ಕಾರ್ಮಿಕ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಸ್. ಗಂಗಾಧರ್ ರವರು ಆಗಮಿಸಿ ಮಾತನಾಡಿ ಕಾರ್ಮಿಕರ ಐಕ್ಯತೆಯ ಬಗ್ಗೆ ಹಾಗೂ ಮುಂದಿನ ದಿನಗಳ ಕಾರ್ಮಿಕ ಹೋರಾಟಗಳ ಬಗ್ಗೆ ತಿಳಿಸಿದರು. ಸಿಐಟಿಯು ಧ್ವಜಾರೋಹಣವನ್ನು ಜಿಲ್ಲಾ ಸಮಿತಿ ಸದಸ್ಯ ಶ್ರೀ ಎ.ಪಿ. ಪುಟ್ಟಣ್ಣ ಮಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಪುಟ್ಟಣ್ಣನವರು ಸಿಐಟಿಯುನ ಧ್ಯೇಯೋದ್ದೇಶಗಳನ್ನು ವಿವರಿಸಿ ಸಿಐಟಿಯುವಿನ ಹುಟ್ಟು ಬೆಳವಣಿಗೆಗಳ ಬಗ್ಗೆ ಸದಸ್ಯರಿಗೆ ತಿಳಿಸಿದರು.

ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯೀಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಜಗದೀಶ್ ರವರು ಕಾರ್ಯಕ್ರಮ ನಿರೂಪಣೆ ಮಾಡಿ ಕೊನೆಯಲ್ಲಿ ವಂದಿಸಿದರು. 25ನೇ ವರ್ಷದ ನೆನಪಿಗಾಗಿ ಸದಸ್ಯರಿಗೆ ಸಿಹಿ ಹಂಚಲಾಯಿತು.

ರೈತರ ಮೇಲೆ ಗೋಲಿಬಾರ್‌ನ ಸ್ಮರಣೆ ಜೂನ್ 6ರಂದು ಕರಾಳ ದಿನಾಚರಣೆ

ಕೋಲಾರ: ಕೋಲಾರ ಜಿಲ್ಲೆಯ ಹಾಲು ಉತ್ಪಾದಕರ ಸಂಘ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘ ಜೂನ್ 6ನ್ನು ಕರಾಳದಿನವನ್ನಾಗಿ ಆಚರಿಸಿತು. ಕಳೆದ ವರ್ಷ ಇದೇ ದಿನಾಂಕದಂದು(ಜೂನ್ 6, 1994) ಕೋಲಾರ ಜಿಲ್ಲಾಧಿಕಾರಿಗಳ ಕಚೇರಿಯ ಬಳಿ ಉತ್ಪಾದಕರ ಮತ್ತು ನೌಕರರ ಮೇಲೆ ಗುಂಡಿನ ಸುರಿಮಳೆ ಸುರಿಸಿ ರೈತರ ರಕ್ತ ಹರಿಡಿದ ದಿನ. ನ್ಯಾಯಕೇಳಲು ಹೋದ ಉತ್ಪಾದಕರ ಮತ್ತು ನೌಕರರ ಮೇಲೆ ಪೈಶಾಚಿಕ ಗುಂಡಿನ ದಾಳಿ ನಡೆಸಿದ ದಿನವನ್ನು "ಕರಾಳ ದಿನ"ವನ್ನಾಗಿ ಆಚರಿಸಿ ಕೋಲಾರ ಪ್ರವಾಸಿ ಮಂದಿರದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಸಾವಿರಾರು ಹಾಲು ಉತ್ಪಾದಕರು ಮತ್ತು ನೌಕರರು ಮೌನ ಮೆರವಣಿಗೆಯನ್ನು ನಡೆಸಿದರು. ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ 12 ಬೇಡಿಕೆಗಳ ಮನವಿಯನ್ನು ಅರ್ಪಿಸಿ 15 ದಿನಗಳ ಒಳಗೆ ನಮ್ಮ ಬೇಡಿಕೆಗಳಲ್ಲಿ ಕೆಲವನ್ನಾದರೂ ಈಡೇರಿಸದಿದ್ದರೆ ಮತ್ತೆ ಉಗ್ರ ಹೋರಾಟವನ್ನು ಪ್ರಾರಂಭಿಸಬೇಕಾಗುತ್ತದೆಂದು ಒಕ್ಕೂಟ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿತು. ಸಭೆಯನ್ನುದ್ದೇಶಿಸಿ ಆರ್. ವೆಂಕಟರಾಮಯ್ಯ, ಕೆ.ಆರ್. ವೆಂಕಟಶಿವಾರೆಡ್ಡಿ, ಅಬ್ಬಣಿ ಶಂಕರ್, ಕಾಂ. ಕೆ.ಎಂ. ವೆಂಕಟೇಶ್, ಎ.ಟಿ. ಕೃಷ್ಣನ್ ಮತ್ತು ವಿಧಾನಪರಿಷತ್ ಸದಸ್ಯರಾದ ಸುದರ್ಶನ್‌ರವರು ಮಾತನಾಡಿದರು.

ಪೋಲೀಸ್ ದೌರ್ಜನ್ಯ ಖಂಡಿಸಿ ಧರಣಿ ಸತ್ಯಾಗ್ರಹ

ಮೈಸೂರು: ನಗರ ಮೇಟಗಳ್ಳಿ ಠಾಣೆಯಲ್ಲಿ ಮಂಜೇಗೌಡನ ಕೊಪ್ಪಲು ನಿವಾಸಿ ಗೋವಿಂದೇಗೌಡರ ಮೇಲೆ ದೌರ್ಜನ್ಯ ನಡೆಸಿ ಅವರ ಸಾವಿಗೆ ಕಾರಣರಾದ ಮೇಟಗಳ್ಳಿ ಠಾಣೆಯ ತಪ್ಪಿತಸ್ಥ ಪೋಲೀಸರ ಮೇಲೆ ಕ್ರಮ ಜರುಗಿಸಬೇಕೆಂದು ಹಾಗೂ ಈ ವಿಚಾರಣೆಯನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಮೈಸೂರು ನಗರ ಸಮಿತಿ ಒತ್ತಾಯಿಸಿದೆ. ಈ ಅಮಾನುಷ ಪೋಲೀಸ್ ವರ್ತನೆಯನ್ನು ಖಂಡಿಸಿ ಮೇ 20 ರಂದು ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಸತ್ಯಾಗ್ರಹವನ್ನು ಸಂಘಟಿಸಲಾಗಿತ್ತು. ಧರಣಿಯ ನೇತೃತ್ವವನ್ನು ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜುರವರು ವಹಿಸಿದ್ದರು. ನೂರಕ್ಕೂ ಹೆಚ್ಚು ಜನ ಭಾಗವಹಿಸಿದ್ದ ಧರಣಿಯಲ್ಲಿ ನಗರ ಸಮಿತಿ ಅಧ್ಯಕ್ಷ ಬಿ.ಎಂ. ಪ್ರಭು ಉಪಾಧ್ಯಕ್ಷ ಎ.ಪಿ. ಪುಟ್ಟಣ್ಣ ಹಾಗೂ ಕಾರ್ಯದರ್ಶಿ ಹೆಚ್.ಎಸ್. ಜಗದೀಶ್ ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಮೋಹನ್ ಕುಮಾರ್ ಹಾಗೂ ಶ್ರೀನಿವಾಸ್ ಗಾಯತ್ರಿ ಕೈಲಾಸ್ ರವರು ಭಾಗವಹಿಸಿದ್ದರು.

ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಬಸವರಾಜುರವರು ನಗರದಲ್ಲಿ ಅಮಾಯಕ ಜನರ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿ ಮೃತ ಗೋವಿಂದೇ ಗೌಡರ ಕುಟುಂಬಕ್ಕೆ ನ್ಯಾಯ ದೊರಕುವವರೆಗೆ ಹಂತ ಹಂತವಾಗಿ ಹೋರಾಟವನ್ನು ಮುಂದುವರೆಸಲಾಗುವುದೆಂದರು. ಕೊನೆಯಲ್ಲಿ ನಗರ ಸಮಿತಿ ಕಾರ್ಯದರ್ಶಿ ಹೆಚ್.ಎಸ್. ಜಗದೀಶ್ ವಂದನಾರ್ಪಣೆ ಮಾಡಿದರು.

ಕಲಾಭವನದಲ್ಲಿ ಸಾರಾಯಿ ಹರಾಜು: ಕಲಾವಿದರ ಪ್ರತಿಭಟನೆ

ಧಾರವಾಡ: ಮಹಾನಗರದ ಸುಪ್ರಸಿದ್ಧ ಹಾಗೂ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೇಂದ್ರ ಸ್ಥಳವಾದ ಡಾ. ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ ಮೇ 31ರಂದು ವಾರ್ಷಿಕ ಸಾರಾಯಿ ಹರಾಜು ಮಾಡುವುದನ್ನು ನಗರದ ಸಾಂಸ್ಕೃತಿಕ ಹಾಗೂ ಸಾಮೂಹಿಕ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಿದವು.

ವಿವಿಧ ಸಂಘಟನೆಗಳ ಪ್ರತಿನಿಧಿಗಳು ವಿದ್ಯಾವರ್ಧಕ ಸಂಘದಿಂದ ನಾಡಿನ ಹಿರಿಯ ಕಲಾವಿದರಾದ ವಿಣಾಗಿ ಬಾಳಪ್ಪನವರ ನೇತೃತ್ವದಲ್ಲಿ ಕಲಾಭವನದವರೆಗೆ ಮೆರವಣಿಗೆಯಲ್ಲಿ ಹೋಗಿ ಅಲ್ಲಿಯ ಬಿಗಿ ಪೋಲೀಸ್ ಬಂದೋಬಸ್ತನ್ನು ಲೆಕ್ಕಿಸದೆ ಧರಣಿ ಕೂತರು. ಪ್ರಾರಂಭದಲ್ಲಿ ಜಿಲ್ಲಾಧಿಕಾರಿಗಳು ಕಲಾಭವನದ ಹೊರಗೆ ಬರಲು ಒಪ್ಪದಿದ್ದರೂ ನಂತರ ಪ್ರತಿಭಟನೆಯು ಕಾವೇರಿದಾಗ ಅನಿವಾರ್ಯವಾಗಿ ಬಂದು ವಿಣಾಗಿ ಬಾಳಪ್ಪನವರಿಂದ ಮನವಿಯನ್ನು ಸ್ವೀಕರಿಸಿದರು.

ಸಮುದಾಯದ ಅಧ್ಯಕ್ಷರಾದ ಸಿ.ಆರ್. ಭಟ್ ಅವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಕಲಾಭವನವನ್ನು ಸಾರಾಯಿ ಹರಾಜಿಗಾಗಿ ದುರುಪಯೋಗ ಮಾಡುತ್ತಿರುವುದು ಚಿತ್ರಕಲಾವಿದರಿಗೂ, ರಂಗಭೂಮಿ ಹಾಗೂ ಸಾಂಸ್ಕೃತಿಕ ಸಂಘಟನೆಗಳಿಗೂ ಅತೀವ ಅಘಾತವಾಗಿದೆ. ಈ ಕ್ರಮವು ಧಾರವಾಡದ ಖ್ಯಾತಿಯನ್ನು ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಏರಿಸಿದ ಪದ್ಮಭೂಷಣ ಡಾ. ಮಲ್ಲಿಕಾರ್ಜುನ ಮನ್ಸೂರ್ ಅವರ ಹೆಸರಿಗೂ ಕಳಂಕ ತರುವಂತಾಗಿದೆ ಎಂದರು.

ಪ್ರತಿಭಟನಾ ಕಾರ್ಯಕ್ರಮದಲ್ಲಿ ಸಮುದಾಯ, ಬಿ.ಜಿ.ವಿ.ಎಸ್., ಇಪ್ಟಾ, ಮ್ಯಾಳ, ಸಂಯುಕ್ತ ಮಹಿಳಾ ವೇದಿಕೆ, ಎಸ್.ಎಫ್.ಐ., ಎ.ಐ.ಎಸ್.ಎಫ್., ವಿಮಾ ನೌಕರರ ಸಂಘ, ಕಲಾ ಮಂಡಳಿ, ಶಾರದಾ ನೃತ್ಯ ಕಲಾನಿಕೇತನ, ವಕೀಲರ ಸಂಘ ಮುಂತಾದ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 'ಇಪ್ಟಾ'ದ ರಾಜ್ಯ ಸಂಚಾಲಕರಾದ ಡಾ. ಸಿದ್ದನಗೌಡ ಪಾಟೀಲ ಪ್ರತಿಭಟನಾ ಕಾರ್ಯಕ್ರಮವನ್ನು ಸಂಘಟಿಸಿದ್ದರು.

ಬಸ್ ಪಾಸ್ ಪದ್ಧತಿ ಬದಲಾವಣೆ: ಪ್ರತಿಭಟನಾ ಪ್ರದರ್ಶನ

ಬಸ್ ಪಾಸ್ ಪದ್ಧತಿಯಲ್ಲಿ ಬದಲಾವಣೆಯನ್ನು ತಂದು ಟಿಕೆಟ್ ಮೂಲಕ, ಬಸ್ ಪಾಸ್ ದರವನ್ನು ಹಲವಾರು ಪಟ್ಟು ಏರಿಸುವ ಕೆ.ಎಸ್.ಆರ್.ಟಿ.ಸಿ. ತೀರ್ಮಾನವನ್ನು ಪ್ರತಿಭಟಿಸಿ ಹಲವಾರು ಶಾಲಾ ಕಾಲೇಜು ವಿದ್ಯಾರ್ಥಿಗಳು ಜೂನ್ 6ರಂದು ಮೈಸೂರು ಬ್ಯಾಂಕ್ ವೃತ್ತದ ಬಳಿ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಅವರು ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿಯನ್ನು ಖಂಡಿಸಿ ಕೆಎಸ್‌ಆರ್‌ಟಿಸಿಯ ವಿದ್ಯಾರ್ಥಿ ಬಸ್ ಪಾಸ್‌ಗೆ ನೀಡುವ ಸಬ್ಸಿಡಿಯನ್ನು ಸರ್ಕಾರವೇ ತುಂಬಿ ಕೊಡಬೇಕೆಂದು ಒತ್ತಾಯಿಸಿದರು.

ಇದುವರೆಗೆ ಯಾವ ಶುಲ್ಕವನ್ನು ಕೊಡದೆ ಇದ್ದ ಏಳನೇ ತರಗತಿಯವರೆಗಿನ ಮಕ್ಕಳು ಇನ್ನು ಮುಂದೆ ತಿಂಗಳಿಗೆ 15 ರೂ.ಗಳನ್ನು ಕೊಡಬೇಕಾಗುತ್ತದೆ. ಇದುವರೆಗೆ ತಿಂಗಳಿಗೆ 5 ರೂ. ಮಾತ್ರ ಕೊಡುತ್ತಿದ್ದ ಪ್ರೌಢ ಶಾಲಾ ವಿದ್ಯಾರ್ಥಿಗಳು ಇನ್ನು ಮುಂದೆ ತಿಂಗಳಿಗೆ 30 ರೂ. ಕೊಡಬೇಕಾಗುತ್ತದೆ.

ಕಾಲೇಜು ವಿದ್ಯಾರ್ಥಿಗಳು 45ರೂ ಕೊಡಬೇಕಾಗಿದ್ದು, ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಇದು ತಿಂಗಳಿಗೆ 60 ರೂ. ಆಗುತ್ತದೆ.

ಯಾವುದೇ ವಿದ್ಯಾರ್ಥಿ ಶಾಲಾ ಕಾಲೇಜನ್ನು ತಲುಪಲು ಒಂದಕ್ಕಿಂತ ಹೆಚ್ಚು ಬಸ್ ಹಿಡಿಯಬೇಕಾಗಿದ್ದಲ್ಲಿ ಈ ದರ ಎರಡು ಪಟ್ಟು ಅಥವಾ ಮೂರು ಪಟ್ಟು ಹೆಚ್ಚಾಗಲಿದೆ.

ಕೆಎಸ್‌ಆರ್‌ಟಿಸಿಯ ಆಡಳಿತಾಧಿಕಾರಿಗಳ ಜೊತೆ ಎಸ್.ಎಫ್.ಐ. ನಿಯೋಗ ಈಗಾಗಲೇ ಈ ಬಗ್ಗೆ ಚರ್ಚಿಸಿ ಮನವಿ ಪತ್ರವನ್ನು ಸಲ್ಲಿಸಿದೆ. ಕಳೆದ ವರ್ಷವೇ ಸರ್ಕಾರ ಇಂತಹ ಬದಲಾವಣೆಯ ಪ್ರಯತ್ನ ಮಾಡಿದ್ದು, ವಿದ್ಯಾರ್ಥಿಗಳ ತೀವ್ರ ಪ್ರತಿಭಟನೆಯಿಂದ ಆ ನೀತಿ ವಾಪಸ್ಸಾಗಿತ್ತು. ನಂತರದ ಚುನಾವಣೆಯಲ್ಲಿ ವಿದ್ಯಾರ್ಥಿಗಳ -ಶಿಕ್ಷಣದ ಪರವಾಗಿ ಮಾತನಾಡಿ ಅಧಿಕಾರಕ್ಕೆ ಬಂದ ಜನತಾದಳ ಸರಕಾರ ಅದೇ ವಿದ್ಯಾರ್ಥಿ ವಿರೋಧಿ ನೀತಿಯನ್ನು ಬೇರೆ ರೀತಿಯಲ್ಲಿ ಜಾರಿಗೆ ತರಲು ಹೊರಟಿದೆ.

ಇದು ವಿದ್ಯಾರ್ಥಿಗಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಪಿತೂರಿಯಾಗಿದ್ದು ಈ ಶಿಕ್ಷಣ ನೀತಿ ವಾಪಸ್ಸಾಗದಿದ್ದಲ್ಲಿ ರಾಜ್ಯಾದ್ಯಂತ ತೀವ್ರವಾಗಿ ಹೋರಾಟವನ್ನು ಸಂಘಟಿಸುವುದಾಗಿ ಎಸ್‌ಎಫ್‌ಐ ಎಚ್ಚರಿಸಿದೆ.

ಕರ್ನಾಟಕ ಸುದ್ದಿ ಸಮಾಚಾರ

ಸಾಂಸ್ಕೃತಿಕ ರಂಗದಲ್ಲಿ ಆರ್ಥಿಕ ನೀತಿಗಳ ಹಾವಳಿಯನ್ನು ಗಮನಿಸಿದ ಕನ್ನಡ ಸಾಹಿತ್ಯ ಸಮ್ಮೇಳನ

64ನೇ ಕನ್ನಡ ಸಾಹಿತ್ಯ ಸಮ್ಮೇಳನ ಜೂನ್ 3ರಿಂದ 5ರವರೆಗೆ ಮುದೋಳದಲ್ಲಿ ಡಾ॥ ಹೆಚ್.ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿದೆ.

ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಬೆದರಿಕೆ ಬಂದಿರುವುದು ತಮಿಳರಿಂದ, ಮರಾಠಿಗರಿಂದ, ವಲಸೆಯಿಂದ ಎಂದೆಲ್ಲಾ ಒಂದೆಡೆ ಪ್ರಚಾರ ಮಾಡುತ್ತಾ, ಇನ್ನೊಂದೆಡೆ ಇಂತಹವರೇ ಮರಾಠಿಗ ಬಾಳಠಾಕ್ರೆಯನ್ನು ಮೆಚ್ಚುತ್ತಿರುವ ವಾತಾವರಣದಲ್ಲಿ ಕನ್ನಡದ ಸಂಸ್ಕೃತಿಯ ಮೇಲೆ ನಿಜವಾದ ಧಾಳಿ ಎಲ್ಲಿಂದ ಬರುತ್ತಿದೆ. ಮತ್ತು ಇದು ಕೇವಲ ಕನ್ನಡದ ನೋವಷ್ಟೇ ಅಲ್ಲ, ಎಲ್ಲಾ ಭಾರತೀಯ ಭಾಷೆಗಳ ನೋವು ಎಂಬ ಬಗ್ಗೆ ಸಾಹಿತ್ಯ ಸಮ್ಮೇಳನದಲ್ಲಿ ಸ್ವಲ್ಪವಾದರೂ ಗಮನ ಹರಿದಿದೆ ಎಂಬುದು ಸಮಾಧಾನದ ಸಂಗತಿ.

ಕನ್ನಡ ಸಂಸ್ಕೃತಿ ಮೇಲೆ ಟಿ.ವಿ. ಧಾಳಿ ಬಾಂಬ್‌ಗಿಂತ ಭೀಕರ ಎಂದು ಸಮ್ಮೇಳನಾಧ್ಯಕ್ಷರು ತಮ್ಮ ಪ್ರಾರಂಭದ ಭಾಷಣದಲ್ಲಿ ಎಚ್ಚರಿಸಿದರೆ ಸಮಾರೋಪ ಭಾಷಣದಲ್ಲಿ ಡಾ.ಯು.ಆರ್. ಅನಂತಮೂರ್ತಿಯವರು "ತೀವ್ರವಾಗಿ ನಡೆಯುತ್ತಿರುವ ಜಾಗತೀಕರಣದಿಂದ ಭಾರತದ ಯಾವ ಭಾಷೆಗಳಿಗೂ ಭವಿಷ್ಯವಿಲ್ಲದಂತಾಗುತ್ತಿದೆ" ಎಂದಿರುವುದಾಗಿ ವರದಿಯಾಗಿದೆ.

ಸಮ್ಮೇಳನದ ಅಂಗವಾಗಿ ನಡೆದ ಉಪನ್ಯಾಸದಲ್ಲಿ ಸಾಹಿತ್ಯ ಸಂಸ್ಕೃತಿಗೂ ಗ್ಯಾಟ್ ಒಪ್ಪಂದಕ್ಕೂ ಇರುವ ಸಂಬಂಧಗಳ ಬಗ್ಗೆ ಚರ್ಚೆಯೂ ನಡೆಯಿತು ಎಂದು ವರದಿಯಾಗಿದೆ.

ಟಿ.ವಿ.ಯ ಉಪಗ್ರಹ ಚಾನಲ್ ಗಳ ಭರಾಟೆ, ಜಾಗತೀಕರಣ ಇವೆಲ್ಲಾ ನರಸಿಂಹರಾಯರ ಸರಕಾರ 1991ರಲ್ಲಿ ಆರಂಭಿಸಿದ 'ಉದಾರೀಕರಣ'ದ ಮೂಲಕ ಮುಂದುವರಿದ ಬಂಡವಾಳಶಾಹೀ ದೇಶಗಳೆದುರು ಮೊಣಕಾಲೂರಿದುದರ ಫಲಶೃತಿಗಳು, ಗ್ಯಾಟ್ ಒಪ್ಪಂದ ಅದೇ ಶರಣಾಗತಿಯ ದುಷ್ಫಲ ಎಂಬುದನ್ನು ಅರಿತು ಈ ಬಗ್ಗೆ ಆಳವಾದ ಅಧ್ಯಯನ ನಡೆಸುವುದು, ಈಗಾಗಲೇ ಈ ಜನ-ವಿರೋಧಿ ನೀತಿಗಳ ವಿರುದ್ಧ ಹೋರಾಟದ ಕಣದಲ್ಲಿರುವ ದುಡಿಯುವ ಜನಗಳ ಸಂಘಟನೆಗಳ ಜೊತೆಗೂಡುವುದು ಈಗ ಕರ್ನಾಟಕದ ಜನ, ಸಂಸ್ಕೃತಿಯ ಬಗ್ಗೆ ನೈಜ ಕಾಳಜಿಯುಳ್ಳವರೆಲ್ಲರ ಪ್ರಮುಖ ಕರ್ತವ್ಯವಾಗಬೇಕಲ್ಲವೇ? ಒಂದು ಕಡೆ 'ಜಾಗತೀಕರಣ'ದ ಸಾಂಸ್ಕೃತಿಕ ಅಪಾಯದ ಬಗ್ಗೆ ಮಾತನಾಡುತ್ತಾ ಅಥವಾ ಉಪಗ್ರಹ ಚಾನೆಲ್‌ಗಳ ವಿರುದ್ಧ ವಾಗ್ದಾಳಿ ನಡೆಸುತ್ತಾ, ಇನ್ನೊಂದೆಡೆ ನರಸಿಂಹರಾಯರ ಆರ್ಥಿಕ ನೀತಿಗಳನ್ನು ಹೊಗಳುವುದು ಅಥವಾ ಆ ಬಗ್ಗೆ ಮಾತನಾಡದೇ ಇರುವುದು ಪ್ರಾಮಾಣಿಕತೆಯ ಲಕ್ಷಣವಾಗಲಾರದು.

ಸಿಐಟಿಯು ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಈ ಲೇಖನಮಾಲೆಯ ೨ನೇ ಲೇಖನದಲ್ಲಿ ಕಳೆದವಾರ ಕರ್ನಾಟಕದಲ್ಲಿ ಸಿಐಟಿಯು ಆರಂಭವಾಗುವ ಹಿಂದಿನ ದಿನಗಳಲ್ಲಿನ ಕಾರ್ಮಿಕ ಆಂದೋಲನದ ಒಂದು ಚಿತ್ರವನ್ನು ನೋಡಿದ್ದೀರಿ. ಈ ವಾರ ಈ ಲೇಖನದ ಮುಂದುವರಿದ ಭಾಗದಲ್ಲಿ ಸಿಐಟಿಯು ಸ್ಥಾಪನೆಯ ನಂತ[ರ] ರಾಜ್ಯದಲ್ಲಿ ನಡೆದ ಕಾರ್ಮಿಕ ಹೋರಾಟಗಳ ಒಂದು ವಿಶ್ಲೇಷಣೆ ಇಲ್ಲಿದೆ.

ಕರ್ನಾಟಕದಲ್ಲಿ ಸಿಐಟಿಯು

ಹೊರಗಿನ, ಒಳಗಿನ ಹೋರಾಟದಿಂದ ಬೆಳವಣಿಗೆ

ಲೇಖನ ಮಾಲೆ : 3

ವಿ.ಜೆ.ಕೆ. ನಾಯರ್

ಸಿಐಟಿಯು ಸ್ಥಾಪನಾ ಸಮ್ಮೇಳನದಲ್ಲಿ ರಾಜ್ಯದ ಪ್ರತಿನಿಧಿಗಳು ಸಂಖ್ಯೆ ಹಾಗೂ ಸದಸ್ಯತ್ವ ದೇಶದಲ್ಲಿ ನಾಲ್ಕನೇ ಅತಿ ದೊಡ್ಡ ತುಕಡಿಯಾಗಿತ್ತು. ಮೊದಲ ರಾಜ್ಯ ಸಮ್ಮೇಳನ 1971ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಅದು ಎಸ್. ಸೂರ್ಯನಾರಾಯಣರಾವ್ ರವರನ್ನು ಅಧ್ಯಕ್ಷರಾಗಿ ಆರಿಸಿತು. ಆಗ ಅವರು ದಾವಣಗೆರೆಯಲ್ಲಾಗಿದ್ದ ಕೊಲೆಯ ಸುಳ್ಳು ಆಪಾದನೆಯಲ್ಲಿ ಜೈಲಿನಲ್ಲಿದ್ದರು. ಮೊದಲ ಸಮ್ಮೇಳನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟ ಬಿ.ಎನ್. ಕುಟ್ಟಪ್ಪರನ್ನು ನಂತರ 1978ರಲ್ಲಿ ಸಿಐಟಿಯುವಿನಿಂದಲೂ ಉಚ್ಚಾಟನೆಗೊಳಿಸಬೇಕಾಯಿತು. ಅವರೊಂದಿಗೆ ಆಗ ಪಕ್ಷದ ಕಾರ್ಯದರ್ಶಿಯಾಗಿದ್ದ ಎಂ.ಹೆಚ್. ಕೃಷ್ಣಪ್ಪ ಹಾಗೂ ರೈತ ಸಂಘದ ಕಾರ್ಯದರ್ಶಿ ಹೆಚ್.ಎಸ್. ರಾಮರಾವ್ ಅವರನ್ನು ಉಚ್ಚಾಟನೆ ಮಾಡಲಾಯಿತು.

1973-78ರಲ್ಲಿ ಪಕ್ಷದೊಳಗಿನ ಸಂಘಟನಾ ಸಮಸ್ಯೆ ಕರ್ನಾಟಕದಲ್ಲಿ ಮತ್ತು ಬೆಂಗಳೂರಿನಲ್ಲಿ ಸಿಐಟಿಯು ಬೆಳವಣಿಗೆಗೂ ತಡೆಯಾಗಿತ್ತು. ಈ ಸಂಗಾತಿಗಳು ಸಂಕುಚಿತ ತಿಳುವಳಿಕೆ ಹೊಂದಿದ್ದರು. ಅದರ ಪ್ರಕಾರ ದೊಡ್ಡ ಉದ್ದಿಮೆಗಳ ಕಾರ್ಮಿಕರ ನಡುವೆ ಕೆಲಸ ಮಾಡುವುದು ನಿಷ್ಪ್ರಯೋಜಕ ಎಂದು ಭಾವಿಸಿದ್ದರು. ಇದರರ್ಥ ಅವರು ಶಾಮೀಲುವಾದಿಗಳ ವಿರುದ್ಧ ಹೋರಾಟಕ್ಕೆ ಗಮನವನ್ನೇ ಕೊಡಲಿಲ್ಲ ಎಂದೇನಲ್ಲ, ಕಾರ್ಮಿಕರನ್ನು ಈ ಹೋರಾಟದತ್ತ ಆಕರ್ಷಿಸುವ ಒಂದು ಮಾರ್ಗವನ್ನು ಬೆಳೆಸುವತ್ತ ಸಾಕಷ್ಟು ಗಮನ ನೀಡಲಿಲ್ಲ. ಇದರೊಡನೆ ಸಾರ್ವಜನಿಕ ವಲಯದ ಕಾರ್ಮಿಕರು ಗುಟ್ಟಾಗಿಯೇ ಕಾರ್ಯ ನಿರ್ವಹಿಸಬೇಕು ಎಂಬ ಒಂದು ತಪ್ಪು ನಂಬಿಕೆಯೂ ಇತ್ತು. ಇದು ಅಖಿಲ ಭಾರತ ಮಟ್ಟದಲ್ಲಿ ತುರ್ತು ಪರಿಸ್ಥಿತಿಯ ನಂತರದ ಅವಧಿಯವರೆಗೂ ಅನುಸರಿಸುತ್ತಿದ್ದ ಮಾರ್ಗಕ್ಕೆ ಅನುಗುಣವಾಗಿಯೇ ಇತ್ತು. ನವೆಂಬರ್ 1976ರಲ್ಲಿ ಹೊಸ ಮಾರ್ಗ ರೂಪಿಸುವವರೆಗೂ ಇದು ಮುಂದುವರೆಯಿತು.

ಪಶ್ಚಿಮ ಬಂಗಾಳದ ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ ಅಲ್ಲಿ ಮೊದಲ ಇಂಜಿನಿಯರಿಂಗ್ ಉದ್ದಿಮೆ ವೇತನ ಮಂಡಳಿ ಅಧ್ಯಕ್ಷರ ಶಿಫಾರಸುಗಳನ್ನು ಜ್ಯಾರಿ ಮಾಡಿದ್ದನ್ನು ಕಂಡ ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಅವೇ ಬೇಡಿಕೆಗಳು ಬಂದವು. ಆದರೂ ಮೇಲೆ ಹೇಳಿದ ಕಾರಣಗಳಿಂದಾಗಿ ನಾವು 1970ರ ದಶಕದ ಆರಂಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಧ್ಯಪ್ರವೇಶಿಸಲಾಗಲಿಲ್ಲ.

ಸರಕಾರದ ನೀತಿಗಳಿಗೆ ಪ್ರತಿರೋಧ

ತುರ್ತು ಪರಿಸ್ಥಿತಿಯ ಮೊದಲಿನ ಅವಧಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ವೇತನ ಸ್ತಂಭನ ನೀತಿ ಅಂಗೀಕರಿಸಿದ್ದನ್ನು ಪ್ರತಿರೋಧಿಸುವಲ್ಲಿ ರಾಜ್ಯದಲ್ಲಿ ಸಿಐಟಿಯು, ಎ.ಐ.ಐ.ಇ.ಎ (ವಿಮಾ ನೌಕರರ ಸಂಘ) ಜೊತೆಗೆ ನೇತೃತ್ವ ವಹಿಸಿತು. ರೈಲ್ವೇ ಮುಷ್ಕರದ ಸಮಯದಲ್ಲೂ ನಾವು ನಮ್ಮ ಶಕ್ತ್ಯನುಸಾರ ಪ್ರಯತ್ನಿಸಿದೆವು. ಸಿಐಟಿಯು ಇನ್ನೂ ಕೆಲವು ಸಭೆಗಳನ್ನು ನಡೆಸಿ 'ಎಲ್ಲರಿಗೂ ಬೋನಸ್'ನ ಬೇಡಿಕೆ ಎತ್ತಲಾಯಿತು. 1979ರ ಕಡ್ಡಾಯ ಠೇವಣಿ ಕಾನೂನು ಹಾಗೂ ಕನಿಷ್ಠ ಬೋನಸ್ ಮಿತಿಯನ್ನು ಶೇ. 4ಕ್ಕೆ ಇಳಿಸಿದ್ದು ಇತ್ಯಾದಿಗಳು ಕಾರ್ಮಿಕವರ್ಗಕ್ಕೆ ಪ್ರತಿಕೂಲವಾಗಿದ್ದರೂ ಅದಕ್ಕಾಗಿ ಯಾವುದೇ ಹೋರಾಟ ಬೆಳೆಸುವುದು ಸಾಧ್ಯವಾಗಲಿಲ್ಲ.

1978-79ರಲ್ಲಿ ಮಾತ್ರ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಪಿ.ರಾಮಮೂರ್ತಿಯವರ ಸಕ್ರಿಯ ನೆರವಿನಿಂದ ಬೆಂಗಳೂರಿನಲ್ಲಿ ನೇರವಾಗಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಒಂದು ನಿಲುವನ್ನು ರೂಪಿಸಲಾಯಿತು. ಇದಕ್ಕೆ ಮೊದಲು 1977ರಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ಜನತಾ ಪಕ್ಷದ ವಿಜಯದ ಅತ್ಯುತ್ಸಾಹದ ವಾತಾವರಣದ ಪ್ರಯೋಜನ ಪಡೆದು ಬಿ.ಇ.ಎಲ್. ನಲ್ಲಿದ್ದ ನಾವು ಇಂಟಕ್ ತನ್ನನ್ನು ತಾನೇ ಪರಿವರ್ತಿಸಿಕೊಳ್ಳುವಂತೆ ಮಾಡಲು ಸಾಧ್ಯವಾಯಿತು. ಎ.ಐ.ಟಿ.ಯು.ಸಿ.ಯಿಂದ ಹೊರಬಂದು ಇಂಟಕ್ ಸಂಘ ಇಂಟಕ್‌ನೊಂದಿಗೆ ಸಂಬಂಧ ಕಡಿದುಕೊಳ್ಳುವಂತೆ ಮಾಡುವುದು ಸಾಧ್ಯವಾಯಿತು. ನಾವು ಅದರೊಂದಿಗೆ "ಕಾರ್ಮಿಕರ ಐಕ್ಯತಾ ವೇದಿಕೆ" (WUF) ಎಂದು ಹೆಸರಿಸಿಕೊಂಡ ಸಂಘದಲ್ಲಿ ಸೇರಿಕೊಂಡೆವು. ಹೀಗೆ ಬಿ.ಇ.ಎಲ್. ನಲ್ಲಿ ಎ.ಐ.ಟಿ.ಯು.ಸಿ.ಯ ಪ್ರಾಬಲ್ಯಕ್ಕೆ ಸವಾಲು ಹಾಕಲು ಸಾಧ್ಯವಾಯಿತು. ಈಗ ಪಿ.ರಾಮಮೂರ್ತಿಯವರ ಸಕ್ರಿಯ ಮಾರ್ಗದರ್ಶನದಿಂದ ಬಿ.ಪಿ.ಐ. ಮಾರ್ಗ ನಿರ್ದೇಶನಗಳ ವಿರುದ್ಧ ಭೂತಲಿಂಗಂ ಸಮಿತಿಯ ವಿರುದ್ಧ ಹೋರಾಟದ ಹಾದಿಯನ್ನು ಅನುಸರಿಸಲು ಸಾಧ್ಯವಾಯಿತು. ಆದರೆ ಬೆಂಗಳೂರಿನ 'ಸಾರ್ವಜನಿಕ ವಲಯದ ಸಂಘಗಳ ಜಂಟಿ ಕ್ರಿಯಾ ಸಮಿತಿ (ಜೆ.ಎ.ಸಿ.)ಯ ಮುಖಂಡರು ಅಖಿಲ ಭಾರತ ಮಟ್ಟದಲ್ಲಿ ಹೋರಾಟ ನಡೆಸಬೇಕಾದುದರ ಅಗತ್ಯಕ್ಕೆ ಕಿವಿಗೊಡುವ ಮನಸ್ಥಿತಿಯಲ್ಲಿರಲಿಲ್ಲ. ಹಿಂದೆ ಇಂಟಕ್ ಮುಖಂಡರಾಗಿದ್ದು ಅವರು ಸಿಐಟಿಯು ದಾರಿಯನ್ನು ತಿರಸ್ಕರಿಸಲು ಎ.ಐ.ಟಿ.ಯು.ಸಿ. ಮತ್ತು ಇತರ ಶಾಮೀಲುಗಾರರೊಂದಿಗೆ ಕೈ ಮಿಲಾಯಿಸಿದರು. ಅಖಿಲ ಭಾರತ ಮಟ್ಟದಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರ ಒಗ್ಗಟ್ಟನ್ನು ಅವರು ಒಡೆದರು. ಬೆಂಗಳೂರು ಆಧಾರಿತ ಸಾರ್ವಜನಿಕ ಘಟಕಗಳ ಜೆ.ಎ.ಎಫ್. (ಜಂಟಿ ಕ್ರಿಯಾ ರಂಗ) ರಚಿಸಿ ಉದ್ದೇಶಪೂರ್ವಕವಾಗಿ ಬಿ.ಹೆಚ್.ಇ.ಎಲ್.ನ್ನು ಹೊರಗಿಟ್ಟರು. ಏಕೆಂದರೆ ಅಲ್ಲಿ ಸಿಐಟಿಯುನ ಶಕ್ತಿ ಬಲವಾಗಿತ್ತು.

ಆಗ ನಾವು ಬಿ.ಇ.ಎಲ್. ನಲ್ಲಿರುವವರು ಎ.ಐ.ಟಿ.ಯು.ಸಿ. ಜತೆ ಕೈಮಿಲಾಯಿಸಿ, ವಿಶ್ವಾಸಘಾತ ಮಾಡಿದ WUF ನ ಮುಖಂಡತ್ವದ ವಿರುದ್ಧ ತೀವ್ರ ಪ್ರಚಾರ ನಡೆಸಿದೆವು. WUF ನಿಂದ ಹೊರಬಂದು, ಎ.ಐ.ಟಿ.ಯು.ಸಿ.ಯಿಂದ ಕೆಲವರನ್ನು ನಮ್ಮೊಡನೆಗೆ ಗೆದ್ದುಕೊಂಡು ಬಿ.ಇ.ಎಲ್.ನಲ್ಲಿ ನಮ್ಮದೇ ಸಂಘ ರಚಿಸಿದೆವು. ಇಂಟಕ್ ಸಂಘ ಇಂಟಕ್ ನೊಂದಿಗೆ ಸಂಬಂಧ ಕಡಿದುಕೊಳ್ಳಬೇಕೆಂದು ಹೇಳಿದಾಗ ನಾವು ಒಂದು ಉದ್ದಿಮೆಯಲ್ಲಿ ಒಂದು ಸಂಘ ಇರಬೇಕೆಂದು ವಾದಿಸಿದ್ದೆವು. ಇದರಿಂದಾಗಿ ನಾವು ರಚಿಸಿಕೊಂಡ ಸಂಘ ಸ್ವತಂತ್ರ ಸಂಘ ಎಂದೆವು. ಬಹಳ ಸಮಯದ ನಂತರ ಸಿಐಟಿಯು ಮುಖಂಡರು ಅದರ ಮುಖಂಡತ್ವ ವಹಿಸಿ ಅದನ್ನು ಸಿಐಟಿಯುಗೆ ಸಂಬದ್ಧಗೊಳಿಸಲಾಯಿತು.

ಜೆ.ಎ.ಎಫ್. ಅಖಿಲ ಭಾರತ ಮಟ್ಟದಲ್ಲಿ ಬಿ.ಪಿ.ಐ. ಮಾರ್ಗದರ್ಶನಗಳ ವಿರುದ್ಧ ಐಕ್ಯತೆಯಿಂದ ವಿರೋಧಿಸಿ ಅವನ್ನು ಸೋಲಿಸುವ ಅಗತ್ಯವನ್ನು ಉಪೇಕ್ಷಿಸಿ ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳಲ್ಲಿ ಒಂದು ಒಪ್ಪಂದವನ್ನು ಹೇರಿತು. ಆದರೆ ಅದರಲ್ಲೊಂದು ಮುಖವುಳಿಸಿಕೊಳ್ಳುವ ಕಲಮು ಇತ್ತು. ಬೇರೆ ಯಾವುದೇ ಸಾರ್ವಜನಿಕ ವಲಯದ ಉದ್ದಿಮೆ, ಉದಾಹರಣೆಗೆ ಬಿ.ಹೆಚ್.ಇ.ಎಲ್.ನಲ್ಲಿ ಒಂದು ಹೆಚ್ಚಿನ ವೇತನ ಮಟ್ಟವಿರುವ ಇತ್ಯರ್ಥ ಮಾಡಿಕೊಂಡಲ್ಲಿ ಅದನ್ನು ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರಿಗೂ ಕೊಡಬೇಕು ಎಂಬುದೇ ಆ ಕಲಮು. ನಂತರ ಬಿ.ಹೆಚ್.ಇ.ಎಲ್. ನಲ್ಲಿ ಒಂದು ಹೆಚ್ಚಿನ ವೇ[ತನ] ಮಟ್ಟವಿರುವ ಒಪ್ಪಂದಕ್ಕೆ ಸಹಿಯಾಯಿತು. ... ಬಿ.ಇ.ಎಲ್.ನಲ್ಲಿದ್ದವರು ವೇತನ ಸಮಾನ[ತೆ] ಬೇಡಿಕೆ ಎತ್ತಿದೆವು. ನಾವು ಹೋಲಿಕೆಯ ... ರವನ್ನು ಲೆಕ್ಕ ಹಾಕಿದೆವು. ನಂತರ ರಾಷ್ಟ್ರ... ಟ್ರಿಬ್ಯೂನಲ್ ಅದನ್ನೇ ಎತ್ತಿ ಹಿಡಿಯಿ... ಸಮಾನ ವೇತನ ಹೋರಾಟದಿಂದ ... ಹೋಗುವಂತಿರಲಿಲ್ಲವಾದ್ದರಿಂದ ಜೆ.ಎ.ಎ... ಮುಖಂಡರು ಪರಿಸ್ಥಿತಿಯ ಒತ್ತಡದಿಂದ ... ರಕ್ಕೆ ಕರೆ ನೀಡಿದರು. ಮುಷ್ಕರ ಡಿಸೆಂ[ಬರ್] 1980 ರಿಂದ ಮಾರ್ಚ್ 1981ರವರೆಗೆ ... ತಿಂಗಳು ನಡೆಯಿತು. ಮ್ಯಾನೇಜುಮೆಂಟ್... ನಂತರ ಲಾಕೌಟ್ ಘೋಷಿಸಿದ್ದರಿಂದ ... ಇನ್ನೊಂದು ತಿಂಗಳು ಮುಂದುವರೆಯಿತು. ಏಕೆ... ಸರಕಾರ ವೇತನ ಇತ್ಯರ್ಥಕ್ಕೆ ಅವಕಾಶ ... ದ್ದರಿಂದ ರೇಗಿಕೊಂಡ ಕಾರ್ಮಿಕರ ಕೋ... ಯನ್ನು ಎದುರಿಸುವುದು ಅವಕ್ಕೆ ಸಾಧ್ಯವಾ... ಲಿಲ್ಲ. ಗುಂಡೂರಾವ್ ಸರಕಾರದ ದಮ... ದಾಗಿ ಪೋಲೀಸು ಗೋಳೀಬಾರಿನಲ್ಲಿ ಮೂ... ಕೊಲ್ಲಲ್ಪಟ್ಟರು.

ತುರ್ತು ಪರಿಸ್ಥಿತಿಯ ನಂತರದ ಹೋರಾಟಗಳ[ು]

ಸಾರ್ವಜನಿಕ ವಲಯದ ಕಾರ್ಮಿಕರ ... ಟದ ಮೊದಲು ಬೆಂಗಳೂರು, ದಾಂ... ಬೆಳಗಾವಿ ಇತ್ಯಾದಿಗಳಲ್ಲಿ ಇತರ ಸಮು... ಹೋರಾಟಗಳು ನಡೆದಿದ್ದವು. ಸೌಲಭ್ಯ... ನಿರಾಕರಣೆ, ಪ್ರಜಾಪ್ರಭುತ್ವ ಹಕ್ಕುಗಳ ನಿರಾ... ರಣೆಯಿಂದ ಅಸಂತೃಪ್ತಿಯ ಭಾವನೆಗಳು ಭು... ಲೆದ್ದು ಈ ಹೋರಾಟಗಳು ನಡೆದ... ದಾಂಡೇಲಿಯಲ್ಲಿ ವೆಸ್ಟ್ ಕೋಸ್ಟ್ ಪೇಪ[ರ್] ಮಿಲ್ಸ್, ದಾಂಡೇಲಿ ಫೆರೋ ಅಲಾಯ... ಇಂಡಿಯನ್ ಪ್ಲೈವುಡ್ ಎಲ್ಲೆಡೆ ಕಾರ್ಮಿಕ...

ಬಿ.ಎಸ್.ಪಿ.ಯೊಂದಿಗೆ ಕಾವಿಪಡೆಗಳ ಸಲ್ಲಾಪ

"ಹಿಂದುತ್ವ"ದ ಭವಿಷ್ಯವೇನು?

ಕಳೆದವಾರ ಉತ್ತರ ಪ್ರದೇಶದ ರಾಜಕೀಯ ಬೆಳವಣಿಗೆಗಳು ಹಲವರಿಗೆ ಆಘಾತವುಂಟು ಮಾಡಿವೆ. ನಿಕೃಷ್ಟ ಜಾತಿವಾದಿ ಎಂದು ಬಿಜೆಪಿಯಿಂದ ಅನ್ನಿಸಿಕೊಂಡ ಬಿ.ಎಸ್.ಪಿ. ತಾನು "ಮನುವಾದಿ"ಯೆಂದು ಇತ್ತೀಚಿನವರೆಗೂ ಬಲವಾಗಿ ಟೀಕಿಸುತ್ತಿದ್ದ ಬಿಜೆಪಿಯ ನೆರವಿನಿಂದ ಸರಕಾರ ರಚಿಸಿದೆ. ಇದು ಹೇಗಾಯಿತು, ಮುಂದೇನಾದೀತು ಎಂಬ ಬಗ್ಗೆ ಪರಿಶೀಲಿಸುತ್ತಾರೆ ಐ.ಎನ್.ಎಸ್. ಸುದ್ದಿ ಸಂಸ್ಥೆಯ ಮಾಲಿನ ಚಟರ್ಜಿ

ಉತ್ತರ ಪ್ರದೇಶದಲ್ಲಿ ಮಾಯಾವತಿ ನೇತೃತ್ವದ ಬಿ.ಎಸ್.ಪಿ. ಸರಕಾರವನ್ನು ಬೆಂಬಲಿಸುವ ಬಿಜೆಪಿ ನಿರ್ಧಾರ ಅದು ತನ್ನ ತಕ್ಷಣದ ಹಾಗೂ ದೂರಗಾಮಿ ರಾಜಕೀಯ ಗುರಿಸಾಧನೆಗಾಗಿ ಮಾಡಿರುವ ನಿರ್ಧಾರ. ಈ ಸಮಯಸಾಧಕ "ಪ್ರಯೋಗ" ಹಿಂದುತ್ವ ಸಿದ್ಧಾಂತದ ಭವಿಷ್ಯದ ದಾರಿಯ ಮೇಲೆ ಒಂದು ಪ್ರಭಾವ ಬೀರುವ ಸಂಭವವಿದೆ.

ಬಿಜೆಪಿ ಮುಖಂಡತ್ವದ ತಕ್ಷಣದ ಗುರಿ ಮುಲಾಯಂ ಸಿಂಗ್ ಯಾದವ್ ಸರಕಾರ ಇಲ್ಲದಂತೆ ಮಾಡುವುದು. ಇದಕ್ಕಾಗಿ ಅವರು ಬಿ.ಎಸ್.ಪಿ. ಮುಖಂಡರೊಂದಿಗೆ ಹಲವು ದಿನಗಳ ಕಾಲ ಗುಪ್ತ ಮಾತುಕತೆ ನಡೆಸಿದರು. ಸರಕಾರ ರಚಿಸಲು ತಮ್ಮ ಬೆಂಬಲದ ಭರವಸೆ ನೀಡಿದರು. ಬಿಜೆಪಿಯ ಕಾರ್ಯಕರ್ತರು ಹಾಗೂ ಮುಖಂಡರು ಮತ್ತು ಉತ್ತರ ಪ್ರದೇಶದಲ್ಲಿ ಆ ಪಕ್ಷದ ಮೇಲ್ಜಾತಿ ಬೆಂಬಲಿಗರು ಮುಲಾಯಂ ಸಿಂಗ್‌ರನ್ನು ಅತ್ಯಂತ ಕ್ರುದ್ಧರಾಗಿ ವಿರೋಧಿಸುತ್ತಿದ್ದು ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಒತ್ತಾಯ ಹಾಕುತ್ತಿದ್ದರು. 1990ರಲ್ಲಿ ಮುಲಾಯಂ ಸಿಂಗ್ ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿ ಕಾವಿಪಡೆಗಳು ಅಯೋಧ್ಯೆಗೆ ನುಗ್ಗುವುದನ್ನು ತಡೆದಂದಿನಿಂದ ಆತ ಕಾವಿಪಡೆಗಳ ಪ್ರಧಾನ ವೈರಿಯಾಗಿರುವವರು.

ಕಳೆದ 18 ತಿಂಗಳು ಮುಲಾಯಂ ಸಿಂಗ್ ವಿರುದ್ಧ ಈ ವೈರ ಹಲವು ಪಟ್ಟು ಹೆಚ್ಚಿದೆ. ಏಕೆಂದರೆ ರಾಜ್ಯದಲ್ಲಿ ತನ್ನ ಪಕ್ಷದ ಸ್ಥಾನಮಾನವನ್ನು ಕ್ರೋಢೀಕರಿಸಲು ಹಾಗೂ ಬಿಜೆಪಿಯ ಕೋಮುವಾದಿ ರಾಜಕೀಯದ ವಿರುದ್ಧ ಜಗ್ಗದ ಹೋರಾಟ ನಡೆಸಲು ಅವರಿಗೆ ಸಾಧ್ಯವಾಗಿತ್ತು. ಇತ್ತೀಚಿನ ಪಂಚಾಯತು ಚುನಾವಣೆಗಳಲ್ಲಿ ಮುಲಾಯಂ ಸಿಂಗ್‌ರ ತಂತ್ರಗಳು ಹಾಗೂ ಇತ್ತೀಚಿನ ವಿಧಾನಸಭಾ ಉಪ ಚುನಾವಣೆಗಳಲ್ಲಿ ಯಶಸ್ಸು ಕಂಡ ಬಿಜೆಪಿಗೆ ತನ್ನನ್ನು ಅಧಿಕಾರದಲ್ಲಿ ಇರಗೊಟ್ಟರೆ ತಮ್ಮ ಭವಿಷ್ಯಕ್ಕೆ ಭಾರೀ ತೊಂದರೆ ಎಂದು ಮನದಟ್ಟಾಯಿತು. ಉದಾಹರಣೆಗೆ, ಹಿಂದಿನ ಬಾರಿ 20 ಸಾವಿರಕ್ಕೂ ಹೆಚ್ಚು ಮತಗಳಿಂದ ಬಿಜೆಪಿ ಗೆದ್ದಿದ್ದ ಕತ್ರಾ ಬರ್ಖುರ್ ಕ್ಷೇತ್ರದಲ್ಲಿ ಈ ಬಾರಿ ಅದು ಕೇವಲ 900 ಮತಗಳಿಂದ ಹೇಗೋ ಗೆಲ್ಲುವುದು ಸಾಧ್ಯವಾಯಿತಷ್ಟೇ.

ಇತ್ತೀಚಿನ ಪತ್ರಿಕಾ ಸಮ್ಮೇಳನಗಳಲ್ಲಿ ಹೊರಗಿನಿಂದ ಬಿ.ಎಸ್.ಪಿ. ಸರಕಾರವನ್ನು ಬೆಂಬಲಿಸುವ ತಮ್ಮ ನಿರ್ಣಯ ಕೇವಲ ಮುಲಾಯಂ ಸಿಂಗ್‌ರನ್ನು ಅಧಿಕಾರದಿಂದ ಇಳಿಸಲಿಕ್ಕಾಗಿ ಎಂದು ಅಡ್ವಾಣಿಯವರೂ, ವಾಜಪೇಯಿಯವರೂ ಒತ್ತಿ ಹೇಳಿದ್ದಾರೆ.

ದೂರಗಾಮಿ ಗುರಿ

ಇದು ತಕ್ಷಣದ ಗುರಿಯಾಗಿದ್ದರೂ ಬಿ.ಎಸ್.ಪಿ. ಸರಕಾರದ ರಚನೆಯನ್ನು ಬಿಜೆಪಿ ಬೆಂಬಲಿಸಲು ನಿರ್ಧರಿಸುವ ಸಂಗತಿ ಒಂದು ವಿಶಾಲ ಕಾರ್ಯತಂತ್ರದ ಭಾಗದಂತಿದೆ. ಬಹುಶಃ ಬಿಜೆಪಿಯ (ಮತ್ತು ಅದರ ಗುರು ಆರ್.ಎಸ್.ಎಸ್.ನ) ದೂರಗಾಮಿ ಗುರಿಯೆಂದರೆ ದಲಿತ-ಒ.ಬಿ.ಸಿ. -ಮುಸ್ಲಿಂ ಕೂಟವನ್ನು ಮುರಿಯುವುದು. ಏಕೆಂದರೆ ಇದು ಹಿಂದುತ್ವದ ಶಕ್ತಿಗಳು ಅಧಿಕಾರದತ್ತ ಸಾಗಲು ಒಂದು ಅತಿ ದೊಡ್ಡ ಅಡ್ಡಿಯಾಗುತ್ತಿದೆ. ನವೆಂಬರ್ 1993ರಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಸೋಲುಣ್ಣಿಸಿದ್ದು ವಂಚಿತ ಹಾಗೂ ದಲಿತ ಜನವಿಭಾಗಗಳ ಈ ಕೂಟವೇ.

ನವೆಂಬರ್ 1993ರ ತೀರ್ಪು ಕಾವಿಪಡೆಗಳಿಗೆ ಒಂದು ದೊಡ್ಡ ಆಘಾತವಾಗಿತ್ತು. ಉತ್ತರ ಪ್ರದೇಶದಲ್ಲಿ ಅಧಿಕಾರ ಕಳಕೊಂಡದ್ದರಿಂದ ಮಾತ್ರವೇ ಅಲ್ಲ ಈ ಆಘಾತ. ಈ ಘಟನೆ 'ಹಿಂದುತ್ವ'ದ ಮಿತಿಗಳನ್ನು ಸ್ಪಷ್ಟವಾಗಿ ಬಯಲಿಗೆ ತಂದಿತು. ಆರ್.ಎಸ್.ಎಸ್. ಸಿದ್ಧಾಂತದ ಸಾರವೆಂದರೆ "ಇತರರ" ಅಂದರೆ ಮೊದಲು ಮುಸಲ್ಮಾನರು, ನಂತರ ಕ್ರಿಶ್ಚಿಯನ್ನರು ಹಾಗೂ ಜಾತ್ಯಾತೀತವಾದಿಗಳ ವಿರುದ್ಧ ದ್ವೇಷವನ್ನು ಕೇಂದ್ರೀಕರಿಸಿ ಕೃತಕ "ಹಿಂದೂ" ಐಕ್ಯತೆ ತರುವುದು. ಒಟ್ಟು 'ಹಿಂ[ದೂ]' ಸಮುದಾಯ ಹೆಸರಲ್ಲಿ ಮಾತನಾ[ಡು]ತ್ತಿದ್ದರೂ ಆರ್.ಎಸ್.ಎಸ್. ಸೈದ್ಧಾಂತಿಕ... ಹಾಗೂ ಸಂಘಟನಾತ್ಮಕವಾಗಿ ಮೇಲ್ಜಾ[ತಿ]ಗಳಿಗಷ್ಟೇ ಮೀಸಲಿರುವ ಸಂಘಟನೆ. ... ಕೂಟ ಇದನ್ನು ನಿರಾಕರಿಸುತ್ತದಾ... ಅವರು ಹಿಂದೂ ಸಮಾಜದಲ್ಲಿರುವ ... ವಾದ ಜಾತಿ ವೈರುಧ್ಯಗಳನ್ನು, ಜಾತಿ ... ಟಗಳನ್ನು ಉಪೇಕ್ಷಿಸಿ ಕೋಮುದ್ವೇಷ... ಉತ್ತೇಜಿಸಬಯಸುವವರು. ಆದರೆ ... ರಲ್ಲಿ ಹಲವು ವಿಭಾಗಗಳು ಬಿಜೆಪಿಯ... ಆಟವನ್ನು ಗುರುತಿಸಿದ್ದಾರೆ ಎಂಬುದು 19... ಚುನಾವಣೆಗಳಿಂದ ತಿಳಿದು ಬಂತು. ... ಹಿಂದುತ್ವದ ಪ್ರಚಾರಕ್ಕೆ ಬಲಿಯಾಗುವ ... ಬಿಜೆಪಿಯನ್ನು ಸೋಲಿಸಲು ತಮ್ಮಷ್ಟೇ ... ತರಾದ ಮುಸಲ್ಮಾನ ಬಾಂಧವರೊ[ಡನೆ] ಸೇರಿಕೊಂಡರು.

ಅಧಿಕಾರ ಗಿಟ್ಟಿಸಲು ಮೇಲ್ಜಾತಿಯ ... ಗಳಷ್ಟೇ ಸಾಲದು ಎಂದು ಮನ... ಆರ್.ಎಸ್.ಎಸ್. ಕೂಟ ಕೆಳಜಾತಿಗಳ... ರನ್ನು 'ಗೆಲ್ಲಲು' ವಿಭಿನ್ನ ವಿಧಾನ... ಪ್ರಯೋಗಿಸುತ್ತಿದೆ -ಪಾರ್ಟಿ ನಾಯಕತ್ವ... ವಿವಿಧ ಹಂತಗಳಲ್ಲಿ ಮೇಲ್ಜಾತಿಯೇ... ಮುಖಂಡರಿಗೆ ಪ್ರಮುಖ ಸ್ಥಾನ ... ವುದು, ಪರಿಶಿಷ್ಟ ಜಾತಿ-ಪಂಗಡ... ನಡುವೆ ದುಡಿಯಲು ಸಂಸ್ಥೆಗಳನ್ನು ... ಹಾಕುವುದು, ಮುಸಲ್ಮಾನರು ಹಾಗೂ ... ತರು ಮತ್ತು ಹಿಂದುಳಿದವರ ನಡುವೆ ... ತಂದಿಡುವುದು ಇತ್ಯಾದಿ.

ಷ್ಟೇ ಹೋರಾಟಗಳನ್ನು ನಡೆಸಿದರು. ಅವರು ಸಮರಶೀಲರಾಗಿದ್ದರು -ದುಸ್ಸಾಹಸಕ್ಕೆ ಇಳಿದವ ರೇ ಹೇಳಬಹುದು. ಇದರಿಂದ ಮ್ಯಾನೇಜುಮೆಂಟ್‌ಗಳಿಗೆ ಹಾಗೂ ಸರ್ಕಾರಕ್ಕೆ ಅವರನ್ನು ದಮನ ಗೊಳಿಸುವುದು ಸುಲಭವಾಯಿತು. ಬೆಳಗಾವಿಯಲ್ಲೂ ಪಾಲ್ ಕಾರ್ಮಿಕರು 1978ರಲ್ಲಿ ಒಂದು ಶಕ್ತಿಶಾಲೀ ಹೋರಾಟ ನಡೆಸಿದರು.

ಬೆಂಗಳೂರಿನಲ್ಲಿ ಸಮರಧೀರ ಹೋರಾಟಗಳಲ್ಲಿ ಂಭದ್ದು 1978ರಲ್ಲಿ ನಡೆದ ಮೆಟಲ್ ಲ್ಯಾಂಪ್ಸ್ ರ್ಮಿಕರ ಹೋರಾಟ. ದೀರ್ಘ ಕಾಲ ನಡೆದ ಕಾರ್ಮಿಕರು ಪ್ರಮುಖವಾಗಿ ಭಾಗವಹಿಸಿದ ಸಮರಧೀರ ಹೋರಾಟ ಸಿಐಟಿಯುಗೆ ಒಂದವ ಸ ಇಮೇಜನ್ನು ನಗರದಲ್ಲಿ ಸ್ಥಾಪಿಸಿತು. ಸ್ವಲ್ಪ ಸಮಯದಲ್ಲೇ ಮೈಕೋ ಕಾರ್ಮಿಕರ ಹೋರಾಟ ನಡೆಯಿತು. ಅದರ ಜತೆಗೆ 1979ರ ಮೇ ದಿನದಂದು 0ಕ್ಕೂ ಹೆಚ್ಚು ಮಾಂಸಾಹಾರಿ ಹೋಟೆಲುಗಳ ರ್ಮಿಕರ ಸುಸಂಘಟಿತ ಹಾಗೂ ಸಂಯೋಜಿತ ಹೋರಾಟ ನಡೆಯಿತು. ಎಂಟು ಗಂಟೆಗಳ ಕೆಲಸ ಗೂ ಕಾರ್ಮಿಕ ಕಾನೂ ಗಳ ಅನುಷ್ಠಾನ ಅವರ ಡಿಕೆಯಾಗಿತ್ತು. ಈ ಮುಷ್ಕ ರ ಬೆನ್ನ ಹಿಂದೆಯೇ ಈ ಹೋಟೆಲುಗಳ ಮಾಲಕರು ದಿನಗಳ ಲಾಕೌಟ್ ಕಿದರು. ನಂತರ ಐ.ಟಿ.ಸಿ. ಹೋರಾಟ ನಡೆಯಿತು.

ಈ ವೇಳೆಗೆ 1980ರಲ್ಲಿ ಸೂರು ಕಿರ್ಲೋಸ್ಕರ್ ರ್ಖಾನೆಯಲ್ಲಿ ಎ.ಐ.ಟಿ. ಯು.ಸಿ.ಯನ್ನು ಸಿಐಟಿಯು ೇಲಿಸಿತ್ತು. ಹರಿಹರದಲ್ಲಿ ಂದೋಲನ ವೃದ್ಧಿಸಲಾರಂ ತು. ಅದು ಮೈಸೂರು ರ್ಲೋಸ್ಕರ್ ಸೌಕರರ ಘದ ಶಾಖೆಗಳ ಮೂಲಕ ಬ್ಬಳ್ಳಿ ಸತ್ತೂರುಗಳಿಗೂ ಡಿತು. ಅಲ್ಲಿಂದ ದಾಂಡೇಲಿಗೂ ತಲುಪಿತು. ಲ್ಲ ಹೋರಾಟಗಳ ಮುಖಂಡತ್ವ ಒಂದೇ ಆಗಿದ್ದ ದ ಹೀಗಾಯಿತು. ಈ ನಡುವೆ ಮಲಪ್ರಭಾ ರೈತರ ಹೋರಾಟ ಬಹಳಷ್ಟು ಜನ ವಿಭಾಗಗಳನ್ನು ತಟ್ಟಿತ್ತು. ಲಗುಂದದಲ್ಲಿ ನಂದಿ-ಹಸ್ಪಿ ಮಿಲ್‌ನ ಕಾರ್ಮಿಕರ ತೃತ್ವದಲ್ಲಿ ಕಾರ್ಮಿಕರು ಹಾಗೂ ರೈತರ ಐಕ್ಯತೆಯು ಶ ಕಂಡು ಬಂತು. ಆ ವೇಳೆಗೆ ಧಾರವಾಡದಲ್ಲಿ ೂಡಿ ಬರುತ್ತಿದ್ದ ವಿದ್ಯಾರ್ಥಿ ಆಂದೋಲನ ರೈತರ ಡಿಕೆಗಳ ಬೆಂಬಲಕ್ಕೆ ನಿಂತಿತು. ಹುಬ್ಬಳ್ಳಿಯಿಂದ ಬೆಂಗಳೂರಿನವರೆಗೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರ ಉದ್ದಕ್ಕೂ ಜಾಥಾ ನಡೆಸುವ ಸಾಮರ್ಥ್ಯ ವ್ಯಕ್ತಗೊಂಡಿತು. ಹಲವಾರು ಕಾರ್ಮಿಕ ವರ್ಗದ ಪ್ರದೇಶಗಳ ಮೂಲಕ ನರಗುಂದದಿಂದ ಆರಂಭಗೊಂಡ ಜಾಥಾ ಸಾಗಿ ಬೆಂಗಳೂರು ತಲುಪಿದಾಗ ಅದಕ್ಕೆ ಬೆಂಗಳೂರಿನ ಮುಷ್ಕರ ನಿರತ ಸಾರ್ವಜನಿಕ ವಲಯದ ಕಾರ್ಮಿಕರ ಸೌಹಾರ್ದ ನಿಜ ಅರ್ಥದಲ್ಲಿ ದೊರೆಯಿತು.

ಬ್ಯಾಂಕುಗಳಿಂದ, ರೆವಿನ್ಯೂ ಅಧಿಕಾರಿಗಳಿಂದ ಆಸ್ತಿ ಜಪ್ತಿ, ಏರುತ್ತಿದ್ದ ಬೆಲೆಗಳು, ಬೆಟರ್‌ಮೆಂಟ್ ಲೆವಿ ಹಾಕಿದ್ದು, ಫಲದಾಯಕ ಬೆಲೆ ಸಿಗದ್ದು ಇತ್ಯಾದಿಗಳಿಂದ ಸರಕಾಳದ ವಿರುದ್ಧ ರೈತರು ರೊಚ್ಚಿಗೆದ್ದರಿಂದ ರೈತ ಹೋರಾಟ ಇತರ ಪ್ರದೇಶಗಳಿಗೂ ಹಬ್ಬಿತು. ಕಾರ್ಮಿಕ ವರ್ಗಕ್ಕೆ ರೈತರ ಹೋರಾಟಗಳಿಂದ ಪ್ರಯೋಜನ ಆಯಿತು. ಆದರೆ ರೈತರಿಗೆ ಕಾರ್ಮಿಕರಿಂದ ಹೆಚ್ಚು ಪ್ರಯೋಜನ ಪಡೆಯಲಾಗಲಿಲ್ಲ. ಈ ಕೊರತೆಯಿಂದಾಗಿ ಎಡ ಆಂದೋಲನ ಈ ಹೋರಾಟ ಆರಂಭಿಸಿದ್ದರೂ ಆಳುವ ವರ್ಗಗಳ ಪ್ರತಿ ಪಕ್ಷ -ಒಂದು ಶಕ್ತಿಯಾಗಿ ಮೂಡಿ ಬಂತು.

ದುಡಿಯುವ ಜನರ ಹಿತಾಸಕ್ತಿಗಳಿಗಾಗಿ ದುಡಿಯುವ ಜನರು ಹೋರಾಟ ನಡೆಸಿದಾಗ ಮಾತ್ರವೇ ಅದು ಯಶಸ್ವಿಯಾಗಬಲ್ಲುದು. ಕಾರ್ಮಿಕ ಆಂದೋಲನವನ್ನು ತಮ್ಮ ಹಿತಾಸಕ್ತಿಗಳಿಗೆ ಸೀಮಿತಗೊಳಿಸುವ ಆಳುವ ವರ್ಗಗಳ ಪ್ರಯತ್ನವನ್ನು ಮೀರಿ ನಿಲ್ಲಬೇಕಾದರೆ ಹೋರಾಟಗಳನ್ನು ದುಡಿಯುವ ಜನಗಳ ವಿಶಾಲ ವಿಭಾಗಗಳ ಹಿತಾಸಕ್ತಿಗಳೊಂದಿಗೆ ಬೆಸೆದು ಅವರನ್ನು ಅಣಿನೆರೆಸುವುದು ಅತ್ಯಗತ್ಯ. ಇದಿಲ್ಲದೆ ಕಾರ್ಮಿಕ ಮುಖಂಡರ ಯಾವ ಪ್ರಯತ್ನವೂ ಸಫಲವಾಗದು.

ಮುಂಬೈ ಕರ್ನಾಟಕದಲ್ಲಿ

1982-83ರಲ್ಲಿ ಹರಿಹರ ಪಾಲಿಫೈಬರ್ ನಲ್ಲಿ ಹೋರಾಟಗಳ ಸರಣಿಯೇ ಕಂಡು ಬಂತು. ತುಂಬಾ ವೀರಾವೇಶದಿಂದ ನಡೆದ ಹೋರಾಟಗಳವು. ಈ ಹೋರಾಟದಲ್ಲಿ ಐಕ್ಯತೆಯ ತೋರಣವಿನ್ನೂ ಎಐಟಿಯುಸಿ, ಸಿಐಟಿಯು ನಡುವೆ ಹೋರಾಟ ತೆರೆಮರೆಯಲ್ಲಿ ಮುಂದುವರೆಯಿತು.

ಹುಬ್ಬಳ್ಳಿಯಲ್ಲೂ 1983ರಲ್ಲಿ ಸುಂದತ್ತಾ ಮತ್ತು ಬಿಡಿಕೆ ಕಾರ್ಮಿಕರ ಹೋರಾಟಗಳು ದಾರಿ ಹಾಕಿಕೊಟ್ಟವು. ಇದಕ್ಕೆ ಮೊದಲು 1979ರಲ್ಲಿ ಮೈಸೂರು ಕಿರ್ಲೋಸ್ಕರ್ ಕಾರ್ಮಿಕರು ಎರಡು ತಿಂಗಳ ಲಾಕೌಟ್ ಎದುರಿಸಿ ಒಂದು ವಿಜಯ ಸಾಧಿಸಿದ್ದರು. 1981ರಲ್ಲಿ ಹರಿಹರದಲ್ಲಿ ಸಿಐಟಿಯು 3ನೇ ಸಮ್ಮೇಳನ ನಡೆಯಿತು. (ಕಾಂ. ಜ್ಯೋತಿ ಬಸು ಇದರಲ್ಲಿ ಭಾಗವಹಿಸಿದ್ದರು.) ಸಿಐಟಿಯು ಕಾರ್ಯಕರ್ತರ ಐಕ್ಯತೆಯನ್ನು ಅಸ್ತವ್ಯಸ್ತಗೊಳಿಸುವ ಕೆಲಸಕ್ಕೆ ನಂತರ ಬಲಬಂತು. ಎ.ಐ.ಟಿ.ಯು.ಸಿ. ಶ್ರಮಪಟ್ಟು ಬಿ.ಎಂ.ಎಸ್. ಮೇಲೆ ಬರಲು ನೆರವಾದರು. ಅವರು

-ಪುಟ 7 ನೋಡಿ



ಬಿ.ಎಸ್.ಪಿ.ಯನ್ನು ಬೆಂಬಲಿಸುವ ನಿರ್ಣಯ ದೆಯೂ ಇದೇ ಪ್ರಯತ್ನ ಇದ್ದಂತಿದೆ. ಅಂದರೆ ತರ ಕೆಲವು ವಿಭಾಗಗಳೊಂದಿಗೆ ಸಂಪರ್ಕ ಧಿಸಿ ಅವರನ್ನು ದಲಿತರು- ಹಿಂದುಳಿದ -ಮುಸಲ್ಮಾನರ ಕೂಟದಿಂದ ಹೊರಗೆಳೆವುದು. ಹೀಗೆ ಮಾಡುವಾಗ ಅದು ಹಿಂದಿನ ಗ್ರೆಸ್ ನೆಲೆಯನ್ನು ಭಾಗಶಃ ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದೆ. ಬ್ರಾಹ್ಮಣರು, ಹರಿಜನರು ಮತ್ತು ಮುಸಲ್ಮಾನರು ಕಾಂಗ್ರೆಸ್ ಪರ್ಷಾಟ್ಟಿಲಿ ಬದುಕುಳಿಯಲು ಆಧಾರವಾದ ಸಾಮೂಹಿಕ ಬೆನ್ನೆಲುಬಾಗಿದ್ದವರು. ಇದರಲ್ಲಿ ಸ್ಲಿಮರನ್ನು ಹೊರಗಿಟ್ಟು ಬಿಜೆಪಿ ಉತ್ತರ ಪ್ರದೇಶದಲ್ಲಿ ಮೇಲ್ಜಾತಿಗಳು, ಹರಿಜನರು ಮತ್ತು ದಮೇತರ ಹಿಂದುಳಿದ ಜಾತಿಗಳ ವಿಭಾಗ ಬೆಂಬಲ ಪಡೆದು ತನ್ನ ನೆಲೆ ಸ್ಥಾಪಿಸಬಯಸುತ್ತಿದೆ. ಬಿ.ಎಸ್.ಪಿ.ಗೆ ತಾನು ಬೆಂಬಲ ನೀಡಿ ದೇಶದ ಪ್ರಥಮ ದಲಿತ ಮುಖ್ಯಮಂತ್ರಿಯವರನ್ನು ಅಧಿಕಾರ ಪೀಠಕ್ಕೇರಿಸುವಲ್ಲಿ ಸಾಧನವಾಗಿದ್ದೇನೆ ಎಂದೀಗ ಅದು ಹೇಳಿಕೊಳ್ಳಬಹುದು. ಅದಕ್ಕಿಂತ ಹೆಚ್ಚಾಗಿ ಬಿ.ಎಸ್.ಪಿ. ಯೊಂದಿಗೆ ಮೈತ್ರಿಯನ್ನು ಬಳಸಿ ಕೆಳಜಾತಿಗಳ ಹಾಗೂ ಮುಸ್ಲಿಮರ ಕೂಟವನ್ನು ಮುರಿದು ಕೆಲವು ದಲಿತ ವಿಭಾಗಗಳನ್ನು ತಮ್ಮೊಡನೆಗೆ ಸೆಳೆಯಲು ಸಾಧ್ಯ ಎಂದು ಬಿಜೆಪಿಯ ಲೆಕ್ಕಾಚಾರ ವಿದ್ದಂತಿದೆ.

ಸುಗಮ ದಾರಿಯೇನೂ ಅಲ್ಲ

ಆದರೆ ಇಂತಹ ದಾರಿ ಸುಗಮ, ಸುಲಭವೇನೂ ಅಲ್ಲ. ಸ್ವಾತಂತ್ರ್ಯದ ಆರಂಭದ ದಶಕಗಳಲ್ಲಿ ಕಾಂಗ್ರೆಸನ್ನು ಬೆಂಬಲಿಸಿದ ಹರಿಜನರು ಈಗ ತಮ್ಮನ್ನು ಹರಿಜನರೆಂದು ಕರೆದುಕೊಳ್ಳುದಿಲ್ಲ;

-ಪುಟ 6 ನೋಡಿ

ಹತ್ತಿ ಉದ್ಯಮದಲ್ಲಿ ಹಾಲಾಹಲ

ಆರ್ಥಿಕದಲ್ಲಿ ವಿವಿಧ ವಲಯಗಳ ಅಂತರ-ಸಂಬಂಧದಲ್ಲಿ ಸಮತೋಲವನ್ನು ಕಾಯ್ದುಕೊಂಡು ಬರಬೇಕಾಗುತ್ತದೆ. ಒಂದು ವಲಯದಲ್ಲಿ ಅಸಮತೋಲನ ಉಂಟಾದರೆ ಇನ್ನುಳಿದ ವಲಯಗಳಲ್ಲೂ ಸಮಸ್ಯೆಗಳು ಶುರುವಾಗುತ್ತವೆ. ಈ ಸಮತೋಲನ ಕಾಯ್ದುಕೊಳ್ಳಲು ಆರ್ಥಿಕವನ್ನು ಸರಿಯಾಗಿ ಯೋಜಿಸಬೇಕಾಗುತ್ತದೆ. ಉದಾರೀಕರಣದ ಹೊಸ ಆರ್ಥಿಕ ನೀತಿ ಈ ಯೋಜನೆಯನ್ನೇ ಇಲ್ಲವಾಗಿಸುತ್ತಿರುವುದರಿಂದ ಈ ಅಸಮತೋಲನ ಹೆಚ್ಚುತ್ತ ಹೋಗುತ್ತದೆ. ಖಾಸಗಿ ಬಂಡವಾಳಿಗರ ಲಾಭ ಪಿಪಾಸೆಗೆ ಇಂದು ಇಡೀ ಆರ್ಥಿಕವನ್ನೇ ಅಲ್ಲೋಲಕಲ್ಲೋಲ ಮಾಡಬಹುದು.

ಹತ್ತಿ ಉದ್ಯಮಗಳ ಕ್ಷೇತ್ರದಲ್ಲಿ ಈಗ ಹಾಲಹಲ ಉಂಟಾಗುತ್ತಿದೆ. ಕಳೆದ ವರ್ಷದಿಂದಲೇ ಈ ಸಮಸ್ಯೆ ತೀವ್ರಗೊಂಡಿದೆ. ಹತ್ತಿ ಉತ್ಪಾದನೆಯಲ್ಲಿ ಏರುಪೇರಾಗಿ ಬೆಲೆಗಳು ತೀವ್ರವಾಗಿ ಏರಿವೆ. ಹತ್ತಿಯನ್ನು ಅವಲಂಬಿಸಿರುವ ಉದ್ಯಮಗಳು ಇದರಿಂದ ತತ್ತರಿಸುತ್ತಿವೆ. ಈ ಸಮಸ್ಯೆಯ ಪರಿಣಾಮ ಅಂತಿಮವಾಗಿ ಮತ್ತು ಗಾಢವಾಗಿ ದುಡಿವ ಜನರ ತಲೆಯ ಮೇಲೆ ಬೀಳುವುದು.

ಹತ್ತಿಯ ಬೆಲೆಗಳು ಶೇ. 60 ರಿಂದ 100ರಷ್ಟು ಏರಿವೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿಯಿಂದಾಗಿ ಈ ಉದ್ದಿಮೆಗಳಿಗೆ ಸಾಲದ ಮಿತಿಯಿದೆ. ಆದ್ದರಿಂದ ಕಚ್ಚಾ ಮಾಲು ಪಡೆಯಲು ಸಮಸ್ಯೆಗಳಿವೆ. ಇದಲ್ಲದೆ ದೇಶ ಹತ್ತಿಯನ್ನು ರಫ್ತು ಮಾಡುವ ಒಪ್ಪಂದಗಳನ್ನು ಮಾಡಿಕೊಂಡಿದೆ. ಮುಂಬರುವ ವರ್ಷದಲ್ಲಿ 5 ಲಕ್ಷ ಬೆಲೆಗಳಷ್ಟು ಹತ್ತಿಯನ್ನು ರಫ್ತು ಮಾಡಬೇಕಾಗುತ್ತದೆ ಇದು ಈ ವಲಯದ ಸಮಸ್ಯೆಯನ್ನು ಇನ್ನೂ ಉಲ್ಬಣಗೊಳಿಸಬಹುದು.

ಮಾರುಕಟ್ಟೆ ಅರ್ಥ ನೀತಿ ಬಂದಿರುವ ಈ ಸಂದರ್ಭದಲ್ಲಿ ಯಾರು ಈ ಸಮಸ್ಯೆಗಳನ್ನು ಪರಿಹರಿಸಬೇಕು? ಯಾರೂ ಪರಿಹರಿಸುವುದಿಲ್ಲ. ಎಲ್ಲ ಸಮಸ್ಯೆಗಳನ್ನು ದುಡಿವ ಜನರ ತಲೆಗೆ ಕಟ್ಟಿ ಎಂಬುದೇ ಆಳುವ ವರ್ಗದ ಅಘೋಷಿತ ನಿಲುವು

ಕಿಬ್ಬದಿಯ ಕೀಲು

ಇದು ವಿದೇಶೀ ಸಾಲ ಮರುಪಾವತಿಯ ಸಮಸ್ಯೆ. ದೇಶವನ್ನು ದೊಡ್ಡ ಆರ್ಥಿಕ ಬಿಕ್ಕಟ್ಟಿನ ಪ್ರಪಾತದಿಂದ ರಕ್ಷಿಸಿ ಉದಾರೀಕರಣದ ಹೊಸ ಆರ್ಥಿಕ ನೀತಿಯಿಂದ ಪುನಶ್ಚೇತನಗೊಳಿಸಿದ್ದೇವೆ ಎಂಬ ಸ್ವಪ್ರಶಂಸೆಯ ಸರ್ಕಾರ ಇದಕ್ಕೇನೂ ಹೇಳುವುದಿಲ್ಲ.

ಬಂಡವಾಳಿಗರ ಸಂಘಟನೆಯಾದ ಫಿಕ್ಕಿ(FICCI) 'ಭಾರತದ ವಿದೇಶೀ ಸಾಲ ಮರುಪಾವತಿ ಹೊಣೆ' ಎಂಬ ವರದಿ ವಿದೇಶೀ ಸಾಲ ಮರುಪಾವತಿಯ ಗಾತ್ರವನ್ನು ಅಂದಾಜು ಮಾಡಿದೆ. ಅದರ ಪ್ರಕಾರ ಈ ಮರುಪಾವತಿ ಹೊಣೆ 1994-95ರ 10.8 ಶತಕೋಟಿ ಡಾಲರುಗಳಿಂದ 12.3 ಶತಕೋಟಿ ಡಾಲರುಗಳಿಗೆ ಏರಲಿದೆ. ಇದಕ್ಕೂ ಮುಂದಿನ ವರ್ಷದಲ್ಲಿ ಈ ಮೊತ್ತ ಇನ್ನೂ ಏರಲಿದೆ.

ಫಿಕ್ಕಿಯ ಅಂದಾಜಿನ ಪ್ರಕಾರ ಮುಂದಿನ ವರ್ಷದಲ್ಲಿ ಆಮದು ಖರ್ಚು ಗಣನೀಯವಾಗಿ ಏರಲಿದೆ. ಜಾಗತಿಕ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರುವ ಲಕ್ಷಣಗಳು ಕಾಣುತ್ತಿವೆ. ಇದಲ್ಲದೆ ಸರ್ಕಾರ ಬಹುದೊಡ್ಡ ಪ್ರಮಾಣದಲ್ಲಿ ಆಮದು ಉದಾರೀಕರಣ ಮಾಡಿದೆ. ಈ ಎರಡೂ ಸೇರಿದರೆ ನಮ್ಮ ಆಮದು ಖರ್ಚು ಬಹುದೊಡ್ಡ ಪ್ರಮಾಣದಲ್ಲಿ ಏರುತ್ತದೆ. ಇದಲ್ಲದೆ ನಮ್ಮ ರಫ್ತು ಪ್ರಮಾಣ ಸರ್ಕಾರ "ಜಪ್ಪಯ್ಯ" ಎಂದರೂ ಬಹುದೊಡ್ಡ ಪ್ರಮಾಣದಲ್ಲೇನೂ ಏರುವುದಿಲ್ಲ. ಶೇರು ಮಾರುಕಟ್ಟೆಯ ಕುಸಿತ ಇತ್ಯಾದಿ ಕಾರಣಗಳಿಂದಾಗಿ ದೇಶದೊಳಕ್ಕೆ ಹರಿದು ಬರುತ್ತಿರುವ ಹಾಟ್ ಮನಿಯ ಪ್ರಮಾಣವೂ ಕಡಿಮೆಯಾಗಿದೆ. ಈ ಎಲ್ಲವೂ ಒಟ್ಟಿಗೆ ಸೇರಿ ದೇಶದ ಆರ್ಥಿಕದ ಕಿಬ್ಬದಿಯ ಕೀಲೇ ಮುರಿಯುವ ಸಾಧ್ಯತೆಗಳು ಕಾಣುತ್ತಿವೆ.

ಈ ನಡುವೆ ಡಾ. ಮನಮೋಹನ್ ಸಿಂಗರು ವಿದೇಶೀ ಸಾಲಗಳ ಶ್ವೇತ ಪತ್ರವೊಂದನ್ನು ಹೊರತರುವ ಭರವಸೆಯನ್ನು ರಾಜ್ಯ ಸಭೆಯಲ್ಲಿ ನೀಡಿದ್ದಾರೆ. ಆದರೆ ಶ್ವೇತಪತ್ರದಿಂದಂತೂ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲವಲ್ಲ! (ಅಲ್ಲೂ ಸುಳ್ಳು ಹೇಳುವುದಿಲ್ಲವೆಂಬ ಭರವಸೆಯೇನೂ ಇಲ್ಲವಲ್ಲ)

ನಮ್ಮ ಹಣಕಾಸು ವಲಯಕ್ಕಾಗಿ ಹಾತೊರೆಯುತ್ತಿರುವ ಬ್ರಿಟಿಷರು


ನಲವತ್ತೇಳರಲ್ಲಿ ನಮಗೆ ಸ್ವಾತಂತ್ರ್ಯ ಬಂತು ಬ್ರಿಟಿಷ್ ಆಳರಸರಿಂದ. ಈಗ ಬೇರಾವುದಾದರೂ ರೂಪದಲ್ಲಿ ಅದನ್ನು ವಾಪಸ್ಸು ಕಸಿದುಕೊಳ್ಳುವ ಹುನ್ನಾರವನ್ನು ಅವರು ಮಾಡುತ್ತಿದ್ದಾರೆ. ಬ್ರಿಟಿಷ್ ಖಜಾನೆಯ ಛಾನ್ಸಲರ್ ಕೆನ್ನೆತ್ ಕ್ಲಾರ್ಕ್ ಮಹಾಶಯರು ಭಾರತ ತನ್ನ 'ಆರ್ಥಿಕ ಸುಧಾರಣಾ' ಕಾರ್ಯಕ್ರಮವನ್ನು ಮುಂದುವರಿಸಲೇಬೇಕು ಎಂದಿದ್ದಾರೆ. ಈತನಿಗೆ ಭಾರತದ ಸರ್ಕಾರ ಮತ್ತು ವಿರೋಧ ಪಕ್ಷಗಳೆರಡೂ ಮುಂದುವರಿಯುತ್ತವೆಂಬ ಭರವಸೆ ನೀಡಿದ್ದಾರಂತೆ (ವಿರೋಧ ಪಕ್ಷವೆಂದರೆ ಬಿಜೆಪಿಯೇ ಇರಬಹುದು.)

ಇದಲ್ಲದೆ ಇನ್ನೊಂದು ಮಾತನ್ನು ಆತ ಹೇಳಿದ್ದಾನೆ. ಹಿಂದೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲು ಈ ದೇಶದ ವಿಮೆ ಉದ್ಯಮದಲ್ಲಿದ್ದ ಹಲವು ಬ್ರಿಟಿಷ್ ವಿಮಾ ಕಂಪನಿಗಳು ಮತ್ತೆ ಭಾರತಕ್ಕೆ ಬರಲು ಕಾತುರವಾಗಿವೆಯಂತೆ. ಎರಡೂ ದೇಶಗಳ ಹಲವು ಕಂಪನಿಗಳು ಈಗಾಗಲೇ ಒಪ್ಪಂದಗಳಿಗೆ ಸಹಿ ಹಾಕಿರುವುದರಿಂದ ಹಲವು ಕಂಪನಿಗಳು ಭಾರತಕ್ಕೆ ಮರಳಿ ಬರುತ್ತಿವೆ ಎಂಬ ಸುದ್ದಿಯೂ ಬಂದಿದೆ.

ಇದಲ್ಲದೆ ಇಡೀ ಹಣಕಾಸು ವಲಯವನ್ನೇ ಉದಾರೀಕರಿಸಿ ನಮ್ಮ ಕಂಪನಿಗಳಿಗೆ ತೆರೆಯಿರಿ ಎಂದೂ ಈ ಕ್ಲಾರ್ಕ್ ಮಹಾಶಯ ಒತ್ತಾಯಿಸಿದ್ದಾರೆ. ಭಾರತೀಯರ ಹಿಡಿತದಿಂದ ತಪ್ಪುವುದರಲ್ಲಿದೆಯೇ ನಲವತ್ತೇಳರ ಸ್ವಾತಂತ್ರ್ಯ.

ಆರ್ಥಿಕ ಸುಧಾರಣೆಗಳು ಭಾರತದ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿಕೊಟ್ಟಿವೆ.

ಇದು ನಮ್ಮ ಮನಮೋಹಕ ಅರ್ಥ ಮಂತ್ರಿ ಡಾ. ಮನಮೋಹನ್ ಸಿಂಗರು ಹೇಳಿರುವ ಮಾತು. ನಾಲ್ಕು ವರ್ಷಗಳ ಹಿಂದೆ ಅತ್ಯಂತ ದೊಡ್ಡ ಬಿಕ್ಕಟ್ಟಿನಲ್ಲಿದ್ದ ಭಾರತ ಇಂದು ಸುಧಾರಿಸಿಕೊಂಡಿದೆ. ತನ್ನ ಸಾಮರ್ಥ್ಯವನ್ನು ಇಡೀ ಜಗತ್ತಿಗೆ ತೋರಿಸಿಕೊಡುತ್ತಿದೆ ಎಂದಿದ್ದಾರೆ ಮನಮೋಹನ್ ಸಿಂಗರು.



ಆದರೆ ಭಾರತದ ಆರ್ಥಿಕ ಪರಿಸ್ಥಿತಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಬಿಗಡಾಯಿಸುತ್ತಿರುವುದೂ ನಿಜ. ಜಗತ್ತಿಗೆ ಅಂದರೆ ಅಭಿವೃದ್ಧಿ ಹೊಂದಿದ ದೇಶಗಳಿಗೆ (ಯಾ ಸಾಮ್ರಾಜ್ಯಶಾಹಿಗಳಿಗೆ) ಭಾರತದ ಸಾಮರ್ಥ್ಯ ಕಂಡಿರುವುದು ಬೇರೆ ರೀತಿಯಲ್ಲಿ. ತನ್ನನ್ನು ಈ ದೇಶಗಳ ಶೋಷಣೆಗೆ ಒಡ್ಡಿಕೊಳ್ಳುವ ಸಾಮರ್ಥ್ಯ ಅವರಿಗೆ ಕಂಡಿದೆ. ನರಸಿಂಹರಾಯರ ಸರ್ಕಾರದ ದೌರ್ಬಲ್ಯಗಳು ಅವರಿಗೆ ಕಂಡಿವೆ. ಆದ್ದರಿಂದಲೇ ಅವು ನಮ್ಮ ಉದಾರೀಕರಣದ ನೀತಿಯಲ್ಲಿ ಅಷ್ಟೊಂದು ಆಸಕ್ತಿ ತೋರುತ್ತಿರುವುದು.

ಇದನ್ನೇ ಮನಮೋಹನಸಿಂಗರು ಪ್ರಶಂಸಿಸಿಕೊಳ್ಳುತ್ತಿರುವುದು. ಆದರೆ ದೇಶದ ಜನಸಾಮಾನ್ಯರಿಗೆ ಈ ಆರ್ಥಿಕ ನೀತಿಗಳ ದುಷ್ಪರಿಣಾಮಗಳು ಆಗಲೇ ಗೊತ್ತಾಗತೊಡಗಿವೆ.

ಅನ್ನ ಕಸಿಯಲು ಅಮೇರಿಕದ ಹುನ್ನಾರ

ದೇಶದ ಆಹಾರ ಸಂಸ್ಕರಣ ವಲಯದಲ್ಲಿರುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂದು ಅಮೇರಿಕದ ರಾಯಭಾರಿ ಫ್ರಾಂಕ್ ವಿಸ್ನರ್ ಹೇಳಿದ್ದಾರೆ. ಈಗಿರುವ ನಿರ್ಬಂಧಗಳಿಂದಾಗಿ ವಿದೇಶೀ ಕಂಪನಿಗಳಿಗೆ ಆಹಾರ ಸಂಸ್ಕರಣ ಘಟಕಗಳಿಗೆ ತೆರೆಯಲು ಕಷ್ಟವಾಗುತ್ತಿದೆಯೆಂಬುದು ಅವರ ಅಳಲು.

ವಿದೇಶೀ ಕಂಪನಿಗಳು ಇಲ್ಲಿ ಸಂಸ್ಕರಣ ಘಟಕಗಳನ್ನು ತೆರೆಯುವಂತಾದರೆ ಇಲ್ಲಿ ಉತ್ತಮ ಆಹಾರ ಉತ್ಪಾದನೆ ಸಾಧ್ಯವಾಗುತ್ತದೆ ಎಂಬ ಆಮಿಷವನ್ನು ಈ ಮಹಾಶಯ ತೋರುತ್ತಾನೆ.

ಅಮೇರಿಕದ ತಂತ್ರಜ್ಞಾನ ಇಲ್ಲಿಗೆ ಬರುವುದರಿಂದ ಈ ಉದ್ದಿಮೆ ಅತ್ಯಂತ ಲವಲವಿಕೆ ಹೊಂದುತ್ತದೆ ಎಂಬುದು ಅವನ ವಾದ.

ಆದರೆ ಸಾಮಾನ್ಯನೂ ಊಹಿಸಬಹುದಾದದ್ದು ಈ ಅಮೇರಿಕದ ತಿಮಿಂಗಲಗಳು ಇಲ್ಲಿಗೆ ಬಂದರೆ ನಮ್ಮ ಬಡಜನತೆ ಈಗಿರುವ ಒಪ್ಪೊತ್ತಿನ ಕೂಳನ್ನು ಕಾಣದಂತಾಗುತ್ತದೆ. ಯಾಕೆಂದರೆ ಉತ್ತಮ ತಂತ್ರಜ್ಞಾನದಿಂದ ತಯಾರಿಸುವ ಆಹಾರ ಹೆಚ್ಚು ಬೆಲೆಯದ್ದಾಗಿರುತ್ತದೆ. ಇವು ಬಡವನ ಕೈಗೆಟುಕಲಾರವು. ಇದಲ್ಲದೆ ಆಹಾರ ಕ್ಷೇತ್ರದಲ್ಲೇ ಅಲ್ಲೋಲಕಲ್ಲೋಲ ಉಂಟು ಮಾಡಿ ಲಾಭ ಬಾಚಿಕೊಳ್ಳುವ ಲಾಭ ಪಿಪಾಸಿಗಳು ಇವರು.

ಆಹಾರ ಸಂಸ್ಕರಣದ ವಿಷಯದಲ್ಲಿ ನಮ್ಮಲ್ಲಿರುವ ತಂತ್ರಜ್ಞಾನವೇನೂ ಕಡಿಮೆಯಿಲ್ಲ. ಆದರೆ ಈ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಸಂಕಲ್ಪ ನಮ್ಮ ಸರ್ಕಾರಕ್ಕಿಲ್ಲ. ಉಂಡು ಹೋಗುವ ಕೊಂಡು ಹೋಗುವ ಬಹುರಾಷ್ಟ್ರೀಯ ಕಂಪನಿಗಳಿಗೇ ಆದ್ಯತೆ.



ವಿಶ್ವ

ಗುಜರಾತ್: ಸಚಿವನ ನೇತೃತ್ವದಲ್ಲಿ ದಲಿತರ ಮೇಲೆ ದೌರ್ಜನ್ಯ

ದಲಿತರ ಮೇಲಿನ ದೌರ್ಜನ್ಯ. ಇದಕ್ಕೆ ಸಚಿವರೊಬ್ಬರ ಕುಮ್ಮಕ್ಕು ಹಾಗೂ ನೇತೃತ್ವ ಹೌದು. ಬಿಜೆಪಿ ಇತ್ತೀಚೆಗೆ ಗೆದ್ದುಕೊಂಡ ಗುಜರಾತ್ ನಿಂದ ಬಂದಿರುವ ಕಳವಳಕಾರಿ ಸುದ್ದಿಯಿದು. ನಡೆದದ್ದು ಮೇ 12 ರಂದು; ಮೆಹ್ಸಾನಾ ಜಿಲ್ಲೆಯ ಕಾಡಿ ಗ್ರಾಮದಲ್ಲಿ ಹರಿಜನೇತರ ಹಿಂದೂಗಳು ಹರಿಜನರ ಮೇಲೆ ಭಾರಿ ಪ್ರಮಾಣದ ದೌರ್ಜನ್ಯ ನಡೆಸಿದ್ದಾರೆ.

ದಲಿತರ ಮೇಲೆ ಹಲ್ಲೆ ನಡೆಸಲು ಮೇಲ್ಜಾತಿಯ ಪಟೇಲರನ್ನು ಗುಜರಾತಿನ ಆರೋಗ್ಯ ಸಚಿವ ನಿತಿನ್ ಮೆಹ್ತಾ ಎತ್ತಿ ಕಟ್ಟಿದ್ದು ಸ್ಪಷ್ಟವಾಗಿದೆ. ಕುಮ್ಮಕ್ಕು ಕೊಟ್ಟಿದ್ದಷ್ಟೇ ಅಲ್ಲ ಹರಿಜನರಿಗೆ ಹೊಡೆದು ಅವರ ಅಂಗಡಿಗಳು ಹಾಗೂ ಮನೆಗಳಿಗೆ ಬೆಂಕಿ ಹಾಕುವಲ್ಲಿ ಸಕ್ರಿಯ ಪಾತ್ರ ವಹಿಸಿರುವುದೂ ಗುಟ್ಟಿನ ವಿಷಯವಲ್ಲ.

ಪ್ರಕರಣದಲ್ಲಿ 40 ದಲಿತರು ಗಾಯಗೊಂಡಿದ್ದಾರೆ. 40 ಅಂಗಡಿಗಳು ಸುಟ್ಟು ಹೋಗಿವೆ. ಗಾಬರಿಯಿಂದ ಸುಮಾರು 200ಕ್ಕೂ ಹೆಚ್ಚು ದಲಿತ ಕುಟುಂಬಗಳು ಜಾಗವನ್ನೇ ಬಿಟ್ಟು ಓಡಿ ಹೋಗಿದ್ದಾರೆ. ಸುಮಾರು 4000 ದಷ್ಟಿದ್ದ ಮೇಲ್ಜಾತಿ ಜನರ ಗುಂಪು ಹರಿಜನರ ಪ್ರದೇಶದ ಮೇಲೆ ದಾಳಿ ಮಾಡಿತ್ತೆಂದು ತಿಳಿದು ಬಂದಿದೆ.

ಭಾರತೀಯ ಜನತಾ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿ ದಲಿತರ ವಿರುದ್ಧ ದೌರ್ಜನ್ಯಗಳು ನಡೆಯುವುದು ಅಸಮಾನ್ಯ ವಿಚಾರವೇನಲ್ಲ. ಗುಜರಾತಿನ ಈ ನಿರ್ದಿಷ್ಟ ಪ್ರಕರಣ ದೇಶ ಮಟ್ಟದಲ್ಲಿ ಭಾರಿ ಪ್ರತಿಭಟನೆಯನ್ನು ಹುಟ್ಟುಹಾಕಿದೆ.

ಸಂಸತ್ತಿನಲ್ಲಿ ಕೂಡ ಈ ವಿಷಯ ಪ್ರಸ್ತಾಪಕ್ಕೆ ಬಂದಿದೆ. ಬಹುಶಃ ಬಿಜೆಪಿ ಮತ್ತು ಶಿವಸೇನೆ ಹೊರತು ಪಡಿಸಿ ಉಳಿದೆಲ್ಲ ಪಕ್ಷಗಳು ದೌರ್ಜನ್ಯಕ್ಕೆ ಕುಮ್ಮಕ್ಕು ಕೊಟ್ಟ ಸಚಿವ ನಿತಿನ್ ಪಟೇಲ್ ವಿರುದ್ಧ ಕೆಂಡ ಕಾರಿದರು.

ವಿಶೇಷವಾಗಿ ರಾಷ್ಟ್ರೀಯರಂಗ ಮತ್ತು ಎಡರಂಗ ಸದಸ್ಯರು ಮಾತನಾಡಿ ಆರೋಪಿ ಸಚಿವರನ್ನು ಆ ರಾಜ್ಯದ ಮುಖ್ಯಮಂತ್ರಿ ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಆರೋಪಿಯ ಬೆಂಬಲಕ್ಕೆ ಮುಖ್ಯಮಂತ್ರಿ!

ಆದರೆ, ಸಚಿವನನ್ನು ವಜಾ ಮಾಡುವುದು ಒಂದು ಬದಿಗಿರಲಿ, ಮುಖ್ಯಮಂತ್ರಿ ಕೇಶುಭಾಯಿ ಪಟೇಲ್ ಒಂದು ರೀತಿಯಲ್ಲಿ ನಿತಿನ್ ಪಟೇಲರ ಬೆಂಬಲಕ್ಕೆ ನಿಂತಿದ್ದಾರೆ. ಸಚಿವರು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ ಎಂದು ಅವರು ಹೇಳಿದ್ದಾರೆ.

ಹಾಗಾದರೆ ಅನ್ಯಾಯಕ್ಕೊಳಗಾದ ದಲಿತರಿಗೆ ನ್ಯಾಯ ಸಿಗುವುದು ಹೇಗೆ? ಬಿಜೆಪಿ ಅಧಿಕಾರದಲ್ಲಿರುವವರೆಗೆ ರಾಜ್ಯದಲ್ಲಿ ದುರ್ಬಲವರ್ಗದ ಜನರಿಗೆ ರಕ್ಷಣೆ ಸಿಕ್ಕೀತೆ?

ಸಾಮಾನ್ಯವಾಗಿ ಸಚಿವರಾಗಲಿ ಮುಖ್ಯಮಂತ್ರಿಯಾಗಲಿ ಯಾವುದೇ ಪ್ರಕರಣದಲ್ಲಿ ಆರೋಪವನ್ನು ಎದುರಿಸುತ್ತಿದ್ದಾಗ ಅವರು ರಾಜೀನಾಮೆ ಕೊಟ್ಟು ಅಧಿಕಾರದಿಂದ ಹೊರಗುಳಿಯದಿದ್ದರೆ ನಿಷ್ಪಕ್ಷಪಾತ ತನಿಖೆ ನಡೆಸಲು ಕಷ್ಟವಾಗುತ್ತದೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಸಂಗತಿ. ಅಂದಮೇಲೆ ನಿತಿನ್ ಪಟೇಲ್ ರಾಜೀನಾಮೆ ಕೊಡಬೇಕು ಅಥವಾ ಅವರನ್ನು ಸಂಪುಟದಿಂದ ಕೈಬಿಡಬೇಕು, ಅಲ್ಲವೇ? (ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?)

ತ್ರಿಪುರಾ: ಬುಡಕಟ್ಟು ವಿದ್ಯಾರ್ಥಿಗಳಿಗೆ ಒಂದು ಪ್ರಮುಖ ಕಲ್ಯಾಣ ಕಾರ್ಯ ಕ್ರಮ

ತ್ರಿಪುರಾದ ಎಡರಂಗ ಸರ್ಕಾರ ಇನ್ನೊಂದು ಮಹತ್ವಪೂರ್ಣ ಕಲ್ಯಾಣ ಕಾರ್ಯಕ್ರಮವನ್ನು ಮೇ 23 ರಂದು ಆರಂಭಿಸಿದೆ. ಬುಡಕಟ್ಟು ವಿದ್ಯಾರ್ಥಿಗಳಿಗೆ ಅವರ ಪಾಲಕರ ವಾರ್ಷಿಕ ಆದಾಯ 36,000ಕ್ಕಿಂತ ಕಮ್ಮಿಯಿದ್ದಲ್ಲಿ ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಒದಗಿಸುವ ಯೋಜನೆ ಆರಂಭಿಸಿದೆ. ಬುಡಕಟ್ಟು ವಿದ್ಯಾರ್ಥಿಗಳಲ್ಲಿ ಶಾಲೆಯನ್ನು ಮಧ್ಯದಲ್ಲೇ ಬಿಡುವವರ ಸಂಖ್ಯೆ ಹೆಚ್ಚುತ್ತಿದ್ದು ಅದನ್ನು ತಡೆಯಲು ಹಾಗೂ ಬುಡಕಟ್ಟು ಸಮುದಾಯದಲ್ಲಿ ಶಿಕ್ಷಣದ ಮುನ್ನಡೆಗೆ ಪ್ರೋತ್ಸಾಹ ನೀಡಲು ಈ ಕ್ರಮ ಆರಂಭಿಸಿರುವುದಾಗಿ ಮುಖ್ಯಮಂತ್ರಿ ದಶರಥದೇಬ್ ಹೇಳಿದ್ದಾರೆ. ಈ ಕ್ರಮದಿಂದ 1.53 ಲಕ್ಷ ಬುಡಕಟ್ಟು ವಿದ್ಯಾರ್ಥಿಗಳಿಗೆ ಪ್ರಯೋಜನ ದೊರೆಯಲಿದ್ದು ವಾರ್ಷಿಕ 76.38 ಲಕ್ಷ ರೂ ಖರ್ಚು ಬರಲಿದೆ. ಪಠ್ಯಪುಸ್ತಕ ಖರೀದಿಸಲಾಗದ್ದರಿಂದ ನಿರಕ್ಷರತೆ ಹಾಗೂ ಶಾಲೆ ಬಿಡುವ ದರ ಬುಡಕಟ್ಟು ಜನಗಳಲ್ಲಿ ಹೆಚ್ಚಾಗಿದೆ ಎಂದು ಒಂದು ಸರ್ವೆಯಿಂದ ತಿಳಿದು ಬಂದಿದ್ದು ಈ ಕ್ರಮ ಕೈಗೊಳ್ಳಲಾಗಿದೆ. ಇದುವರೆಗೆ ಮೊದಲನೇ ತರಗತಿ ವಿದ್ಯಾರ್ಥಿಗಳಿಗೆ ಮಾತ್ರ ಸೌಲಭ್ಯವಿತ್ತು.

'ಕೊಲೆಗಾರ' ಸಚಿವನ ವಿರುದ್ಧ ಸಿಡಿದೆದ್ದ ಯುವಜನತೆ

ಅತ್ತ ಗುಜರಾತಿನಲ್ಲಿ ದಲಿತರ ಮೇಲಿನ ದೌರ್ಜನ್ಯಕ್ಕೆ ನಾಯಕತ್ವ ನೀಡಿದ್ದ ಸಚಿವನ ವಿರುದ್ಧ ಕೂಗು ಎದ್ದಿದೆ. ಆದರೆ ಇತ್ತ ಕೇರಳದಲ್ಲಿ ಎಂಟು ತಿಂಗಳ ಹಿಂದೆ ಐದು ಯುವಕರ ಸಾವಿಗೆ ಕಾರಣರಾದ ಸಚಿವನ ವಿರುದ್ಧ ಅಲ್ಲಿನ ಯುವಜನತೆ ಸಿಡಿದೆದ್ದಿದ್ದಾರೆ.

ಕಳೆದ ವರ್ಷ ನವೆಂಬರ್ 25 ರಂದು ಕೂತುಪರಂಬುದಲ್ಲಿ ಪೋಲೀಸ್ ಗೋಲಿಬಾರಿಗೆ ಐವರು ಡಿ.ವೈ.ಎಫ್.ಐ. ಕಾರ್ಯಕರ್ತರು ಬಲಿಯಾಗಿದ್ದರು. ಆ ಹೇಯ ಕೃತ್ಯಕ್ಕೆ ಸಚಿವ ಎಂ.ವಿ. ರಾಘವನ್ ಅವರೇ ಹೊಣೆಗಾರರಾಗಿದ್ದರು.

ಅಂದಿನಿಂದಲೂ ರಾಘವನ್ ವಿರುದ್ಧ ಡಿ.ವೈ.ಎಫ್.ಐ. ಸತತವಾಗಿ ಚಳುವಳಿಯನ್ನು ನಡೆಸುತ್ತಾ ಬಂದಿದೆ.

ಐವರ ಸಾವಿಗೆ ಕಾರಣವಾದ ಗೋಲಿಬಾರಿಗೆ ಪ್ರೇರಕನಾದ ಸಚಿವ ರಾಘವನ್ ರನ್ನು ವಜಾ ಮಾಡುವಂತೆ ಒತ್ತಾಯಿಸಿ ಮೇ 16ರಂದು ಕೇರಳದಾದ್ಯಂತ ನೂರಾರು ಸರಕಾರಿ ಕಛೇರಿಗಳ ಮುಂದೆ ಡಿ.ವೈ.ಎಫ್.ಐ. ಪ್ರದರ್ಶನಗಳನ್ನು ನಡೆಸಿತು.

ರಾಜಧಾನಿ ತಿರುವನಂತಪುರದಲ್ಲಿ ಮುಖ್ಯಮಂತ್ರಿ ಎ.ಕೆ. ಆಂಟೋನಿ ಅವರ ಮನೆಯವರೆಗೂ ಜಾಥಾ ಹೋಗಲಿದ್ದ ಯುವಜನರನ್ನು ಪೋಲೀಸರು ತಡೆದರು. ಆಗ ಅವರು ಹಾದಿಯಲ್ಲೇ ಕುಳಿತು ಧರಣಿ ನಡೆಸಿದರು.

ಕೊಲೆ ಯತ್ನ ಸಂಚಿನಲ್ಲೂ ಭಾಗಿ

ಕೂತುಪರಂಬು ಪ್ರಕರಣ ಮಾತ್ರವಲ್ಲ ಸಿಪಿಐ(ಎಂ) ಕಣ್ಣೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಶಾಸಕ ಇ.ಪಿ. ಜಯರಾಜನ್ ಅವರ ಕೊಲೆಗೆ ನಡೆದ ಯತ್ನದ ಸಂಚಿನಲ್ಲೂ ರಾಘವನ್ ಆರೋಪಿಯಾಗಿದ್ದಾರೆ ಎಂದು ಧರಣಿ ಕುಳಿತವರನ್ನು ಉದ್ದೇಶಿಸಿ ಭಾಷಣ ಮಾಡಿದ ಕೊಡಿಯೇರಿ ಬಾಲಕೃಷ್ಣನ್ ಹೇಳಿದರು. ಅವರು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು. ಇಂಥ ಒಬ್ಬ ಕ್ರಿಮಿನಲ್ ಸಚಿವರು ಯಾವುದೇ ರಾಜ್ಯದಲ್ಲೂ ಅಧಿಕಾರದಲ್ಲಿ ಇರಲು ಬಿಡಬಾರದು ಎಂದು ಬಾಲಕೃಷ್ಣನ್ ಹೇಳಿದರು.

ವಿಚಾರಣೆ ಆರಂಭ

ಈ ನಡುವೆ ಕೂತುಪರಂಬು ಗೋಳಿಬಾರ್ ಪ್ರಕರಣದ ತನಿಖೆಗೆ ಸರ್ಕಾರ ನೇಮಿಸಿದ್ದ ಆಯೋಗ ಕಣ್ಣೂರು ಜಿಲ್ಲೆಯ ತಲಶೇರಿಯಲ್ಲಿ ತನ್ನ ಬೈಠಕನ್ನು ಆರಂಭಿಸಿದೆ.

ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಸಲ್ಲಿಸಲು ಎರಡು ತಿಂಗಳು ಕಾಲಾವಕಾಶ ನೀಡಬೇಕೆಂಬ ಪೋಲೀಸರ ಕೋರಿಕೆಯನ್ನು ಆಯೋಗ ತಳ್ಳಿ ಹಾಕಿತು. 10 ದಿನದಳಗೆ ಕಡತಗಳನ್ನು ಸಲ್ಲಿಸುವಂತೆ ನಿರ್ದೇಶನ ನೀಡಿತು.

ಹರ್ಯಾಣ ದಮನವನ್ನು ಲೆಕ್ಕಿಸದೆ ಕೃಷಿ ಕೂಲಿಕಾರರ ಹೋರಾಟ

ಹರ್ಯಾಣ ರಾಜ್ಯದ ಕರ್ನಾಲ್ ಜಿಲ್ಲೆಯ ಸಿತೋರಡಿ ಗ್ರಾಮದ ಕೃಷಿಕೂಲಿಕಾರರಿಗೆ ಒಂದು ಎಕ್ರೆ ಬೇಸಾಯಕ್ಕೆ ಸಿಗುವ ಕೂಲಿ 80 ಕಿಲೋ. ಸುತ್ತಮುತ್ತಲ ಗ್ರಾಮಗಳಲ್ಲಿ ಒಂದು ಕ್ವಿಂಟಲ್ ಕೂಲಿ ಸಿಗುತ್ತಿರುವುದರಿಂದ ತಮ್ಮ ಕೂಲಿಯನ್ನು ಹೆಚ್ಚಿಸಲು ಇಲ್ಲಿಯ ಕೃಷಿಕೂಲಿಕಾರರು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದಡಿ ಸಂಘಟಿತರಾಗಿ ಹೋರಾಟ ಆರಂಭಿಸಿದರು. ಭೂ ಮಾಲಕರು ಈ ಹೋರಾಟವನ್ನು ಮುರಿಯಲು ಬಡ ಕೃಷಿಕೂಲಿಕಾ[illegible] ಮೇಲೆ ಹಿಂಸಾಚಾರ ಹರಿಯಬಿಟ್ಟರು. ಪೋಲೀಸರು ಮಧ್ಯ ಪ್ರವೇಶಿಸಿ ಅಸಹಾಯಕರಾದ ಕೃಷಿ ಕೂಲಿಕಾರರು 95 ಕಿ.ಲೋ ಕೂಲಿಗೆ ಒಪ್ಪುವಂತೆ ಮಾಡಲಾಯಿತು. ಆಮೇಲೆ ಕೂಡಾ ಭೂಮಾಲಕರ ಹಿಂಸಾಚಾರ ನಿಲ್ಲಲಿಲ್ಲ, ಇದನ್ನು ಪ್ರತಿಭಟಿಸಿ ಮೇ 23 ರಂದು ಇದು ಕೃಷಿ ಕೂಲಿಕಾರರು ಜಿಲ್ಲಾ ಕಮಿಶನರ್ ಕಛೇರಿಗೆ ನುಗ್ಗಿ ಭೂಮಾಲಕರ ಹಿಂಸಾಚಾರ ನಿಲ್ಲಿಸುವಂತೆ ಆಗ್ರಹ ಪಡಿಸಿದರು. ಈ ಭೂಮಾಲಕರು ಹರ್ಯಾಣ ವಿಧಾನಸಭೆಯ ಸ್ಪೀಕರ್ ಈಶ್ವರ್ ಸಿಂಗ್‌ರ ಸಂಬಂಧಿಗಳು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನಿಲ್ ಚೋಪ್ರಾ, ಸಂಘದ ಹರ್ಯಾಣ ರಾಜ್ಯ ಕಾರ್ಯದರ್ಶಿ ಧರ್ಮವೀರ್ ಸಿಂಗ್ ಹಾಗೂ ಇತರ ಮುಖಂಡರ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ಧರಣಿ ಸತ್ಯಾಗ್ರಹವನ್ನು ಕಂಡ, ಅದುವರೆಗೆ ಯಾವ ಪ್ರತಿನಿಧಿ ಮಂಡಲಿಯನ್ನೂ ಭೇಟಿಯಾಗಲು ನಿರಾಕರಿಸಿದ್ದ ಜಿಲ್ಲಾ ಕಮಿಶನರ್ ಪ್ರತಿಕ್ರಿಯಿಸಲೇ ಬೇಕಾಗಿ ಬಂತು. ಆ ಗ್ರಾಮದಲ್ಲಿ ಶಾಂತಿ ಭಂಗವಾಗದಂತೆ ಆಜ್ಞೆ ಹೊರಡಿಸಬೇಕಾಯಿತು. ಕೃಷಿ ಕೂಲಿಕಾರರ ಮೇಲೆ ಹಲ್ಲೆ ನಡೆಸಿದ ಭೂ ಮಾಲಕರ ವಿರುದ್ಧ ಎಫ್.ಐ.ಆರ್.ಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ.

ಇಂತಹ ಹಿಂಸಾಚಾರಗಳನ್ನು ಮುಂದುವರಿಯದಂತೆ ತಡೆಯಬೇಕಾದರೆ ಗ್ರಾಮಮಟ್ಟದಲ್ಲಿ ತ್ರಿಪಕ್ಷೀಯ ವಿವಾದ ಪರಿಹಾರ ಸಮಿತಿಗಳಿರಬೇಕು, ಕೃಷಿ ಕೂಲಿಕಾರರನ್ನು ಬೆದರಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಒತ್ತಾಯಿಸಿದೆ.

ಟಿ.ಯು.ಜೆ.ಎಸ್. ಹೋಳು

ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್(ಐ)ನ ಕೃಪಾಶ್ರಯದಲ್ಲಿ ಕೊಬ್ಬಿಬೆಳೆದಿದ್ದ ತ್ರಿಪುರಾ ಉಪ ಜಾತಿ ಜುಬಾ ಸಮಿತಿ (ಟಿ.ಯು.ಜೆ.ಎಸ್.) ಎರಡು ಹೋಳಾಗಿದೆ.

ಈ ಪಕ್ಷದ ಉಚ್ಚಾಟಿತ ಅಧ್ಯಕ್ಷ ಹರಿನಾಥ ದೇವ್ ವರ್ಮಾ ಮೇ 17 ರಂದು ವ್ಯವಸ್ಥೆಗೊಳಿಸಿದ್ದ ಒಂದು ಸಮ್ಮೇಳನದಲ್ಲಿ 'ತ್ರಿಪುರಾ ನ್ಯಾಷನಲ್ ಕಾನ್ಫರೆನ್ಸ್' (T.N.C)ಎಂಬ ಹೊಸ ಪಕ್ಷ ಉದಯವಾಗಿದೆ. ಟಿ.ಯು.ಜೆ.ಎಸ್. ಕೇಂದ್ರ ಸಮಿತಿಯ ಬಹಳಷ್ಟು ಸದಸ್ಯರು ಹೊಸ ಪಕ್ಷದೊಂದಿಗೆ ಇದ್ದಾರೆ.

ಶ್ಯಾಮಚರಣ್ ತ್ರಿಪುರಾ ಅವರು ಟಿ.ಯು.ಜೆ.ಎಸ್. ಅನ್ನು ಕಾಂಗ್ರೆಸ್(ಐ)ನ ಗುಲಾಮತನಕ್ಕೆ ಒಳಪಡಿಸಿದ್ದರಿಂದ ಈ ಒಡಕು ಉಂಟಾಯಿತು ಎಂದು ಸಮ್ಮೇಳನದಲ್ಲಿ ಮಾತನಾಡಿದ ಹರಿನಾಥ ದೇವ ವರ್ಮಾ ಹೇಳಿದರು.

ಇದಕ್ಕೆ ಮುಂಚೆ ನಡೆದ ಕ್ಷಿಪ್ರ ವಿದ್ಯಮಾನಗಳಲ್ಲಿ ಹರಿನಾಥ ದೇವ್ ವರ್ಮಾರನ್ನು ಪಕ್ಷದ ಒಂದು ವಿಭಾಗ ಅಧ್ಯಕ್ಷ ಸ್ಥಾನದಿಂದ ಅಮಾನತು ಮಾಡಿತ್ತು. ಇದನ್ನು ತಡೆಯಲು ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಮೈತ್ರಿಕೂಟದ ಒಂದು ವಿಭಾಗ ನಡೆಸಿದ ಯತ್ನ ವಿಫಲವಾಗಿತ್ತು.

ಆದಾದ ಮೇಲೆ ಅಧ್ಯಕ್ಷ ಸ್ಥಾನದಿಂದ ಉಚ್ಚಾಟಿತರಾದ ಹರಿನಾಥ ದೇವ್ ವರ್ಮಾ ಟಿ.ಯು.ಜೆ.ಎಸ್., ತ್ರಿಪುರಾ ರಾಷ್ಟ್ರೀಯ ಸ್ವಯಂ ಸೇವಕರು (ಟಿ.ಎನ್.ವಿ.) ಮತ್ತು ಅವುಗಳ ಎಲ್ಲಾ ಅಂಗ ಸಂಸ್ಥೆಗಳ ಸಮ್ಮೇಳನವೊಂದನ್ನು ಕರೆದಿದ್ದರು.

ಈ ಸಮ್ಮೇಳನದಲ್ಲಿ ಅವರು ಹೊಸ ಪಕ್ಷದ ಸ್ಥಾಪನೆಯನ್ನು ಘೋಷಿಸಿದರು.

28 ವರ್ಷಗಳ ಹಿಂದೆ ಸ್ಥಾಪನೆಯಾದ ಟಿ.ಯು.ಜೆ.ಎಸ್. ಬುಡಕಟ್ಟು ಯುವಜನರ ಒಂದು ಸಂಘಟನೆಯಾಗಿದೆ ಎಂದು ದೇವ್ ವರ್ಮಾ ಹೇಳಿದ್ದಾರೆ.

ಆದರೆ ಈಗ ಅದರ ಬಹುತೇಕ ನಾಯಕರು ಯೌವನಾವಸ್ಥೆಯನ್ನು ದಾಟಿದವರಾಗಿದ್ದಾರೆ. ಆದ್ದರಿಂದ ಹೊಸ ಪಕ್ಷವನ್ನು ಕಟ್ಟುವುದು ಅಗತ್ಯವಾಯಿತು ಎಂಬುದು ಅವರ ಪ್ರತಿಪಾದನೆ.

ಅವರು ಏನೇ ನೆಪ, ಕಾರಣ ನೀಡಬಹುದು. ಆದರೆ ಪಕ್ಷದಲ್ಲಿ ವ್ಯಾಪಕ ಭ್ರಷ್ಟಾಚಾರ, ಸ್ವಾರ್ಥಿ ನಾಯಕರುಗಳ ವಿರುದ್ಧ ಪಕ್ಷದ ಆಂತರಿಕ ಸಂಘರ್ಷದಿಂದಾಗಿ ಈ ಅನಿವಾರ್ಯ ಸ್ಥಿತಿ ಬಂದಿರುವುದು ವಾಸ್ತವ ಸಂಗತಿಯಾಗಿದೆ.

ಟಿ.ಎನ್.ವಿ. ಹೊಸ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳಲಿರುವುದು ಮಹತ್ವದ ಸಂಗತಿಯಾಗಿದೆ.

ಟಿ.ಯು.ಜೆ.ಎಸ್. ಎರಡು ಹೋಳಾಗಿರುವುದರಿಂದ ಸ್ವಾಯತ್ತ ಗುಡ್ಡಗಾಡು ಮಂಡಳಿ (ಎ.ಡಿ.ಸಿ.) ಆಡಳಿತ ಮೇಲೂ ಪರಿಣಾಮ ಬೀರಲಿದೆ.

ಟಿ.ಯು.ಜೆ.ಎಸ್.ನ ಒಟ್ಟು 12 ಸದಸ್ಯರು ಎ.ಡಿ.ಸಿ.ನಲ್ಲಿದ್ದರು. ಹೋಳಾದ ಮೇಲೆ ಎರಡೂ ಬಣಗಳಲ್ಲಿ ತಲಾ ಆರು ಸದಸ್ಯರು ಹಂಚಿ ಹೋಗಿದ್ದಾರೆ.

"ಹಿಂದುತ್ವ"ದ ಭವಿಷ್ಯವೇನು?

ಪುಟ 5 ರಿಂದ

ತಮ್ಮ ಹಕ್ಕನ್ನು ಒತ್ತಿ ಹೇಳುವ ದಲಿತರೆಂದು ಕರೆಸಿಕೊಳ್ಳಬಯಸುತ್ತಾರೆ.

ಈ ಹೆಸರು ಬದಲಾವಣೆ ಭಾರತ ಅತ್ಯಂತ ಶೋಷಿತ ವಿಭಾಗಗಳಲ್ಲಿ ಹೆಚ್ಚುತ್ತಿರುವ ಸಮರಶೀಲ ಪ್ರಜ್ಞೆಯನ್ನು ತೋರಿಸುವಂತದ್ದು. ಅವರೀಗ ಹಿಂದಿನಂತೆ ಬ್ರಾಹ್ಮಣರ ಕೃಪೆಯಿಂದಲೇ (ಅದು ಕಾಂಗ್ರೆಸ್ಸಿನದಿರಬಹುದು ಅಥವಾ ಬಿಜೆಪಿಯದ್ದಿರಬಹುದು) ತೃಪ್ತರಾಗಲಾರರು, ಸಮಾನ ಸ್ಥಾನಮಾನದಿಂದ ಅಧಿಕಾರದಲ್ಲಿ ಪಾಲು ಬಯಸುತ್ತಾರೆ. ಆದ್ದರಿಂದ ಬಿ.ಎಸ್.ಪಿ.ಯ ಸಮಯಸಾಧಕ ಮುಖಂಡರು ಅಧಿಕಾರ ಪಡೆಯಲು ಬಿಜೆಪಿಯ ನೆರವು ಪಡೆದರೂ ಆ ಪಕ್ಷದ ಕಾರ್ಯಕರ್ತರು, ಬಹುಪಾಲು ದಲಿತ-ವಿಭಾಗಗಳು ಆ 'ಮನುವಾದಿ' ಪಕ್ಷದತ್ತ ಸಾಗುವ ಸಂಭವ ಇಲ್ಲ.

ಎರಡನೆಯದಾಗಿ, ಬಿಜೆಪಿಯ ಮೇಲ್ಜಾತಿಪರ ಒಲವು ಕಡಾ ಇತ್ತೀಚಿನ ವರ್ಷಗಳಲ್ಲಿ ಹೆಚ್ಚೆಚ್ಚು ಪ್ರಖರವಾಗಿದೆ - ಮುಖ್ಯವಾಗಿ ಕೆಳಜಾತಿಗಳ ಜನ ತಮ್ಮ ಹಕ್ಕನ್ನು ಒತ್ತಾಯಿಸಿದಾಗ. 'ಹಿಂದುತ್ವ' ಸಂಪೂರ್ಣ ಹಿಂದೂ ಸಮುದಾಯವನ್ನು ಆವರಿಸಬಲ್ಲ ತತ್ವ ಎಂದು ಬಿಜೆಪಿ, ಆರ್.ಎಸ್.ಎಸ್. ಚಿತ್ರಿಸಬಯಸಿದರೂ, ತಮ್ಮ ಚಟುವಟಿಕೆಗಳಲ್ಲಿ ದಲಿತರನ್ನು, ಹಿಂದುಳಿದವರನ್ನು ತೊಡಗಿಸಿಕೊಳ್ಳಲು ಯತ್ನಿಸಿದರೂ (ಉದಾಹರಣೆಗೆ, ರಾಮಜನ್ಮಭೂಮಿ ಮಂದಿರದ ಶಿಲಾನ್ಯಾಸ ಒಬ್ಬ ದಲಿತನಿಂದ ಮಾಡಿಸಿದರು; 1990ರಲ್ಲಿ ಅಯೋಧ್ಯೆಯಲ್ಲಿ ಕರಸೇವಕರ ನೇತೃತ್ವ ವಹಿಸಲು ಯಾದವ ಹುಡುಗರನ್ನು ಆರಿಸಿದರು) ಮೇಲ್ಜಾತಿಯವರೇ ಬಿಜೆಪಿಯ ಬೆನ್ನೆಲುಬು ಎಂಬ ವಾಸ್ತವತೆ ಉಳಿದೇ ಉಳಿಯುತ್ತದೆ. ಈ ಮೇಲ್ಜಾತಿ ಜನ ಹಳ್ಳಿಗಳಲ್ಲಿ ಭೂಮಾಲಕರಾಗಿದ್ದರೆ, ಪಟ್ಟಣ-ನಗರಗಳಲ್ಲಿ ಮಧ್ಯಮ ವರ್ಗದವರು. ಇವರೆಲ್ಲರಲ್ಲಿ ಹಿಂದೂ ಸಮಾಜದ ದಲಿತ ವಿಭಾಗಗಳ ಮೂಡಿಬರುತ್ತಿರುವ ಶಕ್ತಿಯನ್ನು ಕಂಡರೆ ಭಯ, ದ್ವೇಷ ತುಂಬಿದೆ.

ಇದು ಉತ್ತರ ಪ್ರದೇಶದಲ್ಲಷ್ಟೇ ಅಲ್ಲ, ದೇಶದ ಇತರೆಡೆಯೂ ನಿಜ. ಉದಾಹರಣೆಗೆ ಗುಜರಾತಿನಲ್ಲಿ ಬಿಜೆಪಿ-ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲೆ ಹಲ್ಲೆಗಳು ಹೆಚ್ಚಿವೆ. ಕಡಿ ಎಂಬಲ್ಲಿ ಮೇಲ್ಜಾತಿಯವರು ದಲಿತರಿಗೆ ಹೊಡೆದ ಘಟನೆಯ ಬೆನ್ನ ಹಿಂದೆಯೇ ಉತ್ತರ ಗುಜರಾತಿನ ಸಬರ್‌ಕಾಂತ ಜಿಲ್ಲೆಯ ಕಾಂಕ್ರೋಲ್ ಗ್ರಾಮದಲ್ಲಿ ಇತರರ ನಲ್ಲಿಯಿಂದ ನೀರು ಕುಡಿದರೆಂದು ಎಂಟು ದಲಿತರ ಮೇಲೆ ಹಲ್ಲೆ ಮಾಡಿದ ಘಟನೆ ವರದಿಯಾಗಿದೆ.

ಬಿಜೆಪಿಯಲ್ಲಿ ಮಾಯಾವತಿಯವರನ್ನು ಬೆಂಬಲಿಸುವ ನಿರ್ಣಯದಲ್ಲಿ ಐಕ್ಯತೆಯಿದೆಯೆಂದನಿಸಿದರೂ ಇಂತಹ "ಜಾತೀವಾದಿ" ಶಕ್ತಿಯೊಂದಿಗೆ ಕೈ ಮಿಲಾಯಿಸುವ ಪ್ರಯತ್ನದಿಂದ ಪಕ್ಷದೊಳಗೆ ಹಲವು ವಿಭಾಗಗಳಿಗೆ ಸಂತೋಷವಾಗಿಲ್ಲ. ಬಿಜೆಪಿಯೊಳಗೆ ತಿಕ್ಕಾಟ, ವಿಶೇಷವಾಗಿ ಗುಂಪುಗಾರಿಕೆಯಿಂದ ಪೀಡಿತವಾದ ಉತ್ತರ ಪ್ರದೇಶದಂತಹ ಘಟಕಗಳಲ್ಲಿ ಕಾಲಕ್ರಮೇಣ ಹೆಚ್ಚುವ ಸಂಭವವಿದೆ. ಮಹಾರಾಷ್ಟ್ರದಲ್ಲಿ ಈಗಾಗಲೇ ಅದರ ಮಿತ್ರ ಶಿವಸೇನೆಯ "ಸಾಮ್‌ನಾ" ಪತ್ರಿಕೆಯ ಸಂಪಾದಕೀಯ ಬಿಜೆಪಿಯ ನಿರ್ಣಯವನ್ನು ಬಲವಾಗಿ ಖಂಡಿಸಿದೆ. "ಈಗ ಬಿ.ಎಸ್.ಪಿ.ಯ ಚುಂಬನ ಬಿಜೆಪಿಗೆ ಕ್ಷಣಿಕ ಆನಂದ ನೀಡಿರ ಬಹುದು. ಆದರೆ ಅದು ಅದರ ಮನೆಯನ್ನು ಸುಟ್ಟು ಬೂದು ಮಾಡಲಿದೆ" ಎಂದು ಅದು ಹೇಳಿದೆ.

ಅಂದರೆ ದಲಿತರ ಈ ಒಂದು ಪಕ್ಷದೊಂದಿಗೆ ಕಾವಿಪಡೆಗಳ ಪ್ರೇಮಸಲ್ಲಾಪ ಗೋಳಿನಲ್ಲೇ ಸಮಾಪ್ತಿಯಾಗಬಹುದು. ಬಿಜೆಪಿಗೆ ದಲಿತರ ಹೆಚ್ಚಿನ ಬೆಂಬಲವೂ ದೊರೆಯಲಾರದು. ಅಲ್ಲದೆ ಇದರಿಂದಾಗಿ ತನಗಿರುವ ಮೇಲ್ಜಾತಿಗಳ ಬೆಂಬಲವನ್ನೂ ಕಳೆದುಕೊಳ್ಳಬಹುದು.

ಬೆಲರೂಸ್‌ನಲ್ಲಿ ಜನಮತ ಸಂಗ್ರಹ

ಕೆಂಬಾವುಟಕ್ಕೆ, ರಶ್ಯ ಜತೆ ಘನವಾದ ಆರ್ಥಿಕ ಸಂಬಂಧಕ್ಕೆ ಜನಮತ

ಬೆಲಾರೂಸ್‌ನಲ್ಲಿ ಇತ್ತೀಚೆಗೆ ನಡೆದ ಜನಮತ. ಸಂಗ್ರಹದ ಫಲಿತಾಂಶ ಮಾಜಿ ಸೋವಿಯೆತ್ ಒಕ್ಕೂಟದ ಗಣರಾಜ್ಯಗಳಲ್ಲಿ ಸಕಾರಾತ್ಮಕ ಬೆಳವಣಿಗೆಯತ್ತ ಆಶಾಭಾವನೆಯಿಂದ ನೋಡುತ್ತಿದ್ದವರಿಗೆ ಮುದ ನೀಡಿದೆ. ಜನಮತಸಂಗ್ರಹದಲ್ಲಿ ಹಾಕಲಾಗಿದ್ದ ನಾಲ್ಕು ಪ್ರಶ್ನೆಗಳಿಗೆ ಹೆಚ್ಚಿನ ಮತದಿಂದ ಜನ ಅನುಮೋದನೆ ನೀಡಿದ್ದಾರೆ. ಜನಮತ ಸಂಗ್ರಹದಲ್ಲಿನ ಪ್ರಶ್ನೆಗಳೆಂದರೆ -ರಶ್ಯಾದೊಂದಿಗೆ ಘನವಾದ ಆರ್ಥಿಕ ಸಂಬಂಧ ಮರುಸ್ಥಾಪಿಸಬೇಕೆ? ಬೈಲೋರಶ್ಯನ್ ಭಾಷೆಯ ಜತೆಗೆ ರಶ್ಯನ್‌ಗೂ ಸಮಾನ ಅಧಿಕೃತ ಭಾಷೆಯ ಸ್ಥಾನಮಾನ ಕೊಡಬೇಕೆ; ಬೈಲೋ ರಶ್ಯದ ಧ್ವಜ ಹಿಂದೆ ಇದ್ದಂತೆ ಕೆಂಬಾವುಟವಾಗಿರಬೇಕೆ; ಪಾರ್ಲಿಮೆಂಟು ಸಂವಿಧಾನದ ವಿರುದ್ಧ ನಡೆದರೆ ಅಧ್ಯಕ್ಷರಿಗೆ ಅದನ್ನು ವಿಸರ್ಜಿಸುವ ಅಧಿಕಾರ ಇರಬೇಕೆ ? -ಇವೆಲ್ಲದಕ್ಕೂ 'ಹೌದು' ಎಂಬುದಕ್ಕೆ ಶೇಕಡಾ ಲಂಕ್ಕಿಂತಲೂ ಹೆಚ್ಚಿನ ಬಹುಮತದಿಂದ ಜನ ಅನುಮೋದನೆ ನೀಡಿದ್ದಾರೆ.

ಕಳೆದ ಎರಡು ಮೂರು ವರ್ಷಗಳಲ್ಲಿ ಬೆಲರೂಸ್‌ನಲ್ಲಿ ರಾಜಕೀಯ ಬೆಳವಣಿಗೆ ವೇಗವಾಗಿ ಆಗುತ್ತಿದೆ. ಹಿಂದೆ ಅದು ಸೋವಿಯೆತ್ ಒಕ್ಕೂಟವನ್ನು ಒಡೆಯುವಲ್ಲಿ ಮುಖ್ಯ ಪಾತ್ರವಹಿಸಿತ್ತು. ಆದರೆ ಒಂದು ವರ್ಷದ ಹಿಂದೆ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ್ -ವಿರೋಧಿ ರಂಗದ ಅಭ್ಯರ್ಥಿ ಸೋತು ಜನ-ಪರ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶಂಕೊ ಆಯ್ಕೆಯಾಗಿದ್ದರು. ಈಗ ಈ ಜನಮತಸಂಗ್ರಹದ ಫಲಿತಾಂಶಗಳು ಎರಡು ಮೂರು ವರ್ಷಗಳ ಜನಮತಸಂಗ್ರಹದ ಜತೆ ಚುನಾವಣೆಗಳನ್ನು ಏರ್ಪಾಡು ಮಾಡಲಾಗಿತ್ತು. 260 ಸೀಟುಗಳಲ್ಲಿ 18 ಸೀಟುಗಳಲ್ಲಿ ಮೊದಲ ಸುತ್ತಿನಲ್ಲಿ ಆಯ್ಕೆಯಾಗಿದ್ದು, ಅವು ಎಲ್ಲಾ ವಿರೋಧ ಪಕ್ಷಗಳಿಗೆ ದೊರಕಿವೆ. ಶೇಕಡಾ 50 ಮತದಾನ ಚುನಾವಣೆ ಕಾನೂನುಬದ್ಧ ಎಂದು ಘೋಷಿಸಲು ಅಗತ್ಯ. ಎರಡನೇ ಸುತ್ತಿನಲ್ಲಿ ಮೂರನೇ ಎರಡರಷ್ಟು ಸೀಟುಗಳಲ್ಲಿ ಆಯ್ಕೆಯಾಗದಿದ್ದರೆ, ಮರು ಚುನಾವಣೆ ನಡೆಯಬೇಕು.

ಬೈಲೋರಶ್ಯಾ ಹಾಗೂ ಉಕ್ರೇನ್ ರಶ್ಯಾದ ಜತೆ ಅಕ್ಟೋಬರ್ ಕ್ರಾಂತಿಯ ಮೊದಲು ಸಹ ಹಲವಾರು ಶತಮಾನಗಳ ಕಾಲ ಘನವಾದ ಸಂಬಂಧ ಹೊಂದಿದ್ದ ದೇಶಗಳು ಬೈಲೋರಶ್ಯಾ ಅಂದರೆ ಬಿಳಿಯ ರಶ್ಯಾ. ಈ ಮೂರು ದೇಶಗಳ ಬಹುಸಂಖ್ಯಾತರು ಸ್ಲಾವ್ ಜನಾಂಗದವರೇ. ಬೈಲೋರಶ್ಯಾ 18ನೇ ಶತಮಾನದ ಕೊನೆಯ ಹೊತ್ತಿಗೆ ರಶ್ಯಾದ ಭಾಗವಾಗಿತ್ತು. ಮೊದಲ ಮಹಾಯುದ್ಧ, ಅಕ್ಟೋಬರ್ ಕ್ರಾಂತಿಯ ನಂತರದ ಅಂತರ್ಯುದ್ಧ, ವಿದೇಶಿ ಆಕ್ರಮಣ ಬೆಲಾರಸ್‌ನ ತೀವ್ರವಾಗಿ ಘಾಸಿಗೊಳಿಸಿತ್ತು. ಸೋವಿಯೆತ್ ಆಡಳಿತದಲ್ಲಿ ಬೈಲೋರಶ್ಯಾ ಒಕ್ಕೂಟದ ಅಭಿವೃದ್ಧ ಕೈಗಾರಿಕಾ, ಕೃಷಿ ಪ್ರದೇಶವಾಗಿ ಬೆಳೆಯಿತು. ಗೋರ್ಬಚೇವ್ ಅಧ್ಯಕ್ಷತೆ ಕಾಲದಲ್ಲೂ ಇತರ ಗಣರಾಜ್ಯಗಳಿದ್ದಂತೆ ರಾಷ್ಟ್ರೀಯತಾ ಪ್ರತ್ಯೇಕತಾ ಚಳುವಳಿಗಳು ಇಲ್ಲಿ ಬೆಳೆದಿರಲಿಲ್ಲ. ಬೈಲೋರಶ್ಯಾವನ್ನು ಪ್ರತ್ಯೇಕ ದೇಶವಾಗಿಸಲಿಕ್ಕೆ ಜನಬೆಂಬಲ ಇರಲಿಲ್ಲ. ಅಧಿಕಾರ ಕಸಿದುಕೊಳ್ಳಲು ನಡೆದ ಪಿತೂರಿಯ ಭಾಗವಾಗಿ ಮೇಲಿಂದ ನಡೆಸಿದ ಪ್ರತ್ಯೇಕತಾವಾದ ಅಲ್ಲಿ ಕಂಡಿತ್ತು. ಬೆಲರೂಸ್ ಸಮೃದ್ಧ ಸ್ವತಂತ್ರ ಭಾಷೆಯಾದರೂ, ರಶ್ಯನ್ ಭಾಷೆಯನ್ನು ಇಲ್ಲಿ ಹಲವಾರು ಶತಮಾನಗಳಿಂದ ವ್ಯಾಪಕವಾಗಿ ಬಳಸಲಾಗುತ್ತಿತ್ತು. ಸೋವಿಯೆತ್ ಒಕ್ಕೂಟದ ವಿಘಟನೆ ನಂತರ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ -ವಿರೋಧಿ ರಂಗ ಜನರ ಮೇಲೆ ಬೆಲಾರೂಸ್ ಭಾಷೆಯನ್ನು ಏಕಮಾತ್ರ ಅಧಿಕೃತ ಭಾಷೆಯಾಗಿ ಹೊರಿಸಿತ್ತು. ಅಲ್ಲದೆ ಬೆಲಾರೂಸ್ ಪ್ರತ್ಯೇಕ ದೇಶವಾಗಿ ಎಂದೂ ಇರಲಿಲ್ಲ. ಆದ್ದರಿಂದ ಜನಮತ ಸಂಗ್ರಹದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಇಷ್ಟು ಅತ್ಯಧಿಕ ಬೆಂಬಲ ಸಿಕ್ಕಿದ್ದು.

ರಶ್ಯನ್ ಫೆಡರೇಷನ್ ಕಮ್ಯುನಿಸ್ಟ್ ಪಕ್ಷ ಹಾಗೂ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷಗಳು ಸೋವಿಯೆತ್ ಒಕ್ಕೂಟದ ಪುನಃ ಸ್ಥಾಪನೆಗೆ ಕೊಟ್ಟಿರುವ ಘೋಷಣೆಯ ಸಂದರ್ಭದಲ್ಲಿ ಬೆಲಾರೂಸ್‌ನ ಜನಮತಸಂಗ್ರಹ ಗಮನಾರ್ಹ. ರಶ್ಯನ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಝುಗನೊವ್ ಹೇಳಿದಂತೆ ರಶ್ಯ ಉಕ್ರೇನ್ ಹಾಗೂ ಬೆಲಾರೂಸ್‌ಗಳು ಪುನಃ ಒಕ್ಕೂಟ ರಚಿಸಿಕೊಳ್ಳುವುದು ಸೋವಿಯೆತ್ ಒಕ್ಕೂಟ ಪುನಃ ಸ್ಥಾಪನೆಯ ಮೊದಲ ಹಂತ. ಇದು ನಿಜವಾಗುವ ಕಾಲ ಹತ್ತಿರ ಬರುತ್ತಿದೆ.

ಲೋಕ ಸಂಚಾರ

ಶರತ್ಚಂದ್ರ

ಕ್ಯೂಬಾಕ್ಕೆ ವಿಯೆಟ್ನಾಂ ನಿಂದ ಅಕ್ಕಿ ಸಹಾಯ

ಕ್ಯೂಬಾದ ಆಹಾರ ಕೊರತೆ ನಿವಾರಿಸಲು ವಿಯೆಟ್ನಾಂ 20 ಸಾವಿರ ಟನ್ ಅಕ್ಕಿ ಸಹಾಯವಾಗಿ ನೀಡಲಿದೆ. ಕಳೆದ ಅಕ್ಟೋಬರ್ ನಿಂದ ಜನವರಿವರೆಗೆ ರಾಷ್ಟ್ರವ್ಯಾಪಿ ಪ್ರಚಾರ ನಡೆಸಿ 50 ಶತಕೋಟಿ ಡೋಂಗ್ (50 ಲಕ್ಷ ಡಾಲರುಗಳು)ಗಳಷ್ಟು ಫಂಡ್ ಸಂಗ್ರಹಿಸಿದೆ. ಇದನ್ನು ಅಕ್ಕಿ ಹಾಗೂ ಇತರ ಕ್ಯೂಬಾಕ್ಕೆ ಅವಶ್ಯಕ ಸಾಮಗ್ರಿಗಳನ್ನು ಕೊಳ್ಳಲು ಬಳಸಲಾಗುವುದು.

ಗೋರ್ಬಚೆವ್‌ರ ವಿದೇಶ ಮಂತ್ರಿಯ ಆಳ್ವಿಕೆಯಲ್ಲಿ ಜಾರ್ಜಿಯಾದ ದುಸ್ಥಿತಿ

ಜಾರ್ಜಿಯ ಸೋವಿಯೆತ್ ಒಕ್ಕೂಟದಲ್ಲಿ ಕೃಷಿ ಉತ್ಪನ್ನಗಳು ಹಾಗೂ ಹಣ್ಣು ತರಕಾರಿಗಳಿಗೆ ಪ್ರಸಿದ್ಧವಾಗಿದ್ದ ಗಣರಾಜ್ಯ. ಇಂದು ಜಾರ್ಜಿಯದ ನಾಗರಿಕರು ಆಹಾರವಿಲ್ಲದೆ ಒಣಗುತ್ತಿದ್ದಾರೆ. ಹಸಿವು, ಅಪೌಷ್ಠಿಕತೆಯಿಂದ ನಾಗರಿಕರು ಬಳಲುತ್ತಿದ್ದಾರೆ. ಸೋವಿಯೆತ್ ಅವಧಿಯಲ್ಲಿ ಬಿಸಿನೀರು, ತಣ್ಣೀರು, ಗ್ಯಾಸ್-ಪೈಪ್‌ಗಳಿಂದ ಸರಬರಾಜು ಆಗುತ್ತಿತ್ತು. ಈಗ ಜಾರ್ಜಿಯದ ಅಲ್‌ಖಾಜಿಯದಲ್ಲಿ ನಡೆಯುತ್ತಿರುವ ಪ್ರತ್ಯೇಕತಾ ಯುದ್ಧದಲ್ಲಿ, ಜಾರ್ಜಿಯದ ಆರ್ಥಿಕತೆ ಜರ್ಝರಿತವಾಗಿದೆ. ಇದರಿಂದ ಗ್ಯಾಸ್ ಹಾಗೂ ಬಿಸಿನೀರು ಪೂರೈಕೆ ಪೂರ್ಣವಾಗಿ ನಿಂತು ಹೋಗಿದೆ. ಅಬ್‌ಖಾಜಿಯಾದಿಂದ ಬಂದ 80 ಸಾವಿರ ನಿರಾಶ್ರಿತರು ಜಾರ್ಜಿಯದ ಆರ್ಥಿಕ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿದ್ದಾರೆ. ಅಬ್‌ಖಾಜಿಯಾದ ಪ್ರತ್ಯೇಕತಾವಾದಿಗಳಿಗೆ ರಶ್ಯದಿಂದ ಹಾಗೂ ಪಾಶ್ಚಿಮಾತ್ಯ ದೇಶಗಳಿಂದ ಕುಮ್ಮಕ್ಕು ದೊರೆಯುತ್ತಿದೆ.

ಜಾರ್ಜಿಯಾಕ್ಕೆ ತನ್ನದೇ ಆದ ನಾಣ್ಯವೇ ಇಲ್ಲ. ಸರಕಾರ ಹೊರಡಿಸಿರುವ ಕೂಪನ್‌ಗಳನ್ನೇ ಇಲ್ಲಿನ ಆರ್ಥಿಕ ಚಟುವಟಿಕೆಗಳಿಗೂ ಬಳಸಲಾಗುತ್ತಿದೆ. ಒಂದು ಡಾಲರ್‌ಗೆ 13 ಲಕ್ಷ ಕೂಪನ್‌ಗಳನ್ನು ವಿನಿಮಯ ಮಾಡಲಾಗುತ್ತಿದೆ. ಸರ್ಕಾರಿ ಉದ್ಯೋಗಿಯ ಸಂಬಳ ಒಂದು ಡಾಲರಿನಷ್ಟಾಗುತ್ತದೆ ಅಷ್ಟೇ. ಇದರಿಂದ ಆಹಾರಕೊಳ್ಳಲು ಆಗುತ್ತಿಲ್ಲ. ಡಾಕ್ಟರುಗಳು, ನರ್ಸ್ ಗಳು, ವಿಶ್ವವಿದ್ಯಾಲಯ, ತಾಂತ್ರಿಕ ಸಂಸ್ಥೆಗಳ ಉದ್ಯೋಗಿಗಳದ್ದು ಇದೇ ಅವಸ್ಥೆ. ಅವರಿಗೆ ಸಿಗುವ ಸಂಬಳ ಆಹಾರಕ್ಕೂ ಸಾಲದೆ, ಹೆಚ್ಚಿನವರು ಕೆಲಸಕ್ಕೆ ಹೋಗುತ್ತಿಲ್ಲ. ಜನ ಹೇಗೆ ಬದುಕುತ್ತಿದ್ದಾರೆ ಎಂಬುದೇ ದೊಡ್ಡ ಅದ್ಭುತವಾಗಿದೆ.

ಸೂಪರ್ ವಾಹಕತೆಯಲ್ಲಿ ಪ್ರಮುಖ ಕಾಣಿಕೆ ನೀಡಿದ್ದ ವಿಜ್ಞಾನಿಯೊಬ್ಬರು ಟ್ಯಾಕ್ಸಿ ಓಡಿಸುತ್ತಿದ್ದಾರೆ. ಜಾರ್ಜಿಯಾದ ಮಹಿಳಾ ಯೋಜನಾ ಡೈರೆಕ್ಟರ್ ಈಗ ಹಸಿವಿನಿಂದ ಬಳಲುತ್ತಿದ್ದಾರೆ. ನರ್ಸ್ ಗಳು ರೆಸ್ಟೊರೆಂಟ್‌ಗಳಲ್ಲಿ ಮಾಣಿ ಉದ್ಯೋಗದಲ್ಲಿ ಸೇರಿಕೊಂಡಿದ್ದಾರೆ. ಇದ್ದ ಬದ್ದ ಕಾರ್ಖಾನೆಗಳು ಮುಚ್ಚಿವೆ. ಕಬ್ಬಿಣ ಸಿಗದೆ, ವಿದ್ಯುತ್ ಇಲ್ಲದೆ.

ಗೋರ್ಬಚೇವ್ ರ ಕುಖ್ಯಾತ ಸರ್ಕಾರದ ಕುಖ್ಯಾತ ವಿದೇಶ ಮಂತ್ರಿಯಾಗಿದ್ದ ಎಡ್ವರ್ಡ್ ಶೆವರ್‌ನಾದ್‌ಝೆ ಈಗ ಇಲ್ಲಿನ ಅಧ್ಯಕ್ಷ. ಆದರೆ ಇಲ್ಲಿ ಜನ ಒಂದು ಸರ್ಕಾರ ಇದೆ ಎಂದು ಭಾವಿಸುವುದಿಲ್ಲ. ಅಧ್ಯಕ್ಷರಿಗೆ ಪಾಶ್ಚಿಮಾತ್ಯ ಸರ್ಕಾರಗಳ ಬೆಂಬಲವಿದೆ. ಆದರೂ ವಿದೇಶಿ ಬಂಡವಾಳ ಹರಿದುಬರುತ್ತಿಲ್ಲ. ಬಹುಶಃ ರಾಜಕೀಯ ಅನಿಶ್ಚತತೆಯೇ ಕಾರಣ. ಆರ್ಥಿಕತೆ ಸೋವಿಯೆತ್ ಒಕ್ಕೂಟದಿಂದ ಪ್ರತ್ಯೇಕಗೊಂಡ ನಂತರ ಪೂರ್ಣ ಕುಸಿದು ಬಿದ್ದಿರುವುದೂ ಕಾರಣ.

ಜಾರ್ಜಿಯಾದ ಕಮ್ಯುನಿಸ್ಟ್ ಪಕ್ಷ ಐದು ಸಾವಿರ ಸದಸ್ಯರನ್ನು ನೊಂದಾಯಿಸಿ ದೇಶದ ಉದ್ದಗಲಕ್ಕೂ ಪಕ್ಷ ಪುನಃ ಸಂಘಟಿತವಾಗಲು ಪ್ರಯತ್ನಿಸುತ್ತಿದೆ. ದೇಶದ 125 ಪಾರ್ಲಿಮೆಂಟ್ ಸದಸ್ಯರಲ್ಲಿ 11 ಜನ ಪಕ್ಷಕ್ಕೆ ಸೇರಿರಬಹುದು. 9 ಇತರ ಸದಸ್ಯರೂ ಪಕ್ಷವನ್ನು ಬೆಂಬಲಿಸುತ್ತಾರೆ. ಅಧ್ಯಕ್ಷ ಶೆವರ್ ನಾದ್‌ಝೆ ಕಮ್ಯುನಿಸ್ಟ್ ಪಕ್ಷವನ್ನು ದಮನ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅಕ್ಟೋಬರ್‌ನಲ್ಲಿ ಚುನಾವಣೆ ನಡೆಯಲಿದ್ದು ಮತ್ತು ನ್ಯಾಯಯುತ ಚುನಾವಣೆ ನಡೆದರೆ ಕಮ್ಯುನಿಸ್ಟರಿಗೆ ಗಮನಾರ್ಹ ಬೆಂಬಲ ಸಿಗುವ ನಿರೀಕ್ಷೆ ಇದೆ. ಆದರೆ ಮುಕ್ತ ಚುನಾವಣೆಗಳು ನಡೆದಾವೆ ಎಂಬುದೇ ಪ್ರಶ್ನೆ.

ವಿಯೆಟ್ನಾಂ ಯುದ್ಧದಲ್ಲಿ ಭಾಗವಹಿಸಿದ್ದು ತಪ್ಪು ಎಂದ ಆಸ್ಟ್ರೇಲಿಯನ್ನರು

ವಿಯೆಟ್ನಾಂ ಯುದ್ಧಕ್ಕೆ ಆಸ್ಟ್ರೇಲಿಯಾ ತನ್ನ ಪಡೆಗಳನ್ನು ಕಳಿಸಿದ್ದು ತಪ್ಪು ಎಂದು ಶೇಕಡಾ 56ರಷ್ಟು ಆಸ್ಟ್ರೇಲಿಯನ್ನರು ಅಭಿಪ್ರಾಯಪಟ್ಟಿದಾರೆ. ಕೇವಲ ಶೇಕಡಾ 25 ರಷ್ಟು ಆಸ್ಟ್ರೇಲಿಯನ್ನರು ಮಾತ್ರ ಬೆಂಬಲ ನೀಡಿದ್ದಾರೆ. ಇದು ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆ. ಆಸ್ಟ್ರೇಲಿಯಾದ ಮಾಜಿ ಪ್ರಧಾನ ಗೋರ್ಟಿನ್ ತಮ್ಮ ಆತ್ಮಕಥೆಯಲ್ಲಿ ಆಸ್ಟ್ರೇಲಿಯಾ ವಿಯೆಟ್ನಾಂ ಯುದ್ಧಕ್ಕೆ 50 ಸಾವಿರ ಸೈನಿಕರನ್ನು ಕಳಿಸಿ ಯುದ್ಧ ಇನ್ನೂ ದೀರ್ಘಾವಧಿ ನಡೆಯಲು ಅನುವು ಮಾಡಿಕೊಟ್ಟಿದ್ದು ತಪ್ಪು ಎಂದು ಹೇಳಿದ್ದರು.

ಕರ್ನಾಟಕದಲ್ಲಿ ಸಿಐಟಿಯು ಹೊರಗಿನ, ಒಳಗಿನ ಹೋರಾಟದಿಂದ ಬೆಳವಣಿಗೆ

ಪುಟ 5 ರಿಂದ

ತಮ್ಮ ಹೆಗಲ ಮೇಲೆಯೇ ಅವರನ್ನು ಹೊತ್ತು ತಂದಂತಾಯಿತು. ಇದರಿಂದ ನಮ್ಮ ಸಂಘಟನೆ ದುರ್ಬಲವಾಯಿತು. ಬೇರೆಡೆಯೂ ಇದರ ಪರಿಣಾಮ ಉಂಟಾಯಿತು.

ಹರಿಹರದಲ್ಲಿ ನಡೆದ ಹೋರಾಟಗಳ ಯಶಸ್ಸು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ, ತುಟ್ಟಿಭತ್ಯೆ, ಬೋನಸ್ ಇತ್ಯಾದಿ ಬೇಡಿಕೆಗಳ ವಿವಿಧ ಅಂಶಗಳ ಬಗ್ಗೆ ಯೂನಿಯನ್ ಸದಸ್ಯರಿಗೆ ಶಿಕ್ಷಣ ಇವೆಲ್ಲದರ ಹಿರಿಮೆಯನ್ನು ಸ್ಥಾಪಿಸಿಕೊಟ್ಟಿತು. ಕಾರ್ಮಿಕರ ನಡುವಿದ್ದ ಕಾಂಗ್ರೆಸ್(ಐ) ಪರ ನಿಲುವನ್ನು ಸಾಕಷ್ಟು ಪ್ರಮಾಣದಲ್ಲಿ ಬದಲಿಸಲು ನಮಗೆ ಸಾಧ್ಯವಾಯಿತು.

ದಾಂಡೇಲಿ, ಧಾರವಾಡ, ಹಂಗಾರ ಕಟ್ಟೆ ಮತ್ತು ನೆಟ್ಟಣ ಪ್ಲೈವುಡ್ ಕಾರ್ಮಿಕರನ್ನು ಒಂದುಗೂಡಿಸಿ ತುಟ್ಟಿಭತ್ಯೆಗಾಗಿ ಹೋರಾಡಿದ್ದರಿಂದ ಅವರ ಪ್ರಜ್ಞೆ ಹಾಗೂ ಸಂಘಟನೆಯನ್ನು ಎತ್ತರಿಸುವುದು ಸಾಧ್ಯವಾಯಿತು. ಆದರೆ ಈ ಉದ್ದಿಮೆ ಸರಿಯಾಗಿ ಬೆಳೆಯದ್ದರಿಂದ ಈ ಕಾರ್ಮಿಕ ಸಂಘಟನೆಗೆ ಆಘಾತವುಂಟಾಯಿತು.

1985ರ ನಂತರ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನಲ್ಲಿ ಸಿಐಟಿಯು ಸಂಘದ ಕಾರ್ಯನಿರ್ವಹಣೆಯಲ್ಲಿ ತೀವ್ರ ತೊಂದರೆಯಿತ್ತು. ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನಲ್ಲಿ 13 ಸಂಘಗಳಿದ್ದವು. ಎಲ್ಲವೂ ಮ್ಯಾನೇಜುಮೆಂಟಿನ ಜೇಬಿನಲ್ಲಿದ್ದವು. ಒಂದು ಹೋರಾಟ ಆರಂಭವಾಯಿತು. ಪೋಲೀಸರ ಬಳಕೆ ಧಾರಾಳವಾಗಿ ನಡೆಯಿತು. ಇದಕ್ಕೆ ದಾಂಡೇಲಿ ಬಂದ್ ಮೂಲಕ ಪ್ರತಿಭಟನೆ ಬಂತು. ಹತ್ತು ದಿನಗಳ ಉಪವಾಸ ಮುಷ್ಕರದ ನಂತರ ತಮ್ಮ ಪ್ರತಿನಿಧಿಗಳನ್ನು ಆರಿಸುವ ಕಾರ್ಮಿಕರ ಹಕ್ಕನ್ನು ಮ್ಯಾನೇಜುಮೆಂಟು ಮತ್ತು ಎಲ್ಲಾ ಸಂಘಗಳೂ ಒಪ್ಪಿಕೊಳ್ಳಬೇಕಾಯಿತು. ಯಾವುದೇ ಬಾವುಟ ಅಥವಾ ಲೇಬಲ್‌ನಡಿ ಈ ಹೋರಾಟ ನಡೆದಿರಲಿಲ್ಲವಾದರೂ ಉಪವಾಸ ಕುಳಿತವರು ಸಿಐಟಿಯು ಮುಖಂಡರಾದ್ದರಿಂದ ಅದರ ಫಲ ದೊರಕದೇ ಹೋಗಲಿಲ್ಲ. 1991ರಲ್ಲಿ ನಡೆದ ಚುನಾವಣೆಗಳಲ್ಲಿ ಸಿಐಟಿಯುಗೆ ಪ್ರಥಮ ಸ್ಥಾನ ದೊರೆಕಿತು. ಆದರೆ ಆಗ ಪಡೆದ ಆರಂಭದ ಯಶಸ್ಸನ್ನು ಉಳಿಸಿಕೊಳ್ಳಲಾಗಲಿಲ್ಲ. ಈ ಬಗ್ಗೆ ಸತತ ಗಮನ ನೀಡದಿದ್ದುದೇ ಕಾರಣ. 1994ರ ಚುನಾವಣೆಗಳಲ್ಲಿ ಸಿಐಟಿಯುಗೆ ಮೂರರಲ್ಲಿ ಒಂದು ಸ್ಥಾನ ಮಾತ್ರ ದೊರೆಯಿತು.

ಒಂದು ಬಲಿಷ್ಠ ಕೇಂದ್ರವಾಗಿ ಸಿಐಟಿಯು

ವಿವಿಧ ಸಂಘಗಳಲ್ಲಿ ಶಾಮೀಲುವಾದಿ ಮತ್ತು ಹೋರಾಟ ಪರ ಮಾರ್ಗಗಳ ನಡುವೆ ಸಂಘರ್ಷ. ದೊಡನೆಯೇ ಅಖಿಲ ಭಾರತ ಮಟ್ಟದಲ್ಲಿ ಮತ್ತೊಮ್ಮೆ ಪ್ರಾರಂಭವಾದ ಐಕ್ಯತೆಯ ಪ್ರಯತ್ನಗಳ ಪ್ರಭಾವ ರಾಜ್ಯದಲ್ಲೂ ಕಂಡು ಬಂತು. ತುರ್ತು ಪರಿಸ್ಥಿತಿಯ ನಂತರ ಕಾರ್ಮಿಕ ವರ್ಗಗಳಲ್ಲಿ ಒಂದು ಹೊಸ ಉತ್ಸಾಹ ಕಂಡು ಬಂದಿದ್ದರೂ ಸಿಐಟಿಯು ಒಂದು ಶಕ್ತಿಯಾಗಿ -ವಿಶೇಷವಾಗಿ ಸಾರ್ವಜನಿಕ ವಲಯದಲ್ಲಿ -ಗುರುತಿಸಲ್ಪಡಬೇಕಾದರೆ ಇನ್ನೂ ಸುಮಾರು ಒಂದೂವರೆ ದಶಕ ಬೇಕಾಯಿತು. ಸಾರ್ವಜನಿಕ ವಲಯದ ಕಾರ್ಮಿಕರು ಸಿಐಟಿಯು ಮತ್ತು ಅದರ ಮುತುವರ್ಜಿಯಿಂದ ಸಿ.ಪಿ.ಎಸ್.ಟಿ.ಯು. ಸತತವಾಗಿ ತಮ್ಮ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿದೆ ಎಂದು ತಮ್ಮ ಅನುಭವದಿಂದಲೇ ಕಂಡುಕೊಂಡಿದ್ದಾರೆ. ಈ ಅವಧಿಯಲ್ಲಿ ಅವರು ಸುಮಾರಾಗಿ ಬೇರೆಲ್ಲಾ ಶಕ್ತಿಗಳನ್ನು ಪರೀಕ್ಷಿಸಿ ಭ್ರಮನಿರಸನಗೊಂಡಿದ್ದಾರೆ. 1991ರಲ್ಲಿ ಬಿ.ಇ.ಎಲ್.ನ ಮತಗಣನೆಯಲ್ಲಿ ಮಹತ್ವದ ಮುನ್ನಡೆ ಪಡೆಯಲು ಸಾಧ್ಯವಾಯಿತು. 1980 ರಲ್ಲಿ ಕೊನೆಗೊಂಡು ಮತ್ತೆ ಮತ್ತೆ ತನ್ನ ಮುಂದಾಳತ್ವ ಸ್ಥಾಪಿಸಲು ಪ್ರಯತ್ನಿಸುತ್ತಿದ್ದ ಸಂಘ ಕೊನೆಗೂ 38ಶೇ. ಮತ ಪಡೆದು ಮಾನ್ಯತೆ ಪಡೆಯಿತು. ಅದರ ಬೆನ್ನಹಿಂದೆಯೇ ಸಿಐಟಿಯು ಮುಖಂಡರು ಬಿ.ಹೆಚ್.ಇ.ಎಲ್.ನ ಸಿ.ಇ.ಡಿ. ವಿಭಾಗದಲ್ಲೂ ಚುನಾಯಿತರಾದರು.

ಈ ಅವಧಿಯಲ್ಲಿ ಸಿಐಟಿಯುವನ್ನು ಒಂದು ದೃಢ ಆಧಾರದಲ್ಲಿ ನೆಲೆಗೊಳಿಸುವ ಪ್ರಯತ್ನ ನಡೆದು ದೊಡ್ಡ ಉದ್ದಿಮೆಗಳಲ್ಲಿ ತಾನೊಂದು ಶಕ್ತಿಯೆಂದು

> **ಆಂತರಿಕವಾಗಿ ಇನ್ನೊಂದು ಹೋರಾಟದ ಅಲೆ ಅಗತ್ಯವೆನಿಸುತ್ತದೆ. ಸಂಘಟನೆಯ ಹೊರಗೆ ಹೋರಾಟ ಒಳಗಿನ ಹೋರಾಟ ಒಟ್ಟಾರೆಯಾಗಿ ಹೋರಾಟ ಬೆಳೆಸುವಲ್ಲಿ ಪರಸ್ಪರ ಪೂರಕ ಎಂಬುದು ಸಿಐಟಿಯುವನ್ನು ಕಟ್ಟುವಲ್ಲಿ ಪಡೆದಿರುವ ಅನುಭವ.**

ಕಾರ್ಮಿಕರಿಗೆ ತೋರಿಸಿಕೊಟ್ಟಿದೆ. ನಾವು ಹಿಂದೆ ವಿಶ್ಲೇಷಿಸಿದಂತೆ ಇಬ್ಭಾಗಕ್ಕಿಂತ ಮೊದಲು 1960ರ 1970ರ ದಶಕದಾದ್ಯಂತ ಇಂಜಿನಿಯರಿಂಗ್ ಹಾಗೂ ಹೊಸ ಉದ್ದಿಮೆಗಳಲ್ಲಿ ಎ.ಐ.ಟಿ.ಯು.ಸಿ. ಪ್ರಾಬಲ್ಯವಿದ್ದದ್ದು 1980ರ ದಶಕದಲ್ಲಿ ಅದಲು ಬದಲಾಯಿತು. ಈ ಅವಧಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಬೆಳೆಯುತ್ತಿದ್ದ ಐಕ್ಯತೆ ಹಾಗೂ ಹೋರಾಟವನ್ನು ರಾಜ್ಯದಲ್ಲೂ ಅನುಷ್ಠಾನಕ್ಕೆ ತರಲಾಗಿದ್ದರೂ ಬೆಂಗಳೂರಿನ ಸಾರ್ವಜನಿಕ ವಲಯದಲ್ಲಿ ಮಾತ್ರ ಇದುವರೆಗೆ ಸಿಐಟಿಯುವನ್ನು ಹೊರಗಿಡುವಲ್ಲಿ ಅವರು ಯಶಸ್ವಿಯಾಗಿದ್ದರು. ಆದರೆ ಈಗ ಆ ದಾರಿಯೂ ಸೋತಿವೆ. ಸಿ.ಐ.ಟಿ.ಯು. ಜಂಟಿ ಕ್ರಿಯಾ ರಂಗ (ಜೆ.ಎ.ಎಫ್.) ಕ್ಕೆ ಪ್ರವೇಶ ಪಡೆದಿದೆ.

ಅಸಂಘಟಿತರನ್ನು ಸಂಘಟಿಸುವ ನಿಲುವು

ಕರ್ನಾಟಕದ ಸಿಐಟಿಯುನ ಸದಸ್ಯತ್ವದ ಪ್ರಬಲ ಶಕ್ತಿ ಅಸಂಘಟಿತರ ವಲಯದಿಂದ (ದ.ಕ. ಜಿಲ್ಲೆಯಿಂದ) ಬಂದಿದೆ. 1980ರ ದಶಕದಲ್ಲಿ ತುಟ್ಟಿಭತ್ಯೆ ಪಡೆಯುವ ಆಂದೋಲನ ಹೆಂಚು ಮತ್ತು ಬೀಡಿ ಕಾರ್ಮಿಕರ ನಡುವೆ ಭರದಿಂದ ನಡೆಯಿತು. ಈ ಕಾರ್ಮಿಕ ವಿಭಾಗಗಳು ಅದನ್ನು ಪಡೆಯಲು ಸಾಧ್ಯವಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ಹಲವು ಹಂತಗಳಲ್ಲಿ ಹೋರಾಟ ನಡೆಸಿ ಮಾಲಕರು ಮತ್ತು ಸರಕಾರ ತಮ್ಮ ಕೂಲಿಯನ್ನು ಇಳಿಸದಂತೆ ಬೆಲೆಯೇರಿಕೆಯೊಂದಿಗೆ ಅದು ಏರುವಂತೆ ಮಾಡಿಕೊಳ್ಳುವುದು ಸಾಧ್ಯವಾಯಿತು. 'ಬದಲಾಗುವ ತುಟ್ಟಿಭತ್ಯೆ' (V.D.A.) ಎಂಬುದು ಬರುವ ಮೊದಲೇ ಇದನ್ನು ಪಡೆಯುವುದು ಸಾಧ್ಯವಾಯಿತು. ಬೆಂಗಳೂರಿನ ಹೋಟೆಲ್ ಕಾರ್ಮಿಕರೂ ಇದನ್ನೆಲ್ಲಾ ಪಡೆಯಲು ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಆದರೆ ಪ್ಲಾಂಟೇಷನ್ ಕಾರ್ಮಿಕರು ಇದನ್ನು ಮುಂದುವರೆಸಲಾಗಲಿಲ್ಲ -ಅಲ್ಲಿ ಮುಖ್ಯವಾಗಿ ಚಿಕ್ಕಮಗಳೂರಿನಲ್ಲಿ ಎ.ಐ.ಟಿ.ಯು.ಸಿ. ಮತ್ತೆ ಒಂದು ಶಕ್ತಿಯಾಗಿ ಬಂತು.

ಈ ಸಂದರ್ಭದಲ್ಲಿ ಸಿಐಟಿಯು ಅಸಂಘಟಿತರನ್ನು ಸಂಘಟಿಸುವ ಮಾರ್ಗವನ್ನು ಪ್ರತಿಪಾದಿಸಿದೆ. ಹಲವಾರು ಹೋರಾಟಗಳನ್ನು ಈ ದಿಕ್ಕಿನಲ್ಲಿ ನಡೆಸುವುದು ಸಾಧ್ಯವಾಗಿದೆ. 1993ರಲ್ಲಿ ಇದು ಅತ್ಯುನ್ನತ ಹಂತ ತಲುಪಿತು. ಅಖಿಲ ಭಾರತ ಮಟ್ಟದಲ್ಲೂ 1989-90ರ ದಿಲ್ಲಿ ಹೋರಾಟದ ನಂತರ ಅಸಂಘಟಿತ ವಲಯದ ಕಾರ್ಮಿಕರ ಹೋರಾಟಕ್ಕೆ ಹೊಸ ಉತ್ಸಾಹ ದೊರೆಯಿತು. ದಿಲ್ಲಿಯ 7 ಲಕ್ಷ ಅಸಂಘಟಿತ ಕಾರ್ಮಿಕರು 1050ರೂ. ಕನಿಷ್ಠ ಕೂಲಿ ನಿಗದಿ ಪಡಿಸಬೇಕೆಂದು ಒತ್ತಾಯಿಸಿ ಒಂದು ವಾರ ಮುಷ್ಕರ ನಡೆಸಿ ತಕ್ಷಣ 800 ರೂ.ಗೆ ಅದು ನಿಗದಿಯಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಈಗ ದೆಹಲಿಯ ಕಾರ್ಮಿಕರಿಗೆ 1500 ರೂ. ಕನಿಷ್ಠ ವೇತನ ಆಗುತ್ತಿದೆ. ಕರ್ನಾಟಕ ಅಸಂಘಟಿತ ಕಾರ್ಮಿಕರ ಹೋರಾಟವನ್ನು ಆರಂಭಿಸಿದ್ದರೂ ದಿಲ್ಲಿ ಮುಷ್ಕರದಿಂದ ಅದು ಹಿಂದೆ ಬಿತ್ತು. 14 ಲಕ್ಷಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರಿರುವ ಬೆಂಗಳೂರಿನಲ್ಲಿ ದಿಲ್ಲಿ ಮಾದರಿಯ ಮುಷ್ಕರ ನಡೆಸುವ ಪ್ರಯತ್ನ ಇನ್ನೂ ಕೈಗೂಡಿಲ್ಲ. ಹೊರಗೆ ಹೋರಾಟಗಳನ್ನು ಬೆಳೆಸಲು ಆಂತರಿಕವಾಗಿ ಇನ್ನೊಂದು ಹೋರಾಟದ ಅಲೆ ಅಗತ್ಯವೆನಿಸುತ್ತದೆ. ಸಂಘಟನೆಯ ಹೊರಗೆ ಹೋರಾಟ ಒಳಗಿನ ಹೋರಾಟ ಒಟ್ಟಾರೆಯಾಗಿ ಹೋರಾಟ ಬೆಳೆಸುವಲ್ಲಿ ಪರಸ್ಪರ ಪೂರಕ ಎಂಬುದು ಸಿಐಟಿಯುವನ್ನು ಕಟ್ಟುವಲ್ಲಿ ಪಡೆದಿರುವ ಅನುಭವ. ದುಡಿಯುವ ಜನರ ಹಿತಾಸಕ್ತಿಗಳಿಗಾಗಿ ದುಡಿಯುವ ಜನರು ಹೋರಾಟ ನಡೆಸಿದಾಗ ಮಾತ್ರವೇ ಅದು ಯಶಸ್ವಿಯಾಗಬಲ್ಲದು. ಕಾರ್ಮಿಕ ಆಂದೋಲನವನ್ನು ತಮ್ಮ ಹಿತಾಸಕ್ತಿಗಳಿಗೆ ಸೀಮಿತಗೊಳಿಸುವ ಆಳುವ ವರ್ಗಗಳ ಪ್ರಯತ್ನವನ್ನು ಮೀರಿ ನಿಲ್ಲಬೇಕಾದರೆ ಹೋರಾಟಗಳನ್ನು ದುಡಿಯುವ ಜನಗಳ ವಿಶಾಲ ವಿಭಾಗಗಳ ಹಿತಾಸಕ್ತಿಗಳೊಂದಿಗೆ ಬೆಸೆದು ಅವರನ್ನು ಅಣಿನೆರೆಸುವುದು ಅತ್ಯಗತ್ಯ. ಇದಿಲ್ಲದೆ ಕಾರ್ಮಿಕ ಮುಖಂಡರ ಯಾವ ಪ್ರಯತ್ನವೂ ಸಫಲವಾಗದು. ಇದು ನಾವು ಪಶ್ಚಿಮ ಬಂಗಾಳದ W.B.P.T.U.C. 1990ರ ದಶಕದಲ್ಲಿ ಹಾಗೂ 1970ರ ದಶಕದ ಆದಿ ಭಾಗದಲ್ಲಿ ಸಿಐಟಿಯು ಸ್ಥಾಪನೆಯಿಂದಾಗಿ ಸಾಧಿಸಿದ ಮುನ್ನಡೆಯಿಂದ ನಾವು ಕಲಿಯಬೇಕಾದ ಪಾಠ ಇದು. ತುರ್ತುಪರಿಸ್ಥಿತಿಯ ನಂತರ ಅವಧಿಯಲ್ಲಿ ಹಲವಾರು ಹೋರಾಟಗಳ ಮೂಲಕ ಸೀಮಿತ ರೀತಿಯಲ್ಲಾದರೂ ಎ.ಐ.ಟಿ.ಯು.ಸಿ.ಯನ್ನು ಕೆಳಗಿಳಿಸುವಲ್ಲಿ ನಮಗೆ ಸಾಧ್ಯವಾದ ಅನುಭವದಿಂದ ಕಲಿಯಬೇಕಾದ ಪಾಠ. ನಾವು ಕಲಿಯಬೇಕಾದ ಮತ್ತೊಂದು ಪಾಠವೆಂದರೆ ಇಡೀ ದುಡಿಯುವ ಜನಸಮೂಹಗಳನ್ನು ಸರಕಾರದ ನೀತಿಗಳ ವಿರುದ್ಧ ಅಣಿನೆರೆಸಬೇಕೆಂದಿರುವ ನಾವು ದೃಢ ಮನಸ್ಸಿನಿಂದ ಹೋರಾಟ ನಡೆಸಿದರೆ ಮಾತ್ರವೇ ನಮ್ಮ ಆಂದೋಲನ ಆಳುವ ವರ್ಗದ ಅಗತ್ಯಗಳನ್ನು ಮೀರಿ ನಿಲ್ಲಲು ಸಾಧ್ಯ. ಇಲ್ಲವಾದರೆ ನಮ್ಮ ಆಂದೋಲನ ಆಳುವ ವರ್ಗಗಳ ಪೋಷಣೆಯಲ್ಲೇ ಉಳಿಯುವ ಅಪಾಯವಿದೆ. ಈ ರೀತಿ ನಮ್ಮ ಆಂದೋಲನ ಆಳುವ ವರ್ಗದ ಹಿತಾಸಕ್ತಿಗಳನ್ನು ಮೀರಿ ನಿಲ್ಲಬೇಕಾದರೆ, ನಮ್ಮ ಗುರಿ ಮರೆಯದಿರಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ಸಿಐಟಿಯು ಬದ್ಧವಾಗಿರುವ ನೀತಿಗಳು, ಅವುಗಳ ಅನುಷ್ಠಾನದ ಅಥವಾ ಅನುಷ್ಠಾನ ಮಾಡದೇ ಇರುವ ಅನುಭವಗಳ ವಿಶ್ಲೇಷಣೆಯನ್ನು ಈ ಲೇಖನ ಮಾಲೆಯ ಮುಂದಿನ ಲೇಖನದಲ್ಲಿ ನೋಡೋಣ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಕೇಂದ್ರ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ ರಚನೆಗೆ ಪ್ರಚಾರ

ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ನಿರ್ಧಾರ

ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಗಳ ಒಂದು ಮಹಾ ಒಕ್ಕೂಟ ರಚಿಸುವ ಪ್ರಸ್ತಾಪವನ್ನು ಜನಪ್ರಿಯಗೊಳಿಸಲು ಸಿಐಟಿಯು ಪ್ರಯತ್ನಿಸಲಿದೆ. ಸಿಐಟಿಯುನ ಬೆಳ್ಳಿ ಹಬ್ಬದ ಆಚರಣೆಗಳಲ್ಲಿ ಇದು ಆದ್ಯತೆ ಪಡೆಯಲಿದೆ.

ಸಿಐಟಿಯು ಈ ಪ್ರಶ್ನೆಯ ಮೇಲೆ ಕಳೆದ ಆರು ವರ್ಷಗಳಿಂದ ಪದೇ ಪದೇ ಹೇಳುತ್ತಿದ್ದರೂ ಇತ್ತೀಚೆಗಷ್ಟೇ ಈ ಬಗ್ಗೆ ಇತರ ಸಂಘಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯುತ್ತಿದೆ ಎಂದು ಹೌರಾದಲ್ಲಿ ನಡೆದ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ ಎಂ.ಕೆ. ಫಂದೆ ಹೇಳಿದ್ದಾರೆ.

ಜೂನ್ ೨ರಂದು ಜನರಲ್ ಕೌನ್ಸಿಲ್‌ನ ಅಂತಿಮ ಅಧಿವೇಶನದಲ್ಲಿ ಮಾತನಾಡುತ್ತಾ ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್‌ರವರು ಇಂತಹ ಒಂದು ಮಹಾ ಒಕ್ಕೂಟದ ರಚನೆಯ ನೀತಿ ನಿಯಮಗಳ ಬಗ್ಗೆ ಸಿಐಟಿಯು ಮುಖಂಡರು ಚೆನ್ನಾಗಿ ತಿಳಿದುಕೊಂಡಿರಬೇಕು ಎಂದರು. ಮುಖಂಡರು ಇಂತಹ ಸಂಘಟನೆಗಳ ರಚನೆಯ ಹಿಂದಿರುವ ವಿಚಾರವನ್ನು ವಿಸ್ತಾರವಾಗಿ ತಿಳಿಸದಿದ್ದರೆ ಸಾಮಾನ್ಯ ಕಾರ್ಮಿಕರು ಈ ಪ್ರಸ್ತಾವಕ್ಕೆ ಅನುಕೂಲಕರ ಪ್ರತಿಕ್ರಿಯೆ ತೋರಲಿಕ್ಕಿಲ್ಲ ಎಂದು ಅವರು ಹೇಳಿದರು.

ಜೂನ್ 2ರಂದು ಕೊನೆಗೊಂಡ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಕೇಂದ್ರದ ಹೊಸ ಆರ್ಥಿಕ ನೀತಿಗಳ ವಿರುದ್ಧ ಆಂದೋಲನವನ್ನು ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ಹೋರಾಟದಲ್ಲಿ ವಿಭಿನ್ನ ಕಾರ್ಮಿಕ ಸಂಘಗಳು ಹಾಗೂ ಎಡಪಂಥೀಯ ಸಾಮೂಹಿಕ ಸಂಘಟನೆಗಳನ್ನು ತೊಡಗಿಸಿಕೊಳ್ಳಲಾಗುವುದು.

ಚಾರಿತ್ರಿಕ ಕರ್ತವ್ಯ

ಮೇ 31ರಂದು ಹೊಸ ಆರ್ಥಿಕ ನೀತಿಯ ಬಗ್ಗೆ ಹಾಗೂ ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸುವ ಹೋರಾಟದಲ್ಲಿ ಇಡೀ ಪ್ರಜಾಪ್ರಭುತ್ವವಾದಿ ಜನಸಮೂಹಗಳನ್ನು ಒಂದುಗೂಡಿಸುವ ಚಾರಿತ್ರಿಕ ಕರ್ತವ್ಯ ಕಾರ್ಮಿಕ ವರ್ಗದ್ದು ಎಂದು ಒತ್ತಿ ಹೇಳುವುದರೊಂದಿಗೆ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಆರಂಭವಾಗಿತ್ತು. ಈ ಸಮ್ಮೇಳನದಲ್ಲಿ ಜನರಲ್ ಕೌನ್ಸಿಲ್‌ನ 360 ಸದಸ್ಯರು ಪಾಲ್ಗೊಂಡರು.

ಸಭೆಯಲ್ಲಿ ಅಧ್ಯಕ್ಷರ ಭಾಷಣ ಹಾಗೂ ಪ್ರಧಾನ ಕಾರ್ಯದರ್ಶಿಗಳ ವರದಿ ಎರಡೂ ರಾಷ್ಟ್ರಮಟ್ಟದಲ್ಲೂ, ವಿವಿಧ ಉದ್ದಿಮೆ ವಲಯಗಳ ಮಟ್ಟದಲ್ಲೂ ಕಾರ್ಮಿಕ ವರ್ಗದ ಹಾಗೂ ಇತರ ಪ್ರಜಾಪ್ರಭುತ್ವವಾದೀ ಜನಸಮೂಹಗಳು ವಿಪತ್ಕಾರೀ ಆರ್ಥಿಕ ನೀತಿಗಳ ವಿರುದ್ಧ ಹೆಚ್ಚೆಚ್ಚು ಹೋರಾಟಕ್ಕೆ ಧುಮುಕುತ್ತಿದ್ದಾರೆ ಎಂದು ಗಮನಿಸುತ್ತಾ, ಇತರ ಹೋರಾಟಗಳಿಂದ ಸಾಧಿಸಿದ ಐಕ್ಯತೆಯನ್ನು ಇನ್ನಷ್ಟು ಕ್ರೋಢೀಕರಿಸಿ ಹೋರಾಟವನ್ನು ಮೇಲಿನ ಹಂತಕ್ಕೆ ಒಯ್ದು ಸರಕಾರದ ನೀತಿಗಳನ್ನು ಸೋಲಿಸಬೇಕು ಎಂದು ಕರೆ ನೀಡಿದವು.

ಇಡೀ ಕಾರ್ಮಿಕ ಆಂದೋಲನ ಸಾಧಿಸಿದ ಐಕ್ಯತೆಯ ವೇದಿಕೆಯನ್ನು ಇನ್ನಷ್ಟು ವ್ಯಾಪಕಗೊಳಿಸುವುದು, ಕ್ರೋಢೀಕರಿಸುವುದು ಈಗಿನ ಅಗತ್ಯ. 1979ರಲ್ಲಿ ಸಿಐಟಿಯು ಮಹಾ ಒಕ್ಕೂಟದ ರಚನೆಯ ಬಗ್ಗೆ ನೀಡಿದ ಘೋಷಣೆ ಈಗ ಹೆಚ್ಚೆಚ್ಚು ಜನಪ್ರಿಯಗೊಳ್ಳುತ್ತಿದೆಯಾದ್ದರಿಂದ ಸಿಐಟಿಯು ಈ ಘೋಷಣೆಯನ್ನು ವಾಸ್ತವಗೊಳಿಸಲು ತನ್ನೆಲ್ಲಾ ಶಕ್ತಿ ಹಾಗೂ ಪ್ರಯತ್ನವನ್ನು ಹಾಕಬೇಕು ಎಂದು ಜನರಲ್ ಕೌನ್ಸಿಲ್ ಸಭೆ ಅಭಿಪ್ರಾಯಪಟ್ಟಿತು. ಸಿಐಟಿಯುನ ಎಲ್ಲಾ ಘಟಕಗಳು "ಐಕ್ಯತೆ ಮತ್ತು ಹೋರಾಟ"ದ ಸಂದೇಶವನ್ನು ಬುಡಮಟ್ಟದವರೆಗೆ ಒಯ್ಯಲು ಸಂಘಟನಾತ್ಮಕವಾಗಿ ತಮ್ಮನ್ನು ಸಿದ್ಧಗೊಳಿಸಿಕೊಳ್ಳಬೇಕು, ಈ ಮೂಲಕ ದುಡಿಯುವ ಜನಸಮೂಹಗಳ ಹಿತಾಸಕ್ತಿಗಳನ್ನು ರಕ್ಷಿಸುವ ಆಂದೋಲನವನ್ನು ಹೊಸ ಎತ್ತರಕ್ಕೆ ಒಯ್ದು ಆಳುವ ವರ್ಗಗಳ ಕುತಂತ್ರಗಳನ್ನು ವಿಫಲಗೊಳಿಸಬೇಕು ಎಂದು ಜನರಲ್ ಕೌನ್ಸಿಲ್ ಕರೆ ನೀಡಿತು.

ಸಿಐಟಿಯುನ ಸಂಘಟನಾ ಆಧಾರವನ್ನು ವ್ಯಾಪಕಗೊಳಿಸುವುದನ್ನು ಆದ್ಯ ಕರ್ತವ್ಯವೆಂದು ತಗೊಳ್ಳಬೇಕೆಂದೂ ಜನರಲ್ ಕೌನ್ಸಿಲ್ ಅಭಿಪ್ರಾಯಪಟ್ಟಿತು. ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸುವ ಕೆಲಸವನ್ನೂ ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಗೊಂಡಿತು.

ಎರಡು ಪ್ರಮುಖ ಪ್ರಶ್ನೆಗಳು

ಈ ಅಧಿವೇಶನದಲ್ಲಿ ಖಾಸಗೀಕರಣ ಹಾಗೂ ಕೈಗಾರಿಕೆಗಳಲ್ಲಿ ರೋಗಗ್ರಸ್ತತೆಯ ಬಗ್ಗೆ ಎರಡು ಪ್ರಬಂಧಗಳನ್ನು ಮಂಡಿಸಲಾಯಿತು. ಸಾರ್ವಜನಿಕ ವಲಯದ ಘಟಕಗಳ ಸಾರಾಸಗಟು ಖಾಸಗೀಕರಣ ಹಾಗೂ ರೋಗಗ್ರಸ್ತ ಘಟಕಗಳ ಮುಚ್ಚುವಿಕೆಯ ಮೇಲೆ ನಿಂತಿರುವ ಹೊಸ ಆರ್ಥಿಕ ನೀತಿಯ ನಿಜಸ್ವರೂಪವನ್ನು ವಿವರಿಸಿದ ಈ ಪ್ರಬಂಧಗಳು ಈ ಮೂಲಕ ಹೊಸ ಆರ್ಥಿಕ ನೀತಿ ದೇಶದ ಕೈಗಾರಿಕಾ ಆಧಾರವನ್ನು ನಾಶ ಮಾಡಿ ಭಾರತವನ್ನು ವಿದೇಶೀ ಬಹುರಾಷ್ಟ್ರೀಯ ಬಂಡವಾಳಕ್ಕೆ ತೆರೆಯುತ್ತದೆ, ಜತೆಗೆ ಲಕ್ಷಾಂತರ ಕಾರ್ಮಿಕರನ್ನು ಬೀದಿಗೆಸೆಯುತ್ತದೆ ಎಂದು ಈ ಪ್ರಬಂಧಗಳು ವಿವರಿಸಿವೆ. ಈ ಎರಡು ಪ್ರಶ್ನೆಗಳ ಮೇಲೆ ಹೋರಾಟದಲ್ಲಿ ಕಾರ್ಮಿಕ ಆಂದೋಲನ ಎದುರಿಸುತ್ತಿರುವ ಸಮಸ್ಯೆಗಳನ್ನೂ ಈ ಪ್ರಬಂಧಗಳು ಮುಂದಿಟ್ಟವು. ಈ ಬಗ್ಗೆ ವ್ಯಾಪಕವಾದ ಚರ್ಚೆ ನಡೆಸಿ ಈ ಪ್ರಶ್ನೆಗಳ ಮೇಲೆ ಒಂದು ಸರ್ವಸಾಮಾನ್ಯ ತಿಳುವಳಿಕೆಗೆ ಬಂದು ರಾಷ್ಟ್ರಮಟ್ಟದಲ್ಲೂ, ವಿವಿಧ ಉದ್ದಿಮೆ ಮಟ್ಟದಲ್ಲೂ ಆಂದೋಲನವನ್ನು ಬೆಳೆಸಲು ಸಾಧ್ಯವಾಗಬೇಕು ಎಂದು ಈ ಪ್ರಬಂಧಗಳು ತಿಳಿಸಿವೆ. ಈ ಎರಡು ಪ್ರಶ್ನೆಗಳ ಮೇಲೆ ಹೋರಾಟ ಭಾರತ ಸರಕಾರದ ತಪ್ಪು ನೀತಿಗಳ ವಿರುದ್ಧ ನಮ್ಮ ಹೋರಾಟದ ಅವಿಭಾಜ್ಯ ಅಂಗ ಎಂದೂ ಈ ಪ್ರಬಂಧಗಳು ಒತ್ತಿ ಹೇಳಿದವು.

ನಾಲ್ಕು ರ್‍ಯಾಲಿಗಳು

ಈ ಸಿಐಟಿಯು ಸಮ್ಮೇಳನ ೫೦ವರ್ಷಗಳ ಹಿಂದೆ ಅಮೇರಿಕಾ ಹಿರೋಶಿಮಾ ಹಾಗೂ ನಾಗಾಸಾಕಿಗಳ ಮೇಲೆ ಬಾಂಬ್ ಹಾಕಿದುದರ ಸ್ಮರಣೆಯಲ್ಲಿ ನಾಲ್ಕು ಮಹಾನಗರಗಳಲ್ಲಿ ರ್‍ಯಾಲಿಗಳನ್ನು ಸಂಘಟಿಸಲು ನಿರ್ಧರಿಸಿತು. ಅಣ್ವಸ್ತ್ರಗಳಿಂದ ಸಾಮ್ರಾಜ್ಯಶಾಹಿ ದೇಶಗಳು ಈಗಲೂ ಒಡ್ಡಿರುವ ಅಪಾಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮಗಳ ಉದ್ದೇಶ. ಕಲ್ಕತ್ತೆಯಲ್ಲಿ ಆಗಸ್ಟ್ 6ರಂದು, ಮದ್ರಾಸಿನಲ್ಲಿ ಆಗಸ್ಟ್ 7ರಂದು, ಮುಂಬೈಯಲ್ಲಿ ಆಗಸ್ಟ್ ೮ರಂದು ಹಾಗೂ ದಿಲ್ಲಿಯಲ್ಲಿ ಆಗಸ್ಟ್ 9ರಂದು ಈ ಕಾರ್ಯಕ್ರಮ ನಡೆಯುವುದು.

ಸಮ್ಮೇಳನದ ಆರಂಭದ ದಿನದ ಕಲಾಪಗಳ ನಂತರ ಪತ್ರಿಕಾಗೋಷ್ಠಿಯೊಂದರಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ. ಫಂಧೆಯವರು ಪಶ್ಚಿಮ ಬಂಗಾಳ ಸರಕಾರದ ಕೈಗಾರಿಕಾ ನೀತಿಯ ಬಗ್ಗೆ ಸಿಐಟಿಯು ಮತ್ತು ಆ ಸರಕಾರದ ನಡುವೆ ತಿಕ್ಕಾಟವೇನೂ ಇಲ್ಲ ಎಂದರು. ಪಶ್ಚಿಮ ಬಂಗಾಳ ಎಡರಂಗ ಸರಕಾರ ದೇಶದ ಸಂವಿಧಾನದ ಹೊರಗೆ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ ಎಂದ ಅವರು ಬೇರೆ ರಾಜ್ಯಗಳು ಮತ್ತು ಪಶ್ಚಿಮ ಬಂಗಾಳದ ನಡುವಿನ ವ್ಯತ್ಯಾಸವೆಂದರೆ ಪಶ್ಚಿಮ ಬಂಗಾಳ ಸರಕಾರ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಕಟಿಬದ್ಧವಾಗಿದೆ, ಉಳಿದ ರಾಜ್ಯ ಸರಕಾರಗಳು ಆಗಿಲ್ಲ ಎಂದು ಹೇಳಿದರು. ಕಾರ್ಮಿಕರು ಬೇಡಿಕೆ ಮುಂದಿಡುವುದು ಮಾತ್ರವಲ್ಲ, ತಾವು ದುಡಿಯುತ್ತಿರುವ ಉದ್ದಿಮೆ ಕಾರ್ಯನಿರ್ವಹಿಸುತ್ತಿರುವಂತೆಯೂ ನೋಡಿಕೊಳ್ಳಬೇಕಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ವಿದೇಶಗಳಿಂದ ತಂತ್ರಜ್ಞಾನದ ಆಮದನ್ನು ಸಾರಸಗಟು ವಿರೋಧಿಸುವ ನೀತಿಯೇನೂ ಸಿಐಟಿಯುದ್ದಲ್ಲ, ಆದರೆ ದೇಶಕ್ಕೆ ಅವಶ್ಯವಿಲ್ಲದ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಬಾರದು ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಡಾ ಫಂದೆ ಸ್ಪಷ್ಟೀಕರಿಸಿದರು. ಸರಕಾರೀ ಒಡೆತನದ ಕಲ್ಕತ್ತೆಯ ಗ್ರೇಟ್ ಈಸ್ಟರ್ನ್ ಹೋಟೆಲನ್ನು ಒಂದು ವಿದೇಶೀ ಖಾಸಗಿ ಉದ್ದಿಮೆಗೆ ಒಪ್ಪಿಸುವ ಯಾವುದೇ ನಿರ್ಣಯವನ್ನು ಪಶ್ಚಿಮ ಬಂಗಾಳ ಸರಕಾರ ಕೈಗೊಂಡಿಲ್ಲ ಎಂದು ಸಿಐಟಿಯುನ ಪ.ಬಂಗಾಳ ಪ್ರಧಾನ ಕಾರ್ಯದರ್ಶಿ ಚಿತ್ರಬ್ರತ ಮುಜುಂದಾರ್ ಸ್ಪಷ್ಟಪಡಿಸಿದರು.

"ಮಣ್ಣಿನ ಮಗ" ದೇವೇಗೌಡರ ಆಡಳಿತ ಎತ್ತ ಸಾಗಿದೆ?

ಪುಟ 1 ರಿಂದ

ಈ ಎಲ್ಲಾ ವಾಸ್ತವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಜನತಾದಳ ಅಧಿಕಾರ ನಡೆಸುತ್ತ ಬಂದ ಕಳೆದ ಆರು ತಿಂಗಳುಗಳಲ್ಲಿ ದೇವೇಗೌಡರ ಸರಕಾರ ಯಾವ ರೀತಿಯಲ್ಲಿ ಅಧಿಕಾರ ನಡೆಸುತ್ತಿದೆ, ಬಿಜೆಪಿ, ಕಾಂಗ್ರೆ ಪಕ್ಷಗಳ ಪರಿಸ್ಥಿತಿಗಳೇನುವುದು ವಿಶ್ಲೇಷಣೆ ಮಾಡಿದೆ. ರಾಷ್ಟ್ರೀಯ ರಾಜಕಾರಣದ ಹಿತದೃಷ್ಟಿಯಿಂದ ಕಾಂಗ್ರೆ ಮತ್ತು ಬಿಜೆಪಿಯ ವಿರುದ್ಧ ರಾಷ್ಟ್ರೀಯ ರಂಗ-ಎಡರಂಗಗಳ ಮೈತ್ರಿಯನ್ನು ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಇನ್ನಷ್ಟು ದೃಢಗೊಳಿಸಿ, ಕರ್ನಾಟಕದಲ್ಲಿ ಅದು ಬಲಗೊಂಡು ಅಖಿಲ ಭಾರತ ಮಟ್ಟದಲ್ಲಿ ಅದು ಸಹಾಯವಾಗಬೇಕಾಗಿದ್ದರೆ, ದೇವೇಗೌಡ ಸರಕಾರ ಅನುಸರಿಸುತ್ತಿರುವ ನೀತಿ, ಧೋರಣೆ ರಾಷ್ಟ್ರೀಯರಂಗ-ಎಡರಂಗಕ್ಕೆ ಮಾರಕವಾಗಿ ಕಾಂಗ್ರೆ-ಬಿಜೆಪಿಗೆ ಸಹಾಯಕವಾಗುತ್ತದೆಂಬುದನ್ನು ತಿಳಿಯಪಡಿಸಿ ಸರಕಾರದ ಧೋರಣೆಯಲ್ಲಿ ಬದಲಾವಣೆ ಉಂಟು ಮಾಡುವ ದೃಷ್ಟಿಯಿಂದ ಸಾರ್ವಜನಿಕ ಸಭೆಗಳಲ್ಲಿ ಎಚ್ಚರಿಕೆ ನೀಡುವ, ವ್ಯಕ್ತಿಗತ ಮಾತುಕತೆಗಳಲ್ಲಿ ತಿಳಿಸಿ ಹೇಳುವ ಕೆಲಸವನ್ನು ಸಿಪಿಐ(ಎಂ) ಮುಖಂಡರು ಮಾಡುತ್ತಿದ್ದಾರೆ.

ಇದಕ್ಕೆ ಪೂರಕವಾಗಿ ವಿಜ್ಞಾನಿಗಳ, ಕಲಾಕಾರರ, ಬುದ್ಧಿಜೀವಿಗಳ ಮೂಲಕವೂ ದುಡಿಯುವ ಜನತೆಯ, ರೈತರ, ಮಧ್ಯಮ ವರ್ಗದವರಿಂದಲೂ ದೇವೇಗೌಡರ ಸರಕಾರದ ಮೇಲೆ ಒತ್ತಡ ತಂದು ಅವರು ಅನುಸರಿಸುತ್ತಿರುವ ಅಪಾಯಕಾರಿ ಧೋರಣೆಗಳನ್ನು ಬಿಟ್ಟುಕೊಡುವಂತೆ ಮಾಡುವ ಉದ್ದೇಶದಿಂದ ಜುಲೈ 7ರಂದು ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯ ಕುರಿತು ಸಮಾವೇಶ ನಡೆಸಲು, ಜುಲೈ 2ರಂದು ಬೆಂಗಳೂರಿನಲ್ಲಿ ಕೃಷಿ ಕೂಲಿಗಾರರ-ರೈತರ ಸಮಾವೇಶ ನಡೆಸಲು, ಜುಲೈ 13ರಂದು ಮಂಗಳೂರಿನಲ್ಲಿಅಸಂಘಟಿತ ಕಾರ್ಮಿಕರ ಸಮಾವೇಶ ನಡೆಸಲು ಹಾಗೆಯೇ ಜುಲೈ-ಆಗಸ್ಟ್ ತಿಂಗಳಲ್ಲಿ ಭೀಮರಾಯನ ಗುಡಿಯಲ್ಲಿ ನೀರಾವರಿ ಸಮಾವೇಶ, ಹುಬ್ಬಳ್ಳಿಯಲ್ಲಿ ಭೂಮಿಗಾಗಿ ಸಮಾವೇಶಗಳನ್ನು ನಡೆಸುವ ನಿರ್ಣಯ ಕೈಗೊಂಡಿದೆ.

ಮಾತ್ರವಲ್ಲ, ಸಾರ್ವಜನಿಕರಲ್ಲಿ ತಿಳುವಳಿಕೆ ಉಂಟು ಮಾಡುವ ದೃಷ್ಟಿಯಿಂದ ರಾಜ್ಯಾದ್ಯಂತ ಪ್ರಚಾರ-ಪ್ರಕ್ಷೋಭೆ ನಡೆಸಿ, ಅವುಗಳ ಮೂಲಕ ಕಾಂಗ್ರೆ ಪಕ್ಷದಲ್ಲಿಯ ಒಡಕು, ಬಿಜೆಪಿಯ ಚಟುವಟಿಕೆಗಳು, ಜನತಾದಳದ ನಿಲುಮೆ, ರಾಜ್ಯದಲ್ಲಿ ಜನತಾದಳ ಸರಕಾರದ ಕಾರ್ಯ ವೈಖರಿ ಹಾಗೇ ಇವುಗಳ ಕುರಿತು ಸಿಪಿಐ(ಎಂ) ಪಕ್ಷದ ನಿಲುಮೆಗಳನ್ನು ತಿಳಿಸಿ ಹೇಳಿ, ದೇಶದಲ್ಲಿ ರಾಷ್ಟ್ರೀಯ ರಂಗ-ಎಡರಂಗಗಳನ್ನು ಬಲಗೊಳಿಸಲು ದೇವೇಗೌಡರ ಸರಕಾರ ಜನಪರವಾಗಿ ಕೇಂದ್ರ ಸರಕಾರದ ನೀತಿಯ ವಿರುದ್ಧವಾದ ಆಡಳಿತೆಯನ್ನು ನಡೆಸಿಕೊಂಡು ಹೋಗುವ ಅವಶ್ಯಕತೆಯನ್ನು ತಿಳಿಸಿ ಹೇಳುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಆ ಮೂಲಕ ದೇವೇಗೌಡರ ಆಡಳಿತೆಯಲ್ಲಿ ಬದಲಾವಣೆ ತರುವ ಪ್ರಯತ್ನ ಮಾಡಬೇಕಾಗಿದೆ.